ದಾವಣಗೆರೆ ಜಿಲ್ಲೆಯ ಚಿತ್ರಕಲೆ

ಎಂ.ಫಿಲ್. ಪದವಿಗಾಗಿ ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಕಿರು ಸಂಶೋಧನ ಪ್ರಬಂಧ

ಸಂಶೋಧಕ
ಸಂತೋಷ ಕುಮಾರ ಕುಲಕರ್ಣಿ

ಮಾರ್ಗದರ್ಶಕರು
ಪ್ರೊ. ಅಶೋಕ .ಟಿ. ಅಕ್ಕಿ
ಪ್ರಾಚಾರ್ಯರು

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ.
೨೦೦೮



444

ದಾವಣಗೆರೆ ಜಿಲ್ಲೆಯ ಚಿತ್ರಕಲೆ

ಎಂ.ಫಿಲ್. ಪದವಿಗಾಗಿ ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಕಿರು ಸಂಶೋಧನ ಪ್ರಬಂಧ

ಸಂಶೋಧಕ
ಸಂತೋಷ ಕುಮಾರ ಕುಲಕರ್ಣಿ

ಮಾರ್ಗದರ್ಶಕರು
ಪ್ರೊ. ಅಶೋಕ .ಟಿ. ಅಕ್ಕಿ
ಪ್ರಾಚಾರ್ಯರು.
ಪಿ.ಜಿ. ಸೆಂಟರ್, ವಿಜಯ ಕಲಾ ಮಂದಿರ
ಗದಗ.

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ

೨೦೦೮

ಪ್ರಮಾಣ ಪತ್ರ

"ದಾವಣಗೆರೆ ಜಿಲ್ಲೆಯ ಚಿತ್ರಕಲೆ" ಎಂಬ ಶೀರ್ಷಿಕೆಯ ಕಿರು ಸಂಶೋಧನ ಪ್ರಬಂಧವನ್ನು ಪ್ರೊ. ಅಶೋಕ .ಟಿ. ಅಕ್ಕಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: ೩೧ ಅಕ್ಟೋಬರ್ ೨೦೦೮.
ಸ್ಥಳ : ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ.

(ಸಂತೋಷ ಕುಮಾರ ಕುಲಕರ್ಣಿ)
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ.

ಪ್ರಮಾಣ ಪತ್ರ

ಸಂತೋಷ ಕುಮಾರ ಕುಲಕರ್ಣಿ ಇವರು ಬರೆದು ಸಾದರಪಡಿಸಿದ **"ದಾವಣಗೆರೆ ಜಿಲ್ಲೆಯ ಚಿತ್ರಕಲೆ"** ಎಂಬ ಶೀರ್ಷಿಕೆಯ ಕಿರು ಸಂಶೋಧನ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು. ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: ೩೧ ಅಕ್ಟೋಬರ್ ೨೦೦೮.
ಸ್ಥಳ : ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ

ಪ್ರೊ. ಅಶೋಕ ಟಿ. ಅಕ್ಕಿ
ಪ್ರಾಚಾರ್ಯರು,
ಪಿ.ಜಿ. ಸೆಂಟರ್, ವಿಜಯ ಕಲಾ ಮಂದಿರ
ಗದಗ.

ಮುಖ್ಯಸ್ಥರ ದೃಢೀಕರಣ

ಶ್ರೀ ಸಂತೋಷ ಕುಮಾರ ಕುಲಕರ್ಣಿ ಇವರು ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್ ವಿದ್ಯಾರ್ಥಿಯಾಗಿ ಪ್ರವೇಶ ಪಡೆದು ಅವರು ಮೊದಲ ಹಂತದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇದೀಗ ತಮ್ಮ ಕಿರು ಪ್ರಬಂಧವನ್ನು ಸಲ್ಲಿಸುತ್ತಿದ್ದಾರೆ. ಪ್ರೊ. ಅಶೋಕ .ಟಿ. ಅಕ್ಕಿ, ಪ್ರಾಚಾರ್ಯರು, ಪಿ.ಜಿ. ಸೆಂಟರ್, ವಿಜಯ ಕಲಾ ಮಂದಿರ, ಗದಗ. ಅವರ ಮಾರ್ಗದರ್ಶನದಲ್ಲಿ ತಮ್ಮ ಕಿರುಪ್ರಬಂಧವನ್ನು **'ದಾವಣಗೆರೆ ಜಿಲ್ಲೆಯ ಚಿತ್ರಕಲೆ'** ಎಂಬ ವಿಷಯದ ಮೇಲೆ ಸಿದ್ದಪಡಿಸಿ ಆರು ಪ್ರತಿಗಳಲ್ಲಿ ವಿಭಾಗದ ಮೂಲಕ ಅಧ್ಯಯನಾಂಗಕ್ಕೆ ಸಲ್ಲಿಸುತ್ತಿದ್ದು ಮುಂದಿನ ಕ್ರಮಕ್ಕೆ ಕಿರು ಪ್ರಬಂಧಗಳನ್ನು ಅಧ್ಯಯನಾಂಗಕ್ಕೆ ಸಲ್ಲಿಸಲಾಗುತ್ತಿದೆ.

ದಿನಾಂಕ: ೩೧ ಅಕ್ಟೋಬರ್ ೨೦೦೮.
ಸ್ಥಳ : ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ.

(**ಡಾ. ಎಸ್.ಸಿ. ಪಾಟೀಲ್.**)
ಮುಖ್ಯಸ್ಥರು, ದೃಶ್ಯಕಲಾ ವಿಭಾಗ.
ಡೀನ್, ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ,
ಹಂಪಿ.

ದಾವಣಗೆರೆ ಜಿಲ್ಲೆಯ ಚಿತ್ರಕಲೆ

ಅಧ್ಯಾಯ: ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ.

ಮಾನವನು ಭಾವನಾ ಜೀವಿಯಾದಂತೆಲ್ಲಾ ತನ್ನೊಳಗಿನಿಂದ ಉತ್ಕಟವಾದ ಎಲ್ಲಾ ತರಹದ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ನಿಟ್ಟಿನಲ್ಲಿ ಕಂಡುಕೊಂಡ ಮಾರ್ಗವೇ ಕಲೆ ಅಥವಾ ಲಲಿತಕಲೆ ಎಂದು ಗುರ್ತಿಸಿಕೊಂಡು ನಮಗೆ ಭೂಮಂಡಲದಲ್ಲಿನ ಪ್ರಾಂತ್ಯ ಪ್ರದೇಶಗಳಿಗನುಗುಣವಾಗಿ ಬೆಳೆದು ಬಂದ ನಾಗರೀಕ ಬದುಕಿನ ಸಾಂಸ್ಕೃತಿ, ವ್ಯವಹಾರಿಕ, ಭೌತಿಕ ಮತ್ತು ಅಭೌತಿಕ ನೆಲೆಯಲ್ಲಿ ಮೂಡಿದ ವೈವಿಧ್ಯತೆಯ ಅಭಿವ್ಯಕ್ತಿಯು ಆಯಾ ಪ್ರದೇಶದ ವಿಶಿಷ್ಟತೆಯನ್ನು ಪ್ರತಿಪಾದಿಸುವ ಪ್ರತಿನಿಧಿಯಾಗಿ ನಮ್ಮೊಂದಿಗಿದೆ. ಅದಕ್ಕೆ ನಮ್ಮ ನೆಲವೂ ಹೊರತಲ್ಲ. ಹಿರಿಯ ಕಲಾವಿದರಾದ ಹಾಗೂ ಕಲಾ ಸಾಹಿತಿಯೂ ಆಗಿರುವ ಡಾ॥ ಯಾದಪ್ಪ ಪರದೇಶಿಯವರ ಹೇಳಿಕೆಯಂತೆ 'ಕರ್ನಾಟಕದ ಬೇರೆ ಬೇರೆ ಪ್ರದೇಶದಲ್ಲಿ ರಚನೆಯಾದ ಚಿತ್ರಕಲಾ ಶೈಲಿ, ವಿನ್ಯಾಸ ಮತ್ತು ವಸ್ತು ವಿಷಯಗಳು ವೈವಿಧ್ಯತೆಯಿಂದ ಕೂಡಿದೆ ಈ ವೈವಿಧ್ಯತೆಗೆ ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಮತ್ತು ಭೌಗೋಳಿಕ ಹಿನ್ನೆಲೆ ಕಾರಣವೆನ್ನಬಹುದು'[೧].

ಈ ನಿಟ್ಟಿನಲ್ಲಿ ಕನ್ನಡ ನೆಲದಲ್ಲಿ ಮೂಡಿಬಂದ ಹಲವು ವೈವಿಧ್ಯ ಕಲೆಗಳನ್ನು ಕಲಾ ಶೈಲಿಗಳನ್ನು ನೋಡಿದಾಗ ಅವುಗಳ ಭವ್ಯತೆ ಮುಖ್ಯವಾಗಿ ಅವುಗಳಲ್ಲಿನ ಸೌಂದರ್ಯ ಪ್ರಜ್ಞೆ ಎಲ್ಲರನ್ನು ತನ್ನತ್ತ ಸೆಳೆದುಕೊಳ್ಳುತ್ತದೆ. ಅಂತಹ ಕಲೆಯು ತನ್ನಲ್ಲಿಯ ಮೂಲ ಉದ್ದೇಶ ಒಂದೇ ಆದರೂ ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆಯಾಗುವುದು ಕಂಡು ಬರುತ್ತದೆ. ಹಾಗೆಯೇ ಇಂತಹ ಬದಲಾವಣೆಗೆ ದಾವಣಗೆರೆ ಜಿಲ್ಲೆಯು ಹೊರತಲ್ಲ. ಇಲ್ಲಿ ತನ್ನದೇ ಆದ ವಿಭಿನ್ನತೆಯಿಂದ ಮೆರೆಯುವ ಇಲ್ಲಿನ ಕಲಾ ಪ್ರಕಾರಗಳಲ್ಲಿನ ವಿಶೇಷತೆಯನ್ನು ಗ್ರಹಿಸುವುದರೊಂದಿಗೆ ಅದರೊಳಗಿನ ವಸ್ತು ವಿಷಯವನ್ನು ಸಾಮಾಜಿಕ, ಧಾರ್ಮಿಕ, ಅಂಶಗಳ ಗ್ರಹಿಸುವುದರೊಂದಿಗೆ ಅದರೊಳಗಿನ ವಸ್ತುವಿಷಯವನ್ನು ಸಾಮಾಜಿಕ, ಧಾರ್ಮಿಕ, ಅಂಶಗಳ ಆಧಾರದ ಮೇಲೆ ವರ್ಗೀಕರಿಸಿ ಅಧ್ಯಾಯ ಮಾಡಲು ಈ ಪ್ರಯತ್ನ. ಎಲ್ಲಾ ಕಲಾ ವಿದ್ಯಾರ್ಥಿಗಳಿಂದ, ಸಂಶೋಧಕರಿಂದ

---

೧. ಡಾ॥ ಯಾದಪ್ಪ ಪರದೇಶಿ, ನಿಜದ ನೆಲೆ, ಕರ್ನಾಟಕದ ಭಿತ್ತಿ ಚಿತ್ರಕಲೆ, ಪು.ಸಂ. ೪೬೦.

ನಡೆಯಬೇಕಾದ ವಿಷಯವಾಗಿರುತ್ತದೆ. ಮಾನವನು ನಾಗರೀಕನಾದಂತೆಲ್ಲಾ ತಾನು ಬೇರೆ ಜೀವಿಗಳಿಗಿಂತಲೂ ಭಿನ್ನ ಎಂದು ಅವನು ಯೋಚಿಸಿದಂತೆಲ್ಲಾ ಕಲೆಯು ಕೂಡ ಮಾನವನ ಸೃಜನಾಶೀಲ ಮಾನಸಿಕ ಒತ್ತಡದಿಂದ ಹೊರಹೊಮ್ಮುತ್ತದೆ ಎಂಬುವಂತೆ ಇದಕ್ಕೆ ಉತ್ತೇಜನಕಾರಿ ಶಕ್ತಿಯಾಗಿರುತ್ತದೆ. ಹಾಗೆಯೇ ಅಂತಹ ಮಾನಸಿಕ ಒತ್ತಡದಿಂದ ಹೊರಹೊಮ್ಮಿದ ಕಲೆಯು ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆ ಪ್ರಭಾವದಿಂದಾಗಿ ಬೇರೆ ಬೇರೆ ಆಯಾಮಗಳಲ್ಲಿ ಅಭಿವ್ಯಕ್ತಿಗೊಂಡಿರುವುದು ಕಂಡು ಬರುತ್ತದೆ. ಹಾಗೆಯೇ ಆಯಾ ಪ್ರದೇಶದಲ್ಲಿನ ಪರಿಸರದ ಪ್ರಭಾವವೂ ಕೂಡ ತನ್ನೊಳಗೆ ಮೈಗೂಡಿಸಿಕೊಂಡು ಅಭಿವ್ಯಕ್ತಿಗೊಂಡಿರುತ್ತದೆ.

ಲಲಿತಕಲೆಯೆಂದು ಕರೆಯಲ್ಪಡುವ ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪಕಲೆ. ಸಂಗೀತ ಕಲೆ, ನಾಟ್ಯ ಕಲೆ, ನಾಟಕ ಕಲೆ ಮುಂತಾದವುಗಳು ಆಯಾ ಪರಿಸರಕ್ಕೆ ತಕ್ಕಂತೆ ಬದಲಾವಣೆಯಾಗಿವೆ. ಇವುಗಳಲ್ಲಿ ಮೊದಲಿನ ಚಿತ್ರಕಲೆ ಶಿಲ್ಪಕಲೆ, ವಾಸ್ತುಶಿಲ್ಪಗಳನ್ನು ದೃಶ್ಯಕಲೆಯೆಂದು ಕರೆಯುತ್ತೇವೆ. ನಂತರದ ಸಂಗೀತ ಕಲೆ, ನಾಟ್ಯ ಕಲೆ ಹಾಗೂ ಸಾಹಿತ್ಯ ಕಲೆಯನ್ನು ಪ್ರದರ್ಶನ ಕಲೆ ಎಂದು ಕರೆಯುತ್ತೇವೆ, ಲಲಿತ ಕಲೆಗಳು ನೋಟಕ್ಕೆ ಒಂದೇ ಜಾತಿಗೆ ಅಥವಾ ಒಂದೇ ಗುಂಪಿಗೆ ಸೇರಿದಂತೆ ಕಂಡರೂ ಅವುಗಳಲ್ಲಿ ಸಮನ್ವಯ ಸಮತೂಕಗಳಲ್ಲಿ ಇವುಗಳ ಸ್ವಭಾವ, ಸ್ವರೂಪ ಹಾಗೂ ಸಾಮರ್ಥ್ಯಗಳಲ್ಲಿ ಅಸಾಧಾರಣವಾದ ವೈವಿಧ್ಯತೆಗಳು ಕಾಣುತ್ತವೆ. ಯಾವ ಕಲೆಯ ಅಭಿವ್ಯಕ್ತಿಯ ಕ್ರಿಯೆ ನಡೆಯುತ್ತಿರುವಾಗಲೇ ನಾವುಗಳು ಆ ಕಲೆಯನ್ನು ಅಸ್ವಾಧಿಸಲು ಅಥವಾ ಅನುಭವಿಸಲು ಸಾಧ್ಯವಾಗುತ್ತದೆಯೋ ಅಂಥ ಕಲೆಗಳನ್ನು ಪ್ರದರ್ಶನ ಕಲೆಯೆಂದು ಕರೆಯುತ್ತೇವೆ. ಅದರಂತೆ ಯಾವ ಕಲೆಯ ಅಭಿವ್ಯಕ್ತಿಯ ಕಾರ್ಯವು ಸಂಪೂರ್ಣವಾಗಿ ಮುಗಿದಾದ ಮೇಲೆ ನಾವು ಆ ಕಲೆಯನ್ನು ಅನುಭವಿಸಲು, ಆಸ್ವಾದಿಸಲು ಸಾಧ್ಯವೋ ಅಂತಹ ಕಲೆಗಳನ್ನು ದೃಶ್ಯಕಲೆಯೆಂದು ಕರೆಯಲ್ಪಡುತ್ತವೆ. ದೃಶ್ಯ ಕಲೆಗಳ ಕ್ರಿಯೆಯು ಏಕಾಂತದಲ್ಲಿ ನಡೆಯುವಂಥದ್ದಾಗಿರುತ್ತದೆ ಹಾಗೂ ಪ್ರದರ್ಶನಕಲೆಗಳ ಕ್ರಿಯೆ ಲೋಕಾಂತದಲ್ಲಿ ನಡೆಯುವಂತದ್ದು. ದೃಶ್ಯ ಕಲಾಕೃತಿಯಲ್ಲೂ ಚಿತ್ರ ಅಥವಾ ಶಿಲ್ಪವು ಪ್ರಮಾಣಬದ್ಧವಾಗಿದ್ದು ಸೌಂದರ್ಯವನ್ನು ಅಭಿವ್ಯಕ್ತಿಸುವಂತಿರಬೇಕು. ಒಟ್ಟಾರೆಯಾಗಿ ಚಿತ್ರಕಲೆಯನ್ನು ಪರಿಚಯಿಸಲು ಮತ್ತು ಅವುಗಳ ಬಗ್ಗೆ ವಿವರವಾಗಿ ಹೇಳಲು, ಅದರದೇ ಆದ ಒಂದು ಪರಿಭಾಷೆ ಬೇಕಾಗುತ್ತದೆ ಎಂದು ಹೇಳಬೇಕಾಗುತ್ತದೆ.

ನಮ್ಮ ಚಿತ್ರಕಲಾ ಪರಂಪರೆಯನ್ನು ಗಮನಿಸುತ್ತಾ ಹೋದಂತೆ ಗುಹಾ ಮಾನವ ತನ್ನ ಭಾವನಾತ್ಮಕತೆ ಕಲ್ಪನೆಗಳನ್ನು ಚಿತ್ರಗಳ ಮೂಲಕ ದಾಖಲಿಸಿರುವುದನ್ನು ನಾವು ಕಾಣುತ್ತೇವೆ. ಆದರೆ ಆ ಕಾಲದಲ್ಲಿ ರಚಿತವಾದ ಚಿತ್ರಗಳಲ್ಲಿ ಕಲಾಕೌಶಲ್ಯದ ಪ್ರಭಾವ ಕಾಣಸಿಗುವುದಿಲ್ಲ. ಆದರೆ ಅವು ಅತ್ಯಂತ ಸೃಜನಶೀಲ ಕಲಾಕೃತಿಗಳಾಗಿ ಹೊರಹೊಮ್ಮಿವೆ. ಪ್ರಾಗೈತಿಹಾಸಿಕ ಕಾಲದಲ್ಲಿ ಆದಿ ಮಾನವರಿಂದ ಚಿತ್ರಿಸಲ್ಪಟ್ಟ ಚಿತ್ರಗಳು ಅವರ ಜೀವನ ಶೈಲಿ, ಜೀವನದ ವಿಧಾನಗಳು ಹಾಗೂ

ಧಾರ್ಮಿಕ ಹಾಗೂ ಆಂತರಿಕ ವಿಷಯಗಳನ್ನು ತಿಳಿಸಿಕೊಡುತ್ತವೆ. ಹಾಗೆಯೇ ಚಿತ್ರಕಲೆಯ ಪ್ರಥಮ ಭಾವವನ್ನು ತಿಳಿಸಿಕೊಡುವಂಥದ್ದಾಗಿದೆ. ಆದಿ ಮಾನವನಿಂದ ರಚಿತವಾದ ಚಿತ್ರಗಳು ಹೆಚ್ಚಾಗಿ ಗುಡ್ಡ-ಬೆಟ್ಟ, ಗುಹೆಗಳ ಗೋಡೆಗಳ ಮೇಲೆ ಹೆಚ್ಚಾಗಿ ಕಂಡುಬರುತ್ತವೆ. ತಾನು ಬೇಟೆಯಾಡಿದ ರೀತಿ ಪ್ರಾಣಿಗಳ ಚಿತ್ರಗಳು ಹಾಗೂ ಅವರ ಧಾರ್ಮಿಕ ಆಚರಣೆಗಳಲ್ಲಿ ಅವರುಗಳು ನರ್ತನ ಮಾಡುವ ವಿವಿಧ ರೀತಿಯ ಭಂಗಿಗಳು ಅವರ ಚಿತ್ರಗಳಲ್ಲಿ ಸಾಮಾನ್ಯವಾಗಿ ಕಾಣಬಹುದಾಗಿರುವಂತಿದೆ. ಗುಹಾ ಚಿತ್ರಗಳಿಗೆ ವರ್ಣಗಳನ್ನು ಸಹ ಉಪಯೋಗಿಸಿ ಚಿತ್ರಿಸಿದ್ದಾರೆ. ಗುಹಾ ಚಿತ್ರಗಳನ್ನು ವರ್ಣ ಚಿತ್ರಗಳು ಹಾಗೂ ವರ್ಣ ರಹಿತ ಚಿತ್ರಗಳೆಂದು ಎರೆಡು ಬಗೆಯಲ್ಲಿ ವಿಂಗಡಿಸಬಹುದು. ಆದಿ ಮಾನವನು ಕಲ್ಲಿನಿಂದ ತಾನು ತಯಾರಿಸಿದ ಆಯುಧಗಳನ್ನು ಚಿತ್ರಗಳನ್ನು ರಚಿಸಲು ಉಪಯೋಗಿಸಿ ತನ್ನಲ್ಲಿಯ ಭಾವನೆಗಳನ್ನು ಅದರಲ್ಲಿ ವ್ಯಕ್ತಪಡಿಸಲು ಪ್ರಯತ್ನಿಸಿದನು. ಇದರಿಂದ ಪ್ರಕೃತಿಯು ಆದಿಯಿಂದಲೂ ಮಾನವನ ಮೇಲೆ ತನ್ನ ಪ್ರಭಾವವನ್ನು ಬೀರುತ್ತಲೇ ಇದೆ ಎಂದು ತಿಳಿಯಬಹುದಾಗಿದೆ. ಮಾನವನು ಪ್ರಕೃತಿಯನ್ನು ನೋಡಿ ಉಂಟಾದ ಆನಂದವನ್ನು ವಿವಿಧ ಮಾಧ್ಯಮಗಳ ಮೂಲಕ ವ್ಯಕ್ತಪಡಿಸುತ್ತಲೇ ಬಂದಿರುವನು. ಸ್ಥೂಲವಾಗಿ ನೋಡಿದರೆ ಕಲೆಯು ಮನುಷ್ಯನ ಸೌಂದರ್ಯ ಅನುಭವದ ಪ್ರತಿಬಿಂಬ. ಅನಾದಿಕಾಲದಿಂದಲೂ ಮನುಷ್ಯನಲ್ಲಿ ಮೂಢನಂಬಿಕೆಗಳು, ಮಾಟಮಂತ್ರ ಮುಂತಾದವುಗಳು ಆಚರಣೆಯಲ್ಲಿವೆ. ಅವುಗಳೂ ಸಹ ಅವನಲ್ಲಿ ಹಲವಾರು ಪ್ರಭಾವಗಳನ್ನು ಬೀರಿ ಅವನಲ್ಲಿ ಚಿತ್ರರಚನೆಗೆ ಪ್ರೇರಣೆಯಾಗಿವೆ. ಪ್ರಾಗ್ಯೈತಿಹಾಸಿಕ ಕಾಲದ ಚಿತ್ರಗಳಲ್ಲಿರುವ ನೈಜತೆಯಾಗಲಿ, ಭಾವ ಗರ್ಭಿತ ವಿನ್ಯಾಸವಾಗಲಿ ಅಥವಾ ಪ್ರಮಾಣ ಭದ್ಧತೆಯಾಗಲಿ ಅಷ್ಟಾಗಿ ಕಾಣುವುದಿಲ್ಲ. 'ಆದಿ ಮಾನವನ ಈ ಗುಹಾ ಚಿತ್ರ ರಚನೆ ಪ್ರಾರಂಭದಲ್ಲಿ ಸಹಜವಾಗಿ ಅಭಿವ್ಯಕ್ತಗೊಂಡ ಸೌಂದರ್ಯದ ಹಿನ್ನೆಲೆಯಲ್ಲಿ ರಚನೆಯಾದರೂ ನಂತರದಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿಯೂ ರೂಪುಗೊಳ್ಳತೊಡಗಿದಂತೆ ಕಂಡು ಬರುತ್ತವೆ. ಪುರಾತನ ಗುಹಾಚಿತ್ರಗಳು ನೈರುತ್ಯ ಯುರೋಪಿನಲ್ಲಿ ಕಂಡು ಬಂದಿವೆ. ಹಾಗೆಯೇ ಗಿಮಯುಗ ಕಾಲದ ಗುಹಾವರ್ಣ ಚಿತ್ರಗಳು ನೈರುತ್ಯ ಯುರೋಪಿನಲ್ಲಿ ಕಂಡು ಬಂದಿವೆ. ಹಾಗೆಯೇ ಹಿಮಯುಗ ಕಾಲದ ಗುಹಾವರ್ಣ ಚಿತ್ರಗಳು ದಕ್ಷಿಣಯರೋಪಿನಲ್ಲಿ ಸುಮಾರು ಒಂದು ನೂರು ಸ್ಥಳಗಳಲ್ಲಿ ಕಂಡು ಬಂದಿವೆ. ಆಫ್ರಿಕಾ, ನಮೀಬಿಯಾ, ಲೆಸೋಲಥ, ರಭ್ರಾಕಿಬಿಯಾಗ, ಜಿಂಬಾಬ್ವೆ ಮತ್ತು ತಾಂಜಾನಿಯಾಗಳಲ್ಲಿ ವಿಫಲ ಸಂಖ್ಯೆಯ ಗುಹಾಚಿತ್ರಣಗಳ ನೆಲೆಗಳಿವೆ'[೨] ಅದೇ ರೀತಿಯಲ್ಲಿ ಭಾರತೀಯ ನೆಲೆಗಳಲ್ಲಿಯೂ ಸಹ ಹಲವಾರು ಗುಹಾಚಿತ್ರಗಳು ಚಿತ್ರಿಸಲ್ಪಟ್ಟಿವೆ. ಕರ್ನಾಟಕದಲ್ಲಿಯೂ ಸಹ ಹಲವಾರು ಗುಹಾಚಿತ್ರಗಳು ಚಿತ್ರಿಸಲ್ಪಟ್ಟಿವೆ. ಕರ್ನಾಟಕದಲ್ಲಿ ಬಾದಾಮಿ, ಮಹಾಕೂಟ, ಐಹೊಳೆ, ಚಿತ್ರದುರ್ಗ, ಹಂಪಿಗಳಲ್ಲಿಯೂ ಸಹ ಬಿತ್ತಿ ಹಾಗೂ ಗುಹಾಚಿತ್ರಗಳನ್ನು ನೋಡಬಹುದಾಗಿದೆ. ಇದೇ ರೀತಿಯಾಗಿ ಮಾನವನ ಅಭಿವ್ಯಕ್ತ ರೂಪಗಳಲ್ಲೊಂದಾದ ಚಿತ್ರಕಲೆಯಲ್ಲಿ ಹಲವಾರು

---

೨. ಡಾ॥ ಯಾದಪ್ಪ ಪರದೇಶಿ, ನಿಜದ ನೆಲೆ, ಕರ್ನಾಕದ ಭಿತ್ತಿ ಚಿತ್ರಕಲೆ, ಪು.ಸಂ. ೪೪೭.

ಬದಲಾವಣೆಗಳಾಗುತ್ತಾ ಬಂದಿತು. ಬದಲಾವಣೆಯಾದ ಮಾನವನ ಚಿತ್ರಕಲೆಯನ್ನು ಈ ರೀತಿಯಾಗಿ ವಿಂಗಡಿಸಬಹುದು.

* ಆದಿಮಾನವನ ಚಿತ್ರಕಲೆ
* ಬುಡಕಟ್ಟು ಚಿತ್ರಕಲೆ
* ಜನಪದ ಚಿತ್ರಕಲೆ
* ಶಿಷ್ಟಪದ ಚಿತ್ರಕಲೆ

'ಕಲೆಯ ಪ್ರಧಾನ ಕಾರ್ಯವನ್ನು ಹೇಳುವುದಾದರೆ ಮನಸ್ಸು ಪ್ರಫುಲ್ಲಗೊಳ್ಳುವಂತೆ. ಆನಂದವನ್ನುಂಟು ಮಾಡಬೇಕು, ಅಲ್ಲದೇ ಕಲೆಗಳು ನೈತಿಕ ಚಟುವಟಿಕೆಯಾಗಿದೆ'[೩].

ಉದ್ದೇಶ:

ಪ್ರಸ್ತುತ ಸ್ಥಿತಿಯಲ್ಲಿ ಕಲೆಯ ಕುರಿತಾಗಿ ಹಾಗೂ ಕಲಾವಿದನ ಕುರಿತಾದ ವಿವರ, ಅವರ ಭಾವನಾತ್ಮಕ ತುಡಿತಗಳನ್ನು ಹಾಗೂ ಹಲವಾರು ಪ್ರಕಟಿತ ವಿಮರ್ಶೆಗಳನ್ನು ಇಂದು ನಾವು ಪರಾಮರ್ಶಿಸುವದು ಸೂಕ್ತವಾಗಿದೆ. ನಾಡಿನ ಹಲವಾರು ಭಾಗಗಳಲ್ಲಿರುವ ಸ್ಮಾರಕಗಳು, ಅವುಗಳನ್ನು ರಚಿಸಿದ ಕಲಾವಿದರು, ಈಗಿನ ಕಲಾವಿದರ ಸಾಧನೆ, ಕಲಾಕ್ಷೇತ್ರಕ್ಕೆ ಅವರು ನೀಡಿದಂತಹ ಕೊಡುಗೆಗಳ ಬಗ್ಗೆ ಹಲವಾರು ಅಂಶಗಳು ನಮ್ಮೆಲ್ಲರ ಗಮನಕ್ಕೆ ಬಾರದೇ ಮರೆಯಾಗಿ ಹೋಗುತ್ತಿವೆ. ಇವರ ಸಾಧನೆಗಳು ಹಾಗೂ ಕೃತಿಗಳ ಬಗ್ಗೆ ಮುಂದಿನ ಪೀಳಿಗೆಯವರಿಗೂ ಗೊತ್ತಾಗಬೇಕಾಗಿದೆ. ಉದ್ದಗಲಕ್ಕೂ ಹಬ್ಬಿರುವ ಬೆಟ್ಟಗುಡ್ಡಗಳ ಸಾಲು, ಅಲ್ಲಿ ವಾಸಿಸುತ್ತಿರುವ ಗುಡ್ಡಗಾಡು ಜನರು, ಅವರ ಬದುಕು, ಅವರ ಸಂಸ್ಕೃತಿ, ಹಬ್ಬ ಹರಿದಿನಗಳಲ್ಲಿ ಚಿತ್ರಿಸುತ್ತಿರುವಂತಹ ಚಿತ್ರಗಳು, ಕೆಲವೊಂದು ಶಾಸನ ಸಂಪತ್ತು, ದಾಖಲಾತಿಗಳು, ಸ್ಮಾರಕಗಳು, ಹಲವಾರು ಸ್ಥಳಗಳು, ಅಲ್ಲಿಯ ಕಲಾ ಚಟುವಟಿಕೆಗಳು, ಅಲ್ಲಿಯ ಕಲಾ ಪರಿಸರದ ಬಗ್ಗೆ ತಿಳಿದು ಕೊಳ್ಳುವದು ತುಂಬಾ ಮುಖ್ಯವಾದ ವಿಷಯವಾಗಿದೆ. ನಮ್ಮ ಸಂಸ್ಕೃತಿಯ ಒಂದು ಭಾಗವಾಗಿರುವ ಸ್ಮಾರಕಗಳು, ಚಿತ್ರಗಳ ರಚನಾ ತಂತ್ರಗಳನ್ನು ಅಧ್ಯಯನ ಮಾಡುವುದು ಹಾಗೂ ಗ್ರಾಮೀಣ-ಗುಡ್ಡಗಾಡು ಜನರು ಉಪಯೋಗಿಸುತ್ತಿರುವ ಉಡುಗೆ-ತೊಡುಗೆಗಳು, ಅವರ ಜೀವನ ಶೈಲಿ ಮುಂತಾದವುಗಳನ್ನು ಅಧ್ಯಯನ ಮಾಡಿ ಬೆಳಕಿಗೆ ತರುವದು ಅವಶ್ಯಕವಾಗಿದೆ.

ಒಂದು ದೇಶ, ರಾಜ್ಯ, ಜಿಲ್ಲೆಗಳು, ಊರುಗಳು ಸಾಂಸ್ಕೃತಿಕ ಸಂಪತ್ತಿನ ಆಗರಗಳಾಗಿರುತ್ತವೆ. ಯಾವುದೇ ದೇಶವಾಗಿರಬಹುದು, ನಗರವಾಗಿರಬಹುದು ಅವುಗಳು ತಮ್ಮದೇ ಆದ ರೀತಿಯಲ್ಲಿ ಸಂಸ್ಕೃತಿ, ಕಲೆ-ಆಚಾರ ವಿಚಾರ ಮುಂತಾದವುಗಳನ್ನು ಹೊಂದಿರುತ್ತವೆ. ಅದೇ ರೀತಿಯಲ್ಲಿ ದಾವಣಗೆರೆ ಜಿಲ್ಲೆಯೂ ಸಹ ತನ್ನ ಮಡಿಲಲ್ಲಿ ಹಲವಾರು

೩. ಎನ್. ವಿಶ್ವರೂಪಾಚಾರ, ಕಲಾ ಮನೋವಿಜ್ಞಾನ, ಪು.ಸಂ. ೧೦.

ವಿಷಯಗಳನ್ನು, ಆಚಾರ-ವಿಚಾರಗಳನ್ನು ಹಾಕಿಕೊಂಡಿದೆ. ಇಲ್ಲಿಯ ಸಂಸ್ಕೃತಿ, ಶಿಲ್ಪ-ವಾಸ್ತುಶಿಲ್ಪ, ಚಿತ್ರಕಲೆ, ನಾಟಕ ಮುಂತಾದವುಗಳು ನೋಡುಗರನ್ನು ಕೈ ಬೀಸಿ ಕರೆಯುತ್ತವೆ. ದಾವಣಗೆರೆ ಜಿಲ್ಲೆಯ ನೆಲದಲ್ಲಿ ಏನುಂಟು ಏನಿಲ್ಲ? ಎಂದು ಪ್ರಶ್ನೆ ಬಂದಾಗ ಅದನ್ನು ಒಳಹೊಕ್ಕು ಪರಾಮರ್ಶಿಸಿದಾಗ ಮಾತ್ರ ಇದರ ಇತಿಹಾಸ ಅರ್ಥವಾಗುವುದು. ಈ ಜಿಲ್ಲೆಯಲ್ಲಿರುವ ಪ್ರಾಚ್ಯ ಸಂಸ್ಕೃತಿಗಳು ಕಣ್ಮನಗಳನ್ನು ಆಕರ್ಶಿಸುತ್ತದೆ. ಈ ಜಿಲ್ಲೆಯಲ್ಲಿರುವ ಇತರ ತಾಲೂಕುಗಳು ತಮ್ಮ ಭವ್ಯ ಪರಂಪರೆಯನ್ನು ಹೇಳುತ್ತಾ ಇಲ್ಲಿಯ ಆಚಾರ-ವಿಚಾರಗಳನ್ನು ಸಂಸ್ಕೃತಿಯನ್ನು ನೋಡಿ ಅರಿತುಕೊಳ್ಳಲು ಕೈ ಬೀಸಿ ಕರೆಯುತ್ತವೆ. ಇಲ್ಲಿ ನೋಡಿದಾಗ ಇತಿಹಾಸದ ಮಹತ್ವ ಅರಿವಾಗುತ್ತದೆ. ಇಲ್ಲಿಯ ವಿಶಿಷ್ಟವಾದ ಆಚಾರ-ವಿಚಾರಗಳು, ಹಬ್ಬ ಹರಿದಿನಗಳು, ಜನರ ಬದುಕು, ಕಲೆ-ಚಿತ್ರಕಲೆ, ನಾಟಕ, ಸಂಗೀತ ಮುಂತಾದವುಗಳು ಈ ಜಿಲ್ಲೆಗೆ ಮಹತ್ವದ ಐತಿಹಾಸಿಕ, ನೆಲಗಟ್ಟನ್ನು ತಂದು ಕೊಟ್ಟಿವೆ. ಇದರ ವಿಚಾರವಾಗಿ ಇದುವರೆಗೂ ಯಾವುದೇ ಅಧ್ಯಯನಗಳು ಆಗದೇ ಇರುವ ಹಿನ್ನೆಲೆಯಲ್ಲಿ ಪ್ರಸ್ತುತ ದಾವಣಗೆರೆ ಜಿಲ್ಲೆಯ ಚಿತ್ರಕಲೆ ಎಂಬ ವಿಷಯದ ಕುರಿತು ಇಲ್ಲಿ ಅಧ್ಯಯನವನ್ನು ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ೬೦ ರ ದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗಷ್ಟೇ ತನ್ನ ಶೈವಾವಸ್ಥೆಯನ್ನು ಕಳೆದು ಯೌವ್ವನಕ್ಕೆ ಕಾಲಿಡುತ್ತಿದೆ. ೧೯೮೦ ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳ ಸ್ಥೂಲವಾದ ವಿವರವನ್ನು ಈ ಕೆಳಗೆ ಸಮೀಕ್ಷಿಸಿ ಕೊಡಲಾಗಿದೆ.

೧೯೮೦ ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ.ಎಸ್.ಸಿ.ಪಾಟೀಲರು ೧೯೮೩ ರಲ್ಲಿ ಕರ್ನಾಟಕ ವಿ.ವಿ.ಯ. ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ: ಒಂದು ಅಧ್ಯಯನ**[೪]. ಎಂಬ ಸಂಶೋಧಕ ಕಿರು ಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ ರಲ್ಲಿ ಡಾ. ಬಿ.ಕೆ. ಹಿರೇಮಠರವರು **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೫], ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಾಯಗಳನ್ನು ಮೀಸಲಾಗಿಟ್ಟು ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯನ್ನು ಮುಖ್ಯ

೪. ಡಾ. ಎಸ್.ಸಿ. ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ., ೧೯೮೩
೫. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪಿಹೆಚ್.ಡಿ..ಮ.ಪ್ರ, ಕರ್ನಾಟಕ ವಿ.ವಿ., ೧೯೮೭

ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ ಮಹಾಪ್ರಬಂಧ **ಕರ್ನಾಟಕದ ಜನಪದ ಚಿತ್ರಕಲೆ**[೬] ಈ ಪ್ರಬಂಧವನ್ನು ಡಾ.ಎಸ್.ಸಿ.ಪಾಟೀಲರು ಸಿದ್ಧಪಡಿಸಿದ ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿಗೆ. ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೭], ಬೆಂಗಳೂರು ವಿಶ್ವವಿದ್ಯಾಲಯಕ್ಕೆ, ೧೯೯೭ ರಲ್ಲಿ ಡಾ ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು**[೮] ಬೆಂಗಳೂರು ವಿಶ್ವವಿದ್ಯಾಲಯಕ್ಕೆ, ೧೯೯೭ ರಲ್ಲಿ ಡಾ.ಪುಷ್ಪಾ ದ್ರಾವಿಡ ಇವರು ಮಂಡಿಸಿದ ಅನಿವಾಸಿ **ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು**[೯]. ೨೦೦೦ ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಒಂದು ಅಧ್ಯಯನ**[೧೦], ೨೦೦೨ ರಲ್ಲಿ ಡಾ. ಶಿವಾನಂದ ಬಂಟನೂರು ಇವರ ಕರ್ನಾಟಕದ **ಜನಪದ ಶಿಲ್ಪಕಲೆ, ಒಂದು ಅಧ್ಯಯನ**[೧೧], ೨೦೦೨ ರಲ್ಲಿ ಡಾ.ಗಿರೀಶ ಕುಮಾರ್ ಅವರ **ಬುಡಕಟ್ಟು ಚಿತ್ರಕಲೆ**[೧೨], ೨೦೦೨ ರಲ್ಲಿ ಡಾ.ಲಕ್ಷ್ಮಿದೇವಿ ಗವಾಯಿಯವರ ಕಲಾವಿದ **ಎಂ.ಎ. ಚೆಟ್ಟಿಯವರ ಜೀವನ, ಕಲಾಕೃತಿಗಳು ಒಂದು ಅಧ್ಯಯನ**[೧೩], ೨೦೦೨ ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೧೪], ೨೦೦೨ ರಲ್ಲಿ ಡಾ.ಸೌಮ್ಯ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೫], ೨೦೦೨ ರಲ್ಲಿ ಡಾ. ಪ್ರಮೀಳಾ ಲೋಚನ ಅವರ **ಮೈಂಡ್ ಮ್ಯೂಸಿಕ್ ಆಂಡ್ ಕಲರ್ ಎಕ್ಸಪೋಜಿಸ್ ಆಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್**[೧೬], ೨೦೦೩ ರಲ್ಲಿ ಡಾ. ವೀಣಾ ಶೇಖರ್ ಮಂಡಿಸಿದ **ಎ ಸ್ಟಡಿ ಆಫ್‌ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦)**[೧೭], ೨೦೦೩ರಲ್ಲಿ ಡಾ. ಸಿದ್ಧಲಿಂಗ ಸ್ವಾಮಿ

---

೬. ಡಾ. ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಹೆಚ್.ಡಿ.,ಮ.ಪ್ರ, ೧೯೯೧

೭. ಡಾ. ಅಲ.ಲ.ನರಸಿಂಹನ್: ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ.,ಮ.ಪ್ರ, ಬೆಂಗಳೂರು ವಿ.ವಿ. ೧೯೯೪.

೮. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ತಗಳು, ಪಿಹೆಚ್.ಡಿ.,ಮ.ಪ್ರ, ಕನ್ನಡ ವಿ.ವಿ. ೧೯೯೭

೯. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ.,ಮ.ಪ್ರ, ಬೆಂಗಳೂರು ವಿ.ವಿ., ೧೯೯೭

೧೦. ಡಾ. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪಿಹೆಚ್.ಡಿ.,ಮಪ್ರ, ಕನ್ನಡ ವಿ.ವಿ. ೨೦೦೦.

೧೧. ಡಾ. ಶಿವಾನಂದ ಬಂಟನೂರು : ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ, ಪಿಹೆಚ್.ಡಿ.,ಮ.ಪ್ರ, ಕನ್ನಡ ವಿ.ವಿ. ೨೦೦೨.

೧೨. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ., ಮ.ಪ್ರ, ಕನ್ನಡ ವಿ.ವಿ. ೨೦೦೨.

೧೩. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ.ಎ.ಚೆಟ್ಟಿತವರ ಜೀವನ, ಕಲಾಕೃತಿಗಳು – ಒಚಿದು ಅಧ್ಯಯನ, ಪಿಹೆಚ್.ಡಿ.,ಮ.ಪ್ರ.ಕನ್ನಡ ವಿ.ವಿ. ೨೦೦೨.

೧೪. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ-ಹಂಪಿ ಪತ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆ.ಡಿ..ಮ.ಪ್ರ, ಕನ್ನಡ ವಿ.ವಿ. ೨೦೦೨.

೧೫. ಡಾ. ಸೌಮ್ಯ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರನ್ಸ್ ಟು ಕಾಂಟೆಂಪರರಿ ತಾಂತ್ರಿಕಾ ಆರ್ಟಿಸ್ಟ, ಪಿ.ಹೆಚ್.ಡಿ.,ಮ.ಪ್ರ, ಬೆಂಗಳೂರು. ವಿ.ವಿ. ೨೦೦೩.

೧೬. ಡಾ. ಪ್ರಮೀಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ, ಮ.ಪ್ರ, ಬೆಂಗಳೂರು ವಿ.ವಿ. ೨೦೦೨.

೧೭. ಡಾ. ವೀಣಾ ಶೇಖರ್ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್, ಪಿಹೆಚ್.ಡಿ., ಮ.ಪ್ರ, ಬೆಂಗಳೂರು ವಿ.ವಿ. ೨೦೦೩.

ಹಿರೇಮಠರವರ **ಕಲಾವಿದ ಆರ್. ಎಮ್. ಹಡಪದ ಒಂದು ಅಧ್ಯಯನ**[೧೮], ೨೦೦೩ ರಲ್ಲಿ ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**[೧೯], ೨೦೦೪ ರಲ್ಲಿ ಡಾ.ವಿ.ಎಮ್. ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ (೧೪೦೦-೧೮೦೦)**[೨೦], ೨೦೦೪ ರಲ್ಲಿ ಡಾ. ಶಿವಕುಮಾರ. ಜಿ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೨೧], ೨೦೦೫ ರಲ್ಲಿ ಡಾ. ಶಶಿಕಲಾ ಹೂಗಾರವರ **ಕರ್ನಾಟಕ ತೊಗಲು ಗೊಂಬೆ ಚಿತ್ರಕಲೆ**[೨೨], ೨೦೦೫ ರಲ್ಲಿ ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೩], ೨೦೦೫ ರಲ್ಲಿ ಡಾ. ಎಚ್.ಎನ್. ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೪], ೨೦೦೫ ರಲ್ಲಿ ಡಾ. ಎಸ್.ವಿ. ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಾಯ**[೨೫], ೨೦೦೬ ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಚಿತ್ರಕಲೆ**[೨೬], ೨೦೦೭ ರಲ್ಲಿ ಡಾ. ಗೀತಾಂಜಲಿ ಬಿ.ಆರ್ ಅವರ **ಕರ್ನಾಟಕದ ಐತಿಹಾಸಿಕ ದೀಪಸ್ಥಂಭಗಳು ಮೈಸೂರು ಪ್ರದೇಶವನ್ನು ಅನುಲಕ್ಷಿಸಿ**[೨೭], ಹಾಗೂ ೨೦೦೭ ರಲ್ಲಿಯೇ ಬಂದ ಡಾ. ಎಮ್. ಸಿ. ಬಾಗೋಡಿಯವರ **ಸುರಪುರ ಶೈಲಿಯ ಚಿತ್ರಕಲೆ**[೨೮], ೨೦೦೮ ರಲ್ಲಿ ಡಾ. ಎ.ಎಸ್. ವಿಶ್ವನಾಥ ಅವರ **ಕರ್ನಾಟಕ ಕರಾವಳಿಯ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷ ಭೂಷಣಗಳು**[೨೯], ಹಾಗೂ ಡಾ. ಮೋಹನ್ ಪಾಂಚಳ ಇವರ **ಕಲಾವಿದ ಎಸ್. ಎಮ್. ಪಂಡಿತ ಬದುಕು ಮತ್ತು ಕಲೆ ಒಂದು ಅಧ್ಯಯನ**[೩೦], ಇವು ಚಿತ್ರಕಲೆಯ ಕುರಿತು ಬಂದ ಪಿಹೆಚ್.ಡಿ. ಮಹಾಪ್ರಬಂಧಗಳೂ. ೨೦೦೫ ರಲ್ಲಿ ಡಾ. ಆನಂದ ಕೆ. ಪೂಜಾರ ಅವರ **ಕರಾವಳಿ ಕರ್ನಾಟಕದ**

---

೧೮. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ, ಒಂದು ಅಧ್ಯಯನ ಪಿಹೆಚ್.ಡಿ.,ಮ.ಪ್ರ, ಕನ್ನಡ ವಿ.ವಿ., ೨೦೦೩.

೧೯. ಡಾ.ಎಸ್.ಸಿ.ಪಾಟೀಲ್ :ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್, ಪಿಹೆಚ್.ಡಿ., ಮ.ಪ್ರ, ಕರ್ನಾಟಕ ೨೦೦೩.

೨೦. ಡಾ. ವಿ.ಎಮ್. ಬಾಗಾಯತ್ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ (೧೪೦೦- ೧೮೦೦), ಪಿಹೆಚ್.ಡಿ.,ಮ.ಪ್ರ, ಕನ್ನಡ ವಿ.ವಿ., ೨೦೦೪.

೨೧. ಡಾ. ಶಿವಕುಮಾರ ಜಿ.ಓ. : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ.,ಮ.ಪ್ರ ಗು.ವಿ.ಗು., ೨೦೦೪.

೨೨. ಡಾ. ಶಶಿಕಲಾ. ಹೂಗಾರ್ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ. ಪಿಹೆಚ್.ಡಿ.,ಮ.ಪ್ರ ಕನ್ನಡ. ವಿ.ವಿ., ೨೦೦೫.

೨೩. ಡಾ. ಶಿವಪ್ರಕಾಶ ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಹೆಚ್.ಡಿ.,ಮ.ಪ್ರ., ಕನ್ನಡ ವಿ.ವಿ. ೨೦೦೫.

೨೪. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಹೆಚ್.ಡಿ.,ಮ.ಪ್ರ, ಕನ್ನಡ ವಿ.ವಿ. ೨೦೦೫.

೨೫. ಡಾ. ಎಸ್. ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳ್ಲಲಿ ವಾಸ್ತು ಅಂಶಗಳು ಒಂದು ಅಧ್ಯಯನ. ಪಿಹೆಚ್.ಡಿ.,ಮ.ಪ್ರ, ಕನ್ನಡ ವಿ.ವಿ., ೨೦೦೫.

೨೬ ಡಾ. ವಿಶ್ವೇಶ್ವರಿ ತಿವಾರಿ: ರಂಗೋಲಿ ಚಿತ್ರಕಲೆ, ಪಿಹೆಚ್.ಡಿ.,ಮ.ಪ್ರ, ಗು.ವಿ.ವಿ. ೨೦೦೬

೨೭. ಡಾ. ಗೀತಾಂಜಲಿ ಬಿ. ಆರ: ಕರ್ನಾಟಕದ ಐತಿಹಾಸಿಕ ದೀಪಸ್ಥಂಭಗಳು ಮೈಸೂರು ಪ್ರದೇಶವನ್ನು ಅನುಲಕ್ಷಿಸಿ. ಪಿಹೆಚ್.ಡಿ.,ಮ.ಪ್ರ., ಕನ್ನಡ ವಿ.ವಿ., ೨೦೦೭

೨೮. ಡಾ. ಮಲ್ಲಿಕಾರ್ಜುನ ಬಾಗೋಡಿ: ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ ಪಿಹೆಚ್.ಡಿ.,ಮ.ಪ್ರ., ಗು.ವಿ.ವಿ. ೨೦೦೭.

೨೯. ಡಾ. ಎ.ಎಸ್. ವಿಶ್ವನಾಥ : ಕರ್ನಾಟಕ ಕರಾವಳಿಯ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ. ಪಿಹೆಚ್.ಡಿ.,ಮ.ಪ್ರ., ಕನ್ನಡ ವಿ.ವಿ, ೨೦೦೭

೩೦. ಡಾ. ಮೋಹನ್ ಪಾಂಚಳ : ಕಲಾವಿದ ಎಸ್.ಎಮ್.ಪಂಡಿತ ಬದುಕು ಮತ್ತು ಕಲೆ ಒಂದು ಅಧ್ಯಯನ, ಪಿಹೆಚ್.ಡಿ.ಮ.ಪ್ರ., ಗು.ವಿ.ವಿ., ೨೦೦೭

ಕಾವಿ ಚಿತ್ರಕಲೆ[೩೧]. ೨೦೦೫ ರಲ್ಲಿಡಾ.ಡಿ.ಎ. ಉಪಾಧ್ಯ ಅವರ **ದೃಶ್ಯಕಲೆಗಳ ತೌಲನಿಕ ಅಧ್ಯಯನ**[೩೨]. ಡಿ.ಲಿಟ್. ಮಹಾಪ್ರಬಂಧಗಳಾಗಿವೆ.

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್ ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ **ಜಿ.ಎಸ್.ಖಂಡೇರಾವ ಒಂದು ಅಧ್ಯಯನ**[೩೩], ಮತ್ತು ೨೦೦೩ರಲ್ಲಿ ಎ.ಎಸ್. ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ**[೩೪], ೨೦೦೫ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ **ಕಲಾವಿದ ಡಿ.ವಿ. ಹಾಲಬಾವಿಯವರ ಬದುಕು ಮತ್ತು ಕಲಾಕೃತಿಗಳು**[೩೫], ಮತ್ತು ಸಿ.ಡಿ. ಜೆಟ್ಟೆಣ್ಣವರ ಅವರ **ಕಲಾವಿದ ಡಾ. ಎಂ. ವಿ. ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು**[೩೬], ೨೦೦೬ರಲ್ಲಿ ರವಿ ವಸರಾಮ ನಾಯಕ ಇವರ **ಕಿನ್ನಾಳ ಕಲೆ ಒಂದು ಅಧ್ಯಯನ**[೩೭], ಸುಚಿತ್ರಾ.ಗ.ಲಿಂಗದಳ್ಳಿ ಇವರ **ವಿಜಯನಗರದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ**[೩೮], ೨೦೦೭ರಲ್ಲಿ ಉಮೇಶ.ಎಸ್. ಅವರ **ಕರ್ನಾಟಕದ ಜೈನ ಚಿತ್ರಕಲೆ**[೩೯], ಮತ್ತು ಶಶಿಕಾಂತ್. ಕೆ. ಬಸರಿಕಟ್ಟಿ ಅವರ **ಕಲಘಟಗಿಯ ಕಲೆ**[೪೦], ಹಾಗೂ ಶೈಲಾ ಬರಡೂಲ್ ಅವರ **ಸಂತ ಶುಭರಾಯ ಜೀವನ ಮತ್ತು ಕಲಾಕೃತಿಗಳು**[೪೧], ಹಾಗೂ ಬಿ.ಎಮ್.ಪಾಟೀಲ್ ಅವರ **ನಿಪ್ಪಾಣಿವಾಡಿ ಬಿತ್ತಿ ಚಿತ್ರಗಳು**[೪೨], ಈ ಪ್ರಬಂಧಗಳನ್ನು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಎಂ.ಫಿಲ್ ಸಂಶೋಧನಾ ಅಧ್ಯಯನಗಳಾಗಿವೆ. ಹೀಗೆ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ. ಗಳಲ್ಲಿ ಪಿಹೆಚ್.ಡಿ. ಅಧ್ಯಯನಕ್ಕಾಗಿ ಸುಮಾರು ೧೫ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು ರಚನೆಯಾಗಿವೆ ಮತ್ತು ೨೫ಕ್ಕೂ ಹೆಚ್ಚು ಮಂದಿ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಡಿಪ್ಲೋಮಾ ಪದವಿ ಅಂತಿಮ ವರ್ಷಕ್ಕೆ ಸಿದ್ಧಪಡಿಸಿರುವ ಕಿರು ಸಂಶೋಧನಾ ಯೋಜನಾ ವರದಿಗಳು ಬಿ.ವಿ.ಎ / ಬಿ.ಎಫ್.ಎ ಪದವಿ ಹಾಗೂ ಎಂ.ವಿ.ಎ / ಎಂ.ಎಫ್.ಎ ಸ್ನಾತಕೋತ್ತರ ಹಂತದಲ್ಲಿ ಸುಮಾರು ೪೦೦ ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ, ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ

---

೩೧. ಡಾ. ಆನಂದ ಕೆ. ಪೂಜಾರ್ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್., ಮ.ಪ್ರ., ಕನ್ನಡ ವಿ.ವಿ., ೨೦೦೫.
೩೨. ಡಾ. ಡಿ.ಎ. ಉಪಾಧ್ಯ : ದೃಸ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್.,ಮ.ಪ್ರ., ಕನ್ನಡ ವಿ.ವಿ. ೨೦೦೫.
೩೩. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್. ಖಂಡೇರಾವ್ ಒಂದು ಅಧ್ಯಯನ, ಎಂ.ಫಿಲ್.ಪ್ರಕ.ವಿ.ವಿ.ಹಂ. ೨೦೦೫.
೩೪. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಬೂಷಣ, ಎಂ.ಫಿಲ್,ಪ್ರ.ಕ.ವಿ.ವಿ.ಹಂ. ೨೦೦೨.
೩೫. ಶಂಕರಪ್ಪ ಎಂ. ಕುಂದಗೋಳ : ಕಲವಿದ ಡಿ.ವಿ. ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ. ಫಿಲ್. ಪ್ರ.ಕ.ವಿ.ವಿ.ಹಂ. ೨೦೦೩.
೩೬. ಸಿ.ಡಿ. ಜಟ್ಟೆಣ್ಣವರ : ಕಲಾವಿದ ಡಾ. ಎಂ.ವಿ. ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು ಎಂ.ಫಿಲ್.,ಪ್ರಕ.ವಿ.ವಿಹಂ. ೨೦೦೫.
೩೭. ರವಿ ವಸರಾಮ ನಾಯಕ : ಕಿನ್ನಾಳ ಕಲೆ ಒಂದು ಅಧ್ಯಯನ, ಎಂ.ಫಿಲ್,ಪ್ರಕ.ವಿ.ವಿ.ಹಂ. ೨೦೦೬.
೩೮. ಸುಚಿತ್ರಾ ಗ. ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಎಂ.ಫಿ.ಪ್ರಕ.ವಿ.ವಿ.ಹಂ. ೨೦೦೬.
೩೯. ಉಮೇಶ.ಎಸ್. : ಕರ್ನಾಟಕದ ಜೈನ ಚಿತ್ರಕಲೆ. ಎಂ.ಫಿಲ್.ಪ್ರಕ.ವಿ.ವಿ.ಹಂ. ೨೦೦೭.
೪೦. ಶಶಿಕಂತ್.ಕೆ. ಬಸರಿಕಟ್ಟಿ : ಕಲಘಟಗಿಯ ಕಲೆ. ಎಂ.ಫಿಲ್.ಪ್ರಕ.ವಿವಿ.ಹಂ. ೨೦೦೭.
೪೧. ಶೈಲಾ ಬರಡೂಲ್ : ಸಂತ ಕಲಾವಿದ ಶುಭರಾಯ ಜೀವನ ಮತ್ತು ಕಲಾಕೃತಿಗಳು. ಎಂ.ಫಿಲ್.ಪ್ರ.ಕ.ವಿ.ವಿ.ಹಂ. ೨೦೦೭.
೪೨. ಬಿ. ಎಮ್. ಪಾಟೀಲ. : ನಿಪ್ಪಣಿವಾಡಿ ಬಿತ್ತಿ ಚಿತ್ರಗಳು, ಎಂ.ಫಿಲ್.ಪ್ರ.ಕ.ವಿ.ವಿ.ಹಂ. ೨೦೦೭.

ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಸಂಶೋಧನಾ ಅಧ್ಯಯನವು ಕಲಾಕ್ಷೇತ್ರದಲ್ಲಿ ಅನಿವಾರ್ಯವಾದ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಇನ್ನಷ್ಟು ಬಲಗೊಳ್ಳುವ ಆಶಯವನ್ನು ನಿರೀಕ್ಷಿಸಬಹುದು.

ದಾವಣಗೆರೆ ಜಿಲ್ಲೆಯ ಕುರಿತು ಇದುವರೆಗೂ ನಡೆದ ಅಧ್ಯಯನ ಮತ್ತು ಪ್ರಕಟಣೆಗಳು.

ಕರ್ನಾಟಕದ ಕೇಂದ್ರ ಬಿಂದುವಾಗಿರುವ ದಾವಣಗೆರೆ ಜಿಲ್ಲೆಯ ಕುರಿತು 'ಟಿ, ಗಿರಿಜಾರವರು ನಿಹಾರಿಕಾ ಪ್ರಕಾಶನದ ದಾವಣಗೆರೆ ಇದು ನಮ್ಮ ಜಿಲ್ಲೆ' ಎಂಬ ೭೪೦ ಪುಟಗಳ ಮಹಾ ಗ್ರಂಥವನ್ನು ಬರೆದಿದ್ದಾರೆ. ಇವುಗಳಲ್ಲಿ ದಾವಣಗೆರೆ ವಿಷಯವಾಗಿ ಸವಿಸ್ಥಾರವಾಗಿ ಬರೆದಿದ್ದಾರೆ. ಕೆಲವೊಂದು ಸಾಮಾನ್ಯಪರಿಚಯ, ಊರು ಮುಂತಾದವುಗಳನ್ನು ವಿಸ್ಥಾರವಾಗಿ ಬರೆದಿದ್ದಾರೆ. ಊರು ವಿಸ್ಥಾರಗೊಂಡ ರೀತಿ ದಾವಣಗೆರೆಯ ವಿವಿಧ ಭಾಗಗಳನ್ನು ಹಾಗೂ ಕೆಲವು ಸ್ಮಾರಕಗಳ ಬಗ್ಗೆ ವಿವರಿಸಿದ್ದಾರೆ. ದಾವಣಗೆರೆ ಜಿಲ್ಲೆಯ ಗೆಝಿಟೇರಿಯನ್ ಮತ್ತು ಪತ್ರಿಕೆಗಳು ಹಾಗೂ ದವನ ಸಂಸ್ಕೃತಿಕ ಕಾರ್ಯಕ್ರಮದ ಪುಸ್ತಕಗಳಲ್ಲಿ ದಾವಣಗೆರೆಯ ಜಿಲ್ಲೆಯ ಕುರಿತಾಗಿ ಬರೆದಿದ್ದಾರೆ.

ಚಂಪಾಲಾಲ್. ಬಿ. ಡೆಲ್ಲರಿಯಾ ಪ್ರಕಾಶನದ ಡಾ. ಎಂ.ಜಿ. ಈಶ್ವರಪ್ಪ ಸಂಪಾದಕತ್ವದಲ್ಲಿ **"ಶತಮಾನದ ದಾವಣಗೆರೆ"** ಎಂಬ ಪುಸ್ತಕ ೨೦೦೧ ರಲ್ಲಿ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಹಲವಾರು ಲೇಖಕರು ದಾವಣಗೆರೆ ಕುರಿತಾಗಿ ಹಲವಾರು ಮಾಹಿತಿಗಳನ್ನು ಸಂಗ್ರಹಿಸಿ ಲೇಖನಗಳನ್ನು ಬರೆದಿದ್ದಾರೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಅನುಕೂಲತೆಗಾಗಿ ಆರು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಅವುಗಳ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಚರ್ಚಿಸುವ ವಿಷಯದ ಕುರಿತಂತೆ ಅದರ ಸಂಕ್ಷಿಪ್ತ ರೂಪದ ವಿವರವನ್ನು ಇಲ್ಲಿ ಕೊಡಲಾಗಿದೆ.

ಅಧ್ಯಾಯ: ಒಂದು

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನದ ಸ್ವರೂಪ, ಅಧ್ಯಯನದ ವೈಧಾನಿಕತೆ ಮತ್ತು ಮೂಲ ಆಕರ ಸಾಮಗ್ರಿ, ಅನುಷಂಗಿಕ ಆಕರ ಸಾಮಗ್ರಿಯ ಕುರಿತಾಗಿ ವಿವರಣೆಯನ್ನು ಮಾಡಲಾಗಿದೆ.

ಅಧ್ಯಾಯ: ಎರಡು

ಎರಡನೆಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯ ಚಾರಿತ್ರಿಕ, ಸಾಂಸ್ಕೃತಿಕ ಪರಿಸರದ ಬಗ್ಗೆ ಹಾಗೂ ದಾವಣಗೆರೆ ಜಿಲ್ಲೆಯ ಭೌಗೋಳಿಕ ಲಕ್ಷಣಗಳನ್ನು, ಈ ಜಿಲ್ಲೆಯ ಸಾಮಾನ್ಯ

ಪರಿಚಯವನ್ನು ಮಾಡಿಕೊಡಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿರುವ ಲಲಿತಕಲೆಗಳಾದ ಚಿತ್ರ-ಶಿಲ್ಪ- ವಾಸ್ತುಶಿಲ್ಪ ನೃತ್ಯ- ಸಂಗೀತ- ನಾಟಕ ಮುಂತಾದವುಗಳ ಬಗ್ಗೆ ಮೊದಲಿನಿಂದ ಇಲ್ಲಿಯವರೆಗೂ ನಡೆದು ಬಂದ ವಿಧಾನದ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ: ಮೂರು

ಮೂರನೆಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ ಜಾನಪದ ಕಲೆಗಳಾದ ರಂಗೋಲಿ, ಹಚ್ಚೆ, ಮದರಂಗಿಯಂತಹ ಕಲೆಗಳ ಬಗ್ಗೆ ವಿವರಣೆ ನೀಡಲಾಗಿದೆ. ಜಾನಪದ ಚಿತ್ರಕಲೆಯಲ್ಲಿ ಪಳಗಿದ ಕಲಾವಿದರ ಕುರಿತಾಗಿಯೂ ಹಾಗೂ ಅವರ ಕಲಾಕೃತಿಗಳ ಬಗ್ಗೆ ವಿವರಣೆ ಮಾಡಲಾಗಿದೆ.

ಅಧ್ಯಾಯ: ನಾಲ್ಕು

ನಾಲ್ಕನೇಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ ಚಿತ್ರಕಲಾ ಶಿಕ್ಷಣವನ್ನು ಕೊಡುತ್ತಿರುವ ಶಿಕ್ಷಣ ಸಂಸ್ಥೆಗಳ ಬಗ್ಗೆ ವಿವರಿಸಲಾಗಿದೆ. ಚಿತ್ರಕಲಾ ಶಿಕ್ಷಣ ಸಂಸ್ಥೆಯು ಪ್ರಾರಂಭವಾದ ವರ್ಷ, ಅದರ ಇತಿಹಾಸ, ಸಂಸ್ಥೆಯು ಅಲ್ಲಿಂದ ಇಲ್ಲಿಯವರೆಗೂ ನಡೆದುಕೊಂಡು ಬಂದ ರೀತಿ ಹಾಗೂ ಅದರ ಕೊಡುಗೆಗಳ ಬಗ್ಗೆ ವಿವರಣೆ ನೀಡಲಾಗಿದೆ. ಅಲ್ಲಿಯ ಶಿಕ್ಷಣದ ಗುಣಮಟ್ಟ ಹಾಗೂ ಅಲ್ಲಿ ಅವರು ಉಪಯೋಗಿಸುತ್ತಿರುವ ಸಲಕರಣೆಗಳ ಬಗ್ಗೆಯೂ ವಿವರಣೆಯನ್ನು ನೀಡಲಾಗಿದೆ. ಶಿಕ್ಷಣ ಸಂಸ್ಥೆಯಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ನಡೆಯುತ್ತಿರುವ ವಿಷಯಗಳ ಕುರಿತಾಗಿಯೂ ಕೂಡ ಚರ್ಚಿಸಲಾಗಿದೆ.

ಅಧ್ಯಾಯ: ಐದು

ಒಂದು ಪ್ರದೇಶದ ಸಂಸ್ಕೃತಿಯ ಪರಿಚಯವಾಗಲು ಚಿತ್ರಕಲೆಯು ಕೂಡ ಪ್ರಮುಖ ಪಾತ್ರ ವಹಿಸುತ್ತದೆ. ಅಲ್ಲಿಯ ಕಲಾವಿದರು ಅವರು ಬೆಳೆದ ಪರಿಸರ, ಅವರು ಚಿತ್ರಕಲಾ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳು ಮುಂತಾದ ವಿಷಯಗಳು ತುಂಬಾ ಮುಖ್ಯವಾಗಿವೆ. ಅದರಂತೆ ಪ್ರಸ್ತುತ ಈ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯಲ್ಲಿರುವ ಚಿತ್ರಕಲಾವಿದರ ಕುರಿತಾದ ಮಾಹಿತಿಗಳನ್ನು ಒಳಗೊಂಡಿದೆ, ಕಲಾವಿದರು, ಅವರ ಬಾಲ್ಯ ಜೀವನ, ಬದುಕು, ಅವರು ಪಡೆದ ಶಿಕ್ಷಣ ವಿಧಾನ, ತಂತ್ರಗಳ ಕುರಿತಾದ ಮಾಹಿತಿಯನ್ನು ತಿಳಿಸಲಾಗಿದೆ. ಇಲ್ಲಿಯ ಚಿತ್ರಕಲಾವಿದರು ಈ ನೆಲದಲ್ಲಿ ಬದುಕಿನೊಂದಿಗೆ ಸ್ಪಂದಿಸಿ ದಾವಣಗೆರೆ ಜಿಲ್ಲೆಗೆ ಎಷ್ಟೊಂದು ಕೊಡುಗೆಗಳನ್ನು ಕೊಟ್ಟು ಇಲ್ಲಿಯ ಸಂಸ್ಕೃತಿಯನ್ನು ಬಿಂಬಿಸಲು ಯಾವ ಯಾವ ರೀತಿಯಲ್ಲಿ ಪರಿಶ್ರಮವಹಿಸಿದರು ಎಂಬುದನ್ನು ದಾವಣಗೆರೆ ಜಿಲ್ಲೆಯ ಚಿತ್ರಕಲಾವಿದ ಪ್ರಮುಖ ಕೊಡುಗೆಗಳು ಎಂಬ ಈ ಅಧ್ಯಾಯದಲ್ಲಿ ಸಮೀಕ್ಷಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಚಿತ್ರಕಲಾ ಕ್ಷೇತ್ರದ ಬಗ್ಗೆ ಶ್ರಮಿಸಿದವರ ಮಾಹಿತಿಗಳನ್ನು ಒಳಗೊಂಡಿದೆ.

ಅಧ್ಯಾಯ: ಆರು

ಸಮಾರೋಪ

ಈ ಅಧ್ಯಾಯದಲ್ಲಿ ಪ್ರಸ್ತುತ ಸಂಶೋಧನಾ ಲಘು ಪ್ರಬಂಧದ ಐದು ಅಧ್ಯಾಯಗಳಲ್ಲಿ ಚರ್ಚಿತವಾದ ಫಲಿತಗಳ ವಿಶ್ಲೇಷಣೆಯ ಸಮೀಕ್ಷೆಯನ್ನು ಮಾಡಲಾಗಿದೆ.

ಅಧ್ಯಯನದ ವಿಧಾನ

ಈ ಅಧ್ಯಯನದಲ್ಲಿ ಎರಡು ವಿಧವಾದ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ

೨. ಆನುಷಂಗಿಕ ಆಕರ ಸಾಮಗ್ರಿ

ಈ ಎರಡು ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಿ ತಿಳಿಯಪಡಿಸುವದು.

ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರ ಕಾರ್ಯವಾಗಿದ್ದು. ಇದರಲ್ಲಿ. ಸಂದರ್ಶನ, ಛಾಯಾ ಚಿತ್ರಣ, ಧ್ವನಿಗ್ರಹಣ, ಹಾಗೂ ಚಿತ್ರಕಲಾವಿದರ ಸಮಕಾಲೀನ ಸಂದರ್ಶನಗಳ ಹಾಗೂ ಸಂಗ್ರಹಿತ ವಿಷಯಗಳ ಪಟ್ಟಿ ಸಿದ್ಧಪಡಿಸಿ ಬೇರೆ ಬೇರೆ ರೂಪದಲ್ಲಿ ಅಧ್ಯಯನ ಮಾಡಲಾಗಿದೆ.

ಸಂದರ್ಶನ

ದಾವಣಗೆರೆ ಜಿಲ್ಲೆಯಲ್ಲಿ ಜನಿಸಿದ ಹಾಗೂ ಇಲ್ಲಿ ಚಿತ್ರಕಲಾ ಜಗತ್ತಿನಲ್ಲಿ ಜೀವನ ನಡೆಸುತ್ತಿರುವವರನ್ನು ಸಂದರ್ಶಿಸಿ ಅವರ ಬಾಲ್ಯ, ಪ್ರಾಥಮಿಕ ಶಿಕ್ಷಣ, ಅವರ ಕಲಾಕೃತಿಗಳ ಬಗ್ಗೆ ಹಾಗೂ ಅವುಗಳ ತಂತ್ರಗಾರಿಕೆಯ ಬಗ್ಗೆ, ಅವರ ಚಿತ್ರಕಲಾವಿದರನ್ನಾಗಿ ಮಾಡಿದ ಅಂಶಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ದಾವಣಗೆರೆ ಜಿಲ್ಲೆಯ ಸಂಸ್ಕೃತಿಕ ಪರಿಸರಕ್ಕೆ ಯಾವ ರೀತಿಯಲ್ಲಿ ಕೊಡುಗೆಗಳನ್ನು ಕೊಟ್ಟಿದ್ದಾರೆ ಎಂಬುವದನ್ನು ಅವರ ಆಪ್ತರಲ್ಲಿ ವಿಷಯವನ್ನು ಕೇಳಿ ಅವುಗಳನ್ನು ಅಧ್ಯಯನ ಮಾಡಲಾಗಿದೆ. ಅದೇ ರೀತಿಯಲ್ಲಿ ಕಲಾವಿದರು ಪಡೆದ ಪ್ರಶಸ್ತಿ, ಬಹುಮಾನಗಳ ಬಗ್ಗೆಯೂ ಸಹ ಅವರಿಂದ ಮಾಹಿತಿಯನ್ನು ಪಡೆದು ಅದನ್ನು ಅಧ್ಯಾಯ ಮಾಡಲಾಗಿದೆ.

ಛಾಯಾಗ್ರಹಣ.

ದಾವಣಗೆರೆ ಜಿಲ್ಲೆಯಲ್ಲಿ ಚಿತ್ರಕಲಾವಿದರು ತಮ್ಮ ಬದುಕಿನಲ್ಲಿ ಹಲವಾರು ಕಲಾಕೃತಿ ರಚಿಸಿದ್ದು ಕಲಾಕೃತಿಗಳು ಕೆಲವೊಂದು ಕಲಾಪ್ರೇಮಿಗಳ ಸಂಗ್ರಹದಲ್ಲಿದ್ದರೆ, ಕೆಲವೊಂದು ಅವರ ಕುಟುಂಬ ವರ್ಗದವರಲ್ಲಿವೆ. ಅವುಗಳು ಜಾನಪದ ಶೈಲಿಯದ್ದಾಗಿರಬಹುದು, ಆಧುನಿಕ ಚಿತ್ರಕಲೆಯಾಗಿರಬಹುದು. ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳಲ್ಲಿ ರೇಖಾ ಚಿತ್ರಗಳು ಮತ್ತು ವರ್ಣ ಚಿತ್ರಗಳು, ವಿವಿಧ ಮಾಧ್ಯಮದ ಕಲಾಕೃತಿಗಳನ್ನು ಛಾಯಾಚಿತ್ರಣ

ಮಾಡಿಕೊಂಡು. ಗಣಕ ಯಂತ್ರದ ಮೂಲಕ ಅವುಗಳನ್ನು ಪುನರ್ ಮುದ್ರಿಸಿ ಇಲ್ಲಿಯ ಅಧ್ಯಾಯಗಳಿಗೆ ಬಳಸಿಕೊಳ್ಳಲಾಗಿದೆ.

ಆನುಷಂಗಿಕ ಆಕರ ಸಾಮಗ್ರಿ

ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ನಿಘಂಟುಗಳು, ಗೆಝೆಟೇರಿಯನ್‌ಗಳು, ಪತ್ರಿಕೆಗಳು, ಕಲಾವಿದರ ಕಲಾಕೃತಿಗಳನ್ನುದ್ದೇಶಿಸಿ ಪ್ರಕಟವಾದ ಕಲಾ ಲೇಖನಗಳು ಹಾಗೂ ಅಭಿಪ್ರಾಯಗಳು, ಸಂಶೋಧನಾ ಲೇಖನಗಳು, ಬೇರೆ ಬೇರೆ ಗ್ರಂಥಾಲಯಗಳು, ಕಲಾಶಾಲೆಗೆ ಹೋಗಿ ಅಲ್ಲಿಯ ವಿಷಯವನ್ನು ಸಂಗ್ರಹಿಸಿಕೊಂಡು ಬಂದು ಈ ಕಿರು ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ: ಎರಡು

ದಾವಣಗೆರೆ ಜಿಲ್ಲೆಯ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕ, ಹಿನ್ನೆಲೆ ಮತ್ತು ಲಲಿತಕಲೆಗಳು

ಸಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು 'ದಾವಣಗೆರೆ ಜಿಲ್ಲೆಯ ಒಟ್ಟು ೫. ೪೯೮. ೬೭ ಚ, ಕಿ,ಮಿ, ವಿಸ್ತೀರ್ಣದಿಂಥ ಕೂಡಿದ್ದು ಒಟ್ಟು ೨೦ ಹೊಬಳಿ ಕೇಂದ್ರಗಳು ಹಾಗೂ ೬೧೬ ಗ್ರಾಮಗಳನ್ನು ಒಳಗೊಂಡಿದೆ'[೪೩].

ಮೊದಲು ದಾವಣಗೆರೆ ಜಿಲ್ಲೆಯು ಸುಮಾರು ವರ್ಷಗಳಿಂದ ಚಿತ್ರದುರ್ಗದ ಜಿಲ್ಲೆಯಲ್ಲಿತ್ತು. ಅದಾದ ನಂತರ ೧೫-೦೮-೧೯೯೭ ರ ನಂತರ ಚಿತ್ರದುರ್ಗ ಜಿಲ್ಲೆಯಿಂದ ಬೇರ್ಪಟ್ಟು ಹೊಸ ಜಿಲ್ಲೆಯಾಗಿ ಮಾರ್ಪಾಡಾಯಿತು. ಈಗ ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಹಲವಾರು ದೇವಾಲಯಗಳು, ಶಿಲಾಶಾಸನಗಳು, ಶಿಲ್ಪಗಳು ಪ್ರವಾಸಿ ತಾಣಗಳು ನೋಡಲು ಸಿಗುತ್ತವೆ. ಚಿತ್ರದುರ್ಗದ. ಪಾಳೆಯಗಾರರಿಂದ ದಾವಣಗೆರೆ ಬೇರ್ಪಟ್ಟರೂ ಸಹ ಅಲ್ಲಿಯ ಪಾಳೆಯಗಾರರಿಗೂ ದಾವಣಗೆರೆಗೂ ಸಂಬಂಧವಿದೆ. ಚಿತ್ರದುರ್ಗವನ್ನು ಆಳಿದ ಪಾಳೆಯಗಾರರು ದಾವಣಗೆರೆ ಜಿಲ್ಲೆಗೆ ಸೇರಿದವರು. ಅಲ್ಲಿಯ ಮತ್ತು ಇಲ್ಲಿಯ ಭೌಗೋಳಿಕ ಹಿನ್ನೆಲೆಯನ್ನು ಒಳಗೊಂಡ ರಚನೆಯಾದ ಕಲೆಗಳು ಹಲವಾರು ಇದ್ದು ಶಿಲ್ಪ-ವಾಸ್ತುಶಿಲ್ಪ-ಶಿಲಾಶಾಸನಗಳನ್ನು ತಿಳಿಯುವದು ಮುಖ್ಯವಾಗಿದೆ. ಆದ್ದರಿಂದ ಇದರಲ್ಲಿ ಇವುಗಳ ಮಾಹಿತಿಗಳನ್ನು ಸ್ಥಳಗಳನ್ನು ತಿಳಿಸಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಸಂಸ್ಕೃತಿ ಹಬ್ಬ ಹರಿದಿನಗಳಲ್ಲಿ ನಡೆಯುತ್ತಿರುವಂತಹ ನೃತ್ಯ-ಸಂಗೀತ-ನಾಟಕಗಳು ಮುಂತಾದವುಗಳ ಕುರಿತು ಸಂಕ್ಷಿಪ್ತ ರೂಪದಲ್ಲಿ ತಿಳಿಸಲಾಗಿದೆ. ನೃತ್ಯ-ನಾಟಕ-ಸಂಗೀತ ಮುಂತಾದವುಗಳಿಗೆ ಇಲ್ಲಿ ಹೆಚ್ಚಿನ ಮಹತ್ವ ನೀಡಲಾಗಿದೆ. ಅವುಗಳ ಏಳಿಗೆಗಾಗಿ ದುಡಿದ ಕಲಾವಿದರ ಪರಿಚಯವನ್ನು ಸಹ ಮಾಡಿ ವಿವರಿಸಲಾಗಿದೆ.

---

೪೩. ಟಿ.ಗಿರೀಜ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.ಸಂ. ೦೨.

ಅಧ್ಯಾಯ: ಮೂರು

ದಾವಣಗೆರೆ ಜಿಲ್ಲೆಯ ಜನಪದ ಚಿತ್ರಕಲೆ

ಈ ಅಧ್ಯಾಯದಲ್ಲಿ ಜನಪದ ಕಲೆಯ ಸ್ವರೂಪ, ಲಕ್ಷಣ ಇವುಗಳ ಕುರಿತು ಇವುಗಳಿಗೆ ಸಂಭಂದ ಪಟ್ಟಂತೆ ಹಲವಾರು ವಿವರಣೆಗಳೊಂದಿಗೆ ಜನಪದ ಕಲೆಯಲ್ಲಿ ಬರುವಂತಹ ಪ್ರಕಾರಗಳನ್ನು ತಿಳಿಸಲಾಗುವುದು. ದಾವಣಗೆರೆ ಜಿಲ್ಲೆಯ ಜನಪದ ಚಿತ್ರಕಲೆ ಬಹು ಆಕರ್ಶಕವಾಗಿರುವುದಲ್ಲದೇ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ.

ಇಲ್ಲಿಯ ಹಲವಾರು ಜನಾಂಗಗಳಲ್ಲಿ ಹಚ್ಚೆ ಹಾಕಿಕೊಳ್ಳುವ ಸಂಪ್ರದಾಯವಿದೆ. ಅವುಗಳು ಕೆಲವೊಂದು ಜನಾಂಗಗಳಲ್ಲಿ ಈಗಲೂ ಕಾಣುತ್ತವೆ. ಗ್ರಹಾಲಂಕರಣದಲ್ಲಿ, ಮನೆಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಮನೆಗಳಿಗೆ ಸುಣ್ಣ ಬಣ್ಣ ಬಳಿದು ಹುರಮಂಜಿನಿಂದ ಚಿತ್ರ ರಚಿಸುವ ಚಿತ್ರವಿನ್ಯಾಸಗಳು ಹಾಗೂ ಜಗಲಿಗಳ ಮೇಲೆ, ದೇವರ ಮಂಟಪದ ಮುಂಭಾಗದಲ್ಲಿ, ರಂಗೋಲಿಯನ್ನು ಹಾಕುವ ಸಂಪ್ರದಾಯವಿದೆ. ಇವುಗಳ ವಿಚಾರವಾಗಿ ಜನಪದ ಚಿತ್ರಗಳನ್ನು ವರ್ಗೀಕರಿಸಿಕೊಂಡು ವಿವರಣೆಗೊಂಡಿದೆ.

ಅಧ್ಯಾಯ: ನಾಲ್ಕು

ದಾವಣಗೆರೆ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು

ಕಲೆಯು ಯಾವುದೇ ದೇಶದ ಆಯಾ ಸಂಸ್ಕೃತಿಯ ಬಹುಮುಖ್ಯವಾದ ಭಾಗವಾಗಿದೆ. ಸೌಂದರ್ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರಲ್ಲಿ ಕಲೆಯ ಪಾತ್ರ ತುಂಬಾ ಹಿರಿದಾಗಿದೆ ಅದರಂತೆ ದಾವಣಗೆರೆ ಜಿಲ್ಲೆಯಲ್ಲಿ ಹಲವಾರು ಇತಿಹಾಸವನ್ನು ಹೊಂದಿದ ಕಲಾಶಾಲೆಯ ಬಗ್ಗೆ ವಿವರಣೆ ಇದೆ. ದಾವಣಗೆರೆ ಕಲಾ ಶಾಲೆಯ ಹಲವಾರು ವಿದ್ಯಾರ್ಥಿಗಳನ್ನು ಕಲೆಯಲ್ಲಿ ತರಬೇತಿಯನ್ನು ಕೊಡುತ್ತಾ ಅವರ ಪ್ರತಿಭೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಷ್ಟರ ಮಟ್ಟಿಗೆ ತರಬೇತಿಯನ್ನು ಕೊಡುತ್ತಾ ಬಂದಿದೆ. ಈ ಕಲಾಸಂಸ್ಥೆಯು ಸ್ಥಾಪನೆಗೊಂಡಿದ್ದು ೪೦ ವರ್ಷಗಳ ಹಿಂದೆ. ಇದು ತನ್ನ ಪ್ರಭಾವದಿಂದ ಯುವ ಕಲಾವಿದರನ್ನು ತನ್ನ ಬಳಿ ಸೆಳೆಯುತ್ತಾ, ಹೊರಗಿನ ಕಲಾಭಿಮಾನಿಗಳಿಗೆ ನೆರವಾಗುತ್ತಾ, ಆವನಲ್ಲಿ ಕಲಾಭಿರುಚಿ ಬೆಳೆಸಲು ಉತ್ತಮವಾಗಿ ಸೇವೆಯನ್ನು ಮಾಡುತ್ತಿದೆ. ಈ ಸಂಸ್ಥೆಯಲ್ಲಿ ವರ್ಣಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ ಕಲೆ, ಅನ್ವಯಕ ಕಲೆ ವಿಭಾಗಗಳಲ್ಲಿ ತರಬೇತಿಯನ್ನು ಕೊಡುತ್ತಿದ್ದು, ಆಯಾ ವಿಭಾಗಗಳಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸುವ ಕಾರ್ಯವನ್ನು ಮಾಡುತ್ತಿದೆ.

ಈ ಕಲಾ ಶಾಲೆಯು ಕಲಾಶಿಕ್ಷಣವನ್ನು ಕೊಡುತ್ತಿರುವುದಲ್ಲದೇ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹದ ರೂಪದಲ್ಲಿ ಹಲವಾರು ಪದಕಗಳನ್ನು ನೀಡಿ ಗೌರವಿಸುತ್ತದೆ. ಈ ವಿದ್ಯಾಲಯದಲ್ಲಿ ಮೊದಲಿನಿಂದಲೂ ಹಲವಾರು ಸುಪ್ರಸಿದ್ಧ ಕಲಾವಿದರನ್ನು ಉಪನ್ಯಾಸಕರನ್ನಾಗಿ ನೇಮಿಸಿದ್ದರಿಂದ. ಇಲ್ಲಿಯ ವಿದ್ಯಾರ್ಥಿಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು

ಕಾರಣರಾಗಿದ್ದಾರೆ. ಇಂತಹ ಒಂದು ಕಲಾ ಶಾಲೆಯು ನಮ್ಮ ದಾವಣಗೆರೆ ಜಿಲ್ಲೆಯಲ್ಲಿದ್ದುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದ್ದು ಅದನ್ನು ಈ ಅಧ್ಯಾಯದಲ್ಲಿ ಈ ಸಂಸ್ಥೆಯ ಬಗ್ಗೆ ವಿವರಣೆಯನ್ನು ನೀಡಿದ್ದೇನೆ.

ಅಧ್ಯಾಯ: ಐದು

ದಾವಣಗೆರೆ ಜಿಲ್ಲೆಯ ಚಿತ್ರಕಲಾವಿದರ ಪ್ರಮುಖ ಕೊಡುಗೆಗಳು.

ದಾವಣಗೆರೆ ಜಿಲ್ಲೆಯಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದ ಹಲವಾರು ಚಿತ್ರಕಲಾವಿದರುಗಳಿದ್ದಾರೆ. ಅವರುಗಳು ತಮ್ಮ ಚಿತ್ರಕಲಾಕೃತಿಗಳ ಮೂಲಕ ದೇಶ ವಿದೇಶಗಳಲ್ಲಿ ಪ್ರಖ್ಯಾತವಾಗಿರುತ್ತಾರೆ. ಯಾವುದೇ ಕಲಾವಿದನಿಗೆ ತಾನಿರುವ ಸ್ಥಳ ಮುಖ್ಯವಾಗಿರುತ್ತದೆ. ಬೇರೆ ಯಾವುದೇ ಕಾರಣಕ್ಕಾಗಿ ಅಥವಾ ಪರಿಸ್ಥಿತಿಗನುಗುಣವಾಗಿ ಬೇರೆ ಬೇರೆ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಚಿತ್ರರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವನ ಕಲಾ ಕೌಶಲ್ಯವೂ ಕೂಡ ಬದಲಾಗುತ್ತದೆ. ಒಂದೇ ಸ್ಥಳ ಎಲ್ಲ ಉದ್ದೇಶಗಳನ್ನು ಸಫಲಗೊಳಿಸುವಲ್ಲಿ ಸಹಾಯ ಆಗುವುದಿಲ್ಲ. ಕಲಾವಿದ ತಾನಾಗಿಯೇ ತನ್ನ ಮನಸ್ಸಿನಿಂದ ಭಾವನೆಗಳಿಗೆ ರೂಪ ಕೊಡಲು ಯೋಗ್ಯವೆನಿಸುವ ಶೈಲಿಯನ್ನು ತಂತ್ರಗಳನ್ನು ಬೇರ್ಪಡಿಸಿಕೊಂಡು ಗುರುತಿಸಿಕೊಳ್ಳುತ್ತಾನೆ. ಆದುದರಿಂದ ಚಿತ್ರಕಲಾವಿದನು ತನ್ನ ಕ್ಷೇತ್ರದಲ್ಲಿ ಹಲವಾರು ಬಗೆಯ ಕಲಾಕೃತಿಗಳನ್ನು ನೋಡುವಂತೆ ಅನೇಕ ಹೊಸ ಬಗೆಯ ಚಿತ್ರ ರಚನಾ ಕೌಶಲ್ಯಗಳನ್ನು, ತಂತ್ರಗಳನ್ನು ಹಾಗೂ ಶೈಲಿಗಳನ್ನು ಅಳವಡಿಸಿಕೊಂಡಿದ್ದನ್ನು ಕಾಣುತ್ತೇವೆ. ಈ ಜಿಲ್ಲೆಯ ಚಿತ್ರ ಕಲಾವಿದರು ಕಾಲ-ಕಾಲಕ್ಕೆ ತಂತ್ರಗಳನ್ನು ಬದಲಾಯಿಸುತ್ತಾ, ಕಾಲದಿಂದ ಕಾಲಕ್ಕೆ ಬದಲಾಗುತ್ತಾ ನಾಡಿನೆಲ್ಲೆಡೆ ಹೆಸರುವಾಸಿಯಾಗಿದ್ದಾರೆ. ಈ ಅಧ್ಯಾಯದಲ್ಲಿ ಕಲಾವಿದರ ಪರಿಚಯಾವಳಿಯನ್ನು ಹೇಳುತ್ತಾ ಅವರ ಸಾಧನೆಯನ್ನು ಹಾಗೂ ಅವರು ಪಡೆದ ಪ್ರಶಸ್ತಿಗಳ ಬಗ್ಗೆ ವಿವರಿಸಿದ್ದೇನೆ.

ಅಧ್ಯಾಯ: ಆರು

ಸಮಾರೋಪ

ಪ್ರಸ್ತುತ ಅಧ್ಯಾಯ ಒಟ್ಟು ಪ್ರೌಢ ಪ್ರಬಂದದ ಎಲ್ಲಾ ಅಧ್ಯಾಯಗಳ ಅಧ್ಯಯನದ ಫಲಿತಗಳ ಸಮೀಕ್ಷೆ ಹೊಂದಿದೆ.

– * –

ಅಧ್ಯಾಯ: ೨

ದಾವಣಗೆರೆ ಜಿಲ್ಲೆಯ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕ, ಹಿನ್ನಲೆ, ಮತ್ತು ಲಲಿತಕಲೆಗಳು.

ಚಾರಿತ್ರಿಕ ಹಿನ್ನಲೆ

'ದಾವಣಗೆರೆ ಚಿತ್ರದುರ್ಗ ಜಿಲ್ಲೆಗಳು ಎಂದು ಪ್ರತ್ಯೇಕಗೊಂಡಾಗ ಐತಿಹಾಸಿಕ ಚಿತ್ರದುರ್ಗ ನಮ್ಮದಾಗಿ ಉಳಿದಿಲ್ಲವೆಂದು ಮೇಲ್ನೋಟಕ್ಕೆ ಹೇಳಬಹುದು. ಆದರೆ ಎಂದಿನಿಂದಲೇ ಇದ್ದಂತಹ ಭಾವನಾತ್ಮಕ ಸಂಬಂಧಗಳನ್ನು ಪ್ರತ್ಯೇಕವೆಂದು ಹೇಳುವುದು ಸರಿಯಲ್ಲ. ಕಾರಣ ಚಿತ್ರದುರ್ಗದ ಪಾಳೆಯಗಾರರಿಗೂ ದಾವಣಗೆರೆ ಜಿಲ್ಲೆಗೂ ಬಿಡಿಸಲಾಗದ ಸಂಬಂಧಗಳಿವೆ.

ಚಿತ್ರದುರ್ಗ ಪಾಳೆಯಗಾರರ ರಾಜಧಾನಿಯಾಗಿದ್ದರೂ, ಅವರ ಆಡಳಿತ, ಯುದ್ಧಗಳು, ನಮಗೆ ತೀರಾ ಹತ್ತಿರವಾದವು. ಚಿತ್ರದುರ್ಗವನ್ನಾಳಿದ ಎರಡು ಮನೆತನಗಳ ಪಾಳೆಯಗಾರರು ದಾವಣಗೆರೆ ಜಿಲ್ಲೆಗೆ ಸೇರಿದವರು. ಮತ್ತಿವಂಶದ ಮತ್ತಿ ತಿಮ್ಮಣ್ಣನಾಯಕ ದಾವಣಗೆರೆ ತಾಲ್ಲೂಕಿನ ಮತ್ತಿ ಗ್ರಾಮದವನು. ಬಿಚ್ಚುಗತ್ತಿ ಭರಮಣ್ಣನಾಯಕ ನಮ್ಮ ಜಗಲೂರು ತಾಲ್ಲೂಕಿನ ಬಿಳಿಚೋಡು ಗ್ರಾಮಕ್ಕೆ ಸೇರಿದವನು'[೧].

'ಈ ಎರಡು ವಂಶಗಳ ಮೂಲ ಪುರುಷರು ಆನೆಗುಂದಿ ಕಡೆಯಿಂದ ಬಂದು ಮೊದಲು ಕಂಪಳ ಹಾಕಿದ್ದು ಉಚ್ಚಂಗಿದುರ್ಗದಲ್ಲಿ. ಪಾಳೆಯಪಟ್ಟನ್ನು ಸ್ಥಾಪಿಸಿ ಬಿಳಿಚೋಡನ್ನು ಗೆದ್ದು, ಕೋಗುಂಡೆ, ಹೆಬ್ಬಾಳು ಮಾರ್ಗವಾಗಿ ನೀರ್ಥಡಿಗೆ ಪಾಳೆಯ ಹಾಕಿದರು. ಈ ಚಿತ್ರನಾಯಕರಿಗೆ ಮೂರು ಜನ ಮಕ್ಕಳು. ಒಬ್ಬರು ನೀರ್ಥಡಿಯಲ್ಲಿ ನೆಲೆಸಿದರೆ, ಇನ್ನೊಬ್ಬ ಶ್ಯಾಗಲೆಯಲ್ಲಿ, ಮತ್ತೊಬ್ಬರು ಮತ್ತಿ ಗ್ರಾಮದಲ್ಲಿ ನೆಲೆಸಿದರು. ಮತ್ತಿಯಲ್ಲಿ ನೆಲೆಸಿದ್ದು–ಸುಬ್ಬಗಡಿ ಓಬನಾಯಕನ ಮಗನೇ ಮತ್ತಿ ತಿಮ್ಮಣ್ಣನಾಯಕ. ಚಿತ್ರದುರ್ಗದ ಇತಿಹಾಸದಲ್ಲಿ ಮೊದಲ ಪಾಳೆಯಗಾರನೆಂದು

---

೧. ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.ಸಂ. ೧೦.

ಪ್ರಸಿದ್ಧನಾದವನು. ಈ ವಂಶದಲ್ಲಿ ಮತ್ತಿ ತಿಮ್ಮಣ್ಣನಾಯಕ (೧೫೬೮-೧೫೮೮) ಓಬಣ್ಣನಾಯಕ ೧೬೦೩, ಕಸ್ತೂರಿ ರಂಗಪ್ಪ ನಾಯಕ (೧೬೦೩-೧೬೫೨) ಇಮ್ಮಡಿ ಮದಕರಿನಾಯಕ ೧೬೫೨-೧೬೭೪, ಚಿಕ್ಕಣ್ಣನಾಯಕ ೧೬೭೪-೧೬೮೬. ಮುಮ್ಮಡಿ ಲಿಂಗನಾಯಕ ೧೬೮೬-೧೬೮೯.

ಮತ್ತಿ ತಿಮ್ಮಣ್ಣನಾಯಕನ ಮತ್ತಿ ವಂಶ ಕೊನೆಗೊಂಡಾಗ, ಬಿಳಿಚೋಡಿನ ಕಸ್ತೂರಿ ರಂಗಪ್ಪ ನಾಯಕರ ಮಗ ಬಿಚ್ಚುಗತ್ತಿ ಭರಮಣ್ಣನಾಯಕನಿಂದಲೇ ಬಿಳಿಚೋಡು ಸಂತತಿ ಪ್ರಾರಂಭ. ಬಿಚ್ಚುಗತ್ತಿ ಭರಮಣ್ಣ ನಾಯಕ ೧೬೮೯-೧೭೨೧, ಹಿರೇ ಮದಕರಿ ನಾಯಕ ೧೭೨೧-೧೭೪೮, ಕಸ್ತೂರಿ ರಂಗಪ್ಪ ನಾಯಕ ೧೭೪೮-೧೭೫೪ ರಾಜಾ ಮದಕರಿನಾಯಕ ೧೭೫೪-೧೭೭೯. ಮತ್ತಿ ತಿಮ್ಮಣ್ಣ ನಾಯಕ ತನ್ನ ಮಗಳು ಹೊನ್ನವ್ವ ನಗತಿಯನ್ನು ಹರಪನಹಳ್ಳಿ ಪಾಳೆಯಗಾರ ದಾದಯ್ಯ ನಾಯಕನಿಗೆ ಕೊಟ್ಟು ಮದುವೆ ಮಾಡಿದ್ದ. ಆದರೆ ಬೀಗರು, ನೆಂಟರು, ನಮ್ಮ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗದ ಕೋಟೆಗಾಗಿ ಬದ್ಧ ವೈರಿಗಳಾದರು. ಉಚ್ಚಂಗಿ ದುರ್ಗದ ಕೋಟೆ ಸದಾ ಯುದ್ಧ ಭೂಮಿಯಾಗಿರುತ್ತಿತ್ತು'[೨].

'ಹರಪನಹಳ್ಳಿಯವರಿಗೂ ಚಿತ್ರದುರ್ಗ ಪಾಳೆಯಗಾರರಿಗೂ ಐತಿಹಾಸಿಕ ದಾಖಲೆಗಳಾಗಿ ಉಳಿದಿರುವ ಭೀಕರ ಲಡಾಯಿಗಳು ನಡೆಯುತ್ತಿದ್ದುದೇ ನಮ್ಮ ದಾವಣಗೆರೆ ಜಿಲ್ಲೆಯಲ್ಲಿ. ಅಣಜಿ, ಆಲೂರು, ಬೇತೂರು, ಉಚ್ಚಂಗಿದುರ್ಗ, ಮಾಯಕೊಂಡ, ತೂಲಹಳ್ಳಿ, ಬಾತಿ, ಇವು ಅಂದಿನ ದುರ್ಗದವರ ಯುದ್ಧಭೂಮಿಗಳಾಗಿದ್ದವು'[೩].

ಭೌಗೋಳಿಕ ಹಿನ್ನಲೆ: ದಾವಣಗೆರೆ ಜಿಲ್ಲೆಗೆ ತನ್ನದೇ ಆದ ಒಂದು ವಿಶಿಷ್ಟತೆ ಇದೆ. ಕರ್ನಾಟಕ ಮಧ್ಯಭಾಗದಲ್ಲಿರುವ ದಾವಣಗೆರೆ ಜಿಲ್ಲೆಯು ಫಲವತ್ತಾದ ಭೂಮಿ, ನೀರಿನ ಆಸರೆ ಇಲ್ಲಿಯ ಆಚಾರ , ವಿಚಾರಗಳು, ಸಾಂಸ್ಕೃತಿಕವಾಗಿಯೂ, ಧಾರ್ಮಿಕ ಸಂಘಟನೆಗಳಿಂದಾಗಿಯೂ ಹಾಗೂ ಹಲವಾರು ವಿದ್ಯಾಕೇಂದ್ರಗಳು, ವಾಣಿಜ್ಯಕೇಂದ್ರಗಳನ್ನು ಹೊಂದಿದ ಇದು ಕರ್ನಾಟಕದ ಭೂಪಟದಲ್ಲಿ ತನ್ನದೇ ಆದ ಒಂದು ವಿಶಿಷ್ಟ ಸ್ಥಾನಮಾನವನ್ನು ಪಡೆದುಕೊಂಡಿದೆ. ಜಿಲ್ಲೆಯಲ್ಲಿರುವ ಗುಡ್ಡಗಾಡುಗಳು, ಕೋಟೆಗಳು, ಗುಡಿ, ಮಠ-ಮಾನ್ಯಗಳು ಹಾಗೂ ಇಲ್ಲಿಯ ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆ ಮುಂತಾದವುಗಳು ತಮ್ಮ ಸಂಸ್ಕೃತಿಯ ಪರಂಪರೆಯನ್ನು ಬಿಂಬಿಸುತ್ತಾ ಎಲ್ಲರನ್ನೂ ತನ್ನತ್ತ ಸೆಳೆದುಕೊಳ್ಳುತ್ತಲಿದೆ.

ಜಿಲ್ಲೆಯಾದ 'ದಾವಣಗೆರೆಯೂ ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದ್ದು, ೧೪-೨೮ ಡಿಗ್ರಿ ಅಕ್ಷಾಂಶ ೭೫-೫೯ ಡಿಗ್ರಿ ರೇಖಾಂಶಗಳಲ್ಲಿದೆ. ಸಮುದ್ರ ಮಟ್ಟಕ್ಕಿಂತ ಸರಾಸರಿ ೬೦೨.೬೦ ಮೀ ಎತ್ತರದಲ್ಲಿದೆ'[೪]. 'ಕರ್ನಾಟಕ ರಾಜ್ಯದ ೨೭ ಜಿಲ್ಲೆಗಳಲ್ಲಿ ದಾವಣಗೆರೆ ಜಿಲ್ಲೆಯೂ ಒಂದು.

---

೨. ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.ಸಂ. ೧೧.

೩. – ಅದೇ — , ಪು.ಸಂ. ೧೨.

೪. – ಅದೇ — , ಪು.ಸಂ. ೧೯.

೧೫.೦೮.೧೯೯೭ರ ವರೆಗೂ ಚಿತ್ರದುರ್ಗ ಜಿಲ್ಲೆಯ ಒಂಭತ್ತು ತಾಲ್ಲೂಕುಗಳಲ್ಲಿ ಇದು ಒಂದು ತಾಲ್ಲೂಕು ಆಗಿತ್ತು"[೫]. ಚಿತ್ರದುರ್ಗ ಜಿಲ್ಲೆಯಿಂದ ಬೇರ್ಪಟ್ಟು, ಹರಪನಹಳ್ಳಿ, ಹರಿಹರ, ದಾವಣಗೆರೆ, ಚನ್ನಗಿರಿ, ಜಗಳೂರು, ಹೊನ್ನಾಳಿ ಮುಂತಾದ ತಾಲ್ಲೂಕುಗಳನ್ನು ತನ್ನ ಒಡಲಲ್ಲಿ ಸೇರಿಸಿಕೊಂಡು ದಾವಣಗೆರೆಯೆಂಬ ಹೊಸ ಜಿಲ್ಲೆಯಾಗಿ ಹೊರಹೊಮ್ಮಿತು. ದಾವಣಗೆರೆಯ ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆ, ಉತ್ತರದಲ್ಲಿ ಹರಪನಹಳ್ಳಿ ತಾಲ್ಲೂಕು, ಪಶ್ಚಿಮದಲ್ಲಿ ಹರಿಹರ, ಹೊನ್ನಾಳಿ ತಾಲ್ಲೂಕುಗಳು ಹಾಗೂ ದಕ್ಷಿಣದಲ್ಲಿ ಚನ್ನಗಿರಿ ತಾಲ್ಲೂಕುಗಳಿಂದ ಕೂಡಿಕೊಂಡು ಹಲವಾರು ಬೆಟ್ಟಗುಡ್ಡಗಳು, ನದಿ–ಕೆರೆಗಳು ಮುಂತಾದವುಗಳಿಂದ ಸಮೃದ್ಧಿಯಾಗಿದೆ.

ಪ್ರಕೃತಿ ಪರಿಸರ: ಹರಿಹರ ತಾಲ್ಲೂಕಿನ ಕೊಂಡಜ್ಜಿಯು ದಾವಣಗೆರೆಯಿಂದ ಸುಮಾರು ೧೬ ಕಿ.ಮೀ ದೂರದಲ್ಲಿದ್ದೂ ಇದೂ ಸಹ ಒಂದು ಪ್ರೇಕ್ಷಣೀಯ ಸ್ಥಳವಾಗಿ ಮಾರ್ಪಟ್ಟಿದೆ. ಹರಿಹರ ಮತ್ತು ದಾವಣಗೆರೆಗೆ ಇದು ಮನೋರಂಜನೆಗೆ ಹೆಸರಾದ ಊರು. ಬೆಟ್ಟ–ಗುಡ್ಡಗಳ ಮಧ್ಯೆ ಕೊಂಡಜ್ಜಿಯಿಂದ ಎರಡು ಕಿ.ಮೀ ದೂರದಲ್ಲಿ ಒಂದು ದೊಡ್ಡದಾದ ಕೆರೆಯಿದೆ. ಅದರ ಸುತ್ತಲೂ ಬೆಳೆದ ಕಾಸಿದ್ದು ಅಲ್ಲಿ ಆಗಾಗ ಸ್ಕೌಟ್ ಮತ್ತು ಸಾಂಸ್ಕೃತಿಕ ಶಿಬಿರಗಳನ್ನು ಹಮ್ಮಿಕೊಂಡಿರುತ್ತಾರೆ.

ದಾವಣಗೆರೆಯಿಂದ ಚನ್ನಗಿರಿ ಮಾರ್ಗದಲ್ಲಿ ಹೋಗುವಾಗ ಚನ್ನಗಿರಿಗೆ ೨೦ ಕಿ.ಮೀ ದೂರದಲ್ಲಿ ಒಂದು ಸುಂದರವಾದ ಹಾಗೂ ದೊಡ್ಡದಾದ ಕೆರೆಯೊಂದಿದೆ. ಅದನ್ನು ಸೂಳೆಕೆರೆ ಎಂದು ಕರೆಯುತ್ತಾರೆ. ಇದರ ವಿಸ್ತೀರ್ಣ ಸುಮಾರು ೬೪ ಕಿ.ಮೀ ಸುತ್ತಳತೆಯನ್ನು ಹೊಂದಿದೆ. ಈ ಕೆರೆಯ ಬಳಿ ವಿಸ್ತಾರವಾದ ಬೆಟ್ಟಗುಡ್ಡಗಳ ಸಾಲು ಹಬ್ಬಿದೆ. ಕಾಲುವೆಗಳ ಮೂಲಕ ಈ ಕೆರೆಗೆಡ ನೀರು ಒದಗಿಸಲಾಗಿದ್ದು, ಮುಖ್ಯ ಕಾಲುವೆಗೆ ಹರಿದ್ರಾವತಿ ಎಂದು ಹೆಸರಿದೆ. ಇದು ಈ ತಾಲ್ಲೂಕಿನ ನದಿಯೂ ಹೌದು. ಈ ಸೂಳೆಕೆರೆಗೆ ಇಂತಹ ನಾಮಕರಣ ಬೇಡವೆಂದು ಅನೇಕರು ಇದನ್ನು "ಶಾಂತಿಸಾಗರ" ಎಂದು ನಾಮಕರಣ ಮಾಡಿದ್ದಾರೆ. ವಿಶಾಲವಾದ ಕೆರೆಯಂಚಿನಲ್ಲಿ ಸುಂದರವಾದ ಕಲ್ಲು ಮಂಟಪವಿದೆ. ದಾವಣಗೆರೆ ಜಿಲ್ಲೆಯ ಪ್ರಮುಖ ಎರಡು ವಿಹಾರಕ್ಷೇತ್ರಗಳಾದ ಕೊಂಡಜ್ಜಿ ಮತ್ತು ಸೂಳೆಕೆರೆಯೂ ಒಂದಾಗಿದೆ.

ಇದೇ ರೀತಿಯಾಗಿ ದಾವಣಗೆರೆಯಿಂದ ಬೆಂಗಳೂರಿಗೆ ಹೋಗುವ ಪಿ.ಬಿ.ರಸ್ತೆಯಲ್ಲಿ ೧೫ ಕಿ.ಮೀ ದೂರದಲ್ಲಿರುವ ಆನಗೋಡು ಕೂಡ ಒಂದು ಪ್ರವಾಸಿ ಸ್ಥಳವಾಗಿದೆ. ಇಲ್ಲಿ ಊರಿಗೆ ಒಂದು ಕಿ.ಮೀ ದೂರದಲ್ಲಿ ಇಂದಿರಾ ಪ್ರಿಯದರ್ಶಿನಿ ಉದ್ಯಾನವನವಿದೆ. ದಾವಣಗೆರೆ ಹಾಗೂ ಸುತ್ತಮುತ್ತಲಿನ ಸ್ಥಳದವರಿಗೆ ಇದು ಪ್ರವಾಸಿ ತಾಣವಾಗಿದೆ.

ದಾವಣಗೆರೆ ಹರಿಹರ ಮಧ್ಯದಲ್ಲಿ ಇರುವ ದೊಡ್ಡಬಾತಿಯು, ಹರಿಹರ ದಾವಣಗೆರೆ ತಾಲ್ಲೂಕುಗಳನ್ನು ಒಂದುಗೂಡಿಸುವ ಇದು ಸದಾ ಹಸಿರು–ತಪ್ಪಲಿನಲ್ಲಿರುವ ಒಂದು ಗ್ರಾಮ. ಇಲ್ಲಿ

---

೫. ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.ಸಂ. ೦೨.

ಒಂದು ದೊಡ್ಡದಾದ ಬೆಟ್ಟವೊಂದಿದೆ. ಬೆಟ್ಟದ ಮೇಲೆ ರೇವಣಸಿದ್ದೇಶ್ವರ ದೇವಾಲಯವಿದೆ. ಗುಡ್ಡದ ಮೇಲಿರುವ ರೇವಣಸಿದ್ದೇಶ್ವರ ದೇವಾಲಯದಿಂದ ತುಂಬಾ ಸುಂದರವಾದ ಪ್ರಕೃತಿಯು ಹಸಿರಿನಿಂದ ಕಂಗೊಳಿಸುವುದನ್ನು ಕಾಣಬಹುದು.

ದಾವಣಗೆರೆಗೆ ತಾಗಿಕೊಂಡು ಇರುವ ಕುಂದವಾಡವು ಸಾಮಾನ್ಯ ಹಳ್ಳಿಯಾದರೂ ಪ್ರಾಚೀನ ಇತಿಹಾಸದಿಂದ ಸಂಶೋಧನೆಗೆ ಉಪಯುಕ್ತ ಗ್ರಾಮವಾಗಿದೆ. ಇಲ್ಲಿ ಸುಮಾರು ಎಂಟು ಕಿ.ಮಿ ಸುತ್ತಳತೆ ಹೊಂದಿದ ಒಂದು ಕೆರೆಯಿದೆ. ಈಗ ಜೀರ್ಣಾವಸ್ಥೆಯನ್ನು ಹೊಂದಿ ಇದು ಕೂಡ ಒಂದು ಪ್ರವಾಸಿತಾಣವಾಗಿ ಇಂದು ಮಲ್ಲಿಕಾರ್ಜುನ ಸಾಗರ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ದಾವಣಗೆರೆ ಜಿಲ್ಲೆ ವಾಣಿಜ್ಯ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದಂತೆ ಶಿಕ್ಷಣ ಕ್ಷೇತ್ರದಲ್ಲೂ ಹಲವಾರು ಕೊಡುಗೆಗಳನ್ನು ಕೊಟ್ಟ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳು ವಿಫಲವಾಗಿ ಬೆಳೆಯಲು ಇಲ್ಲಿರುವ ಹಲವಾರು ಶ್ರೀಮಂತ ಮನೆತನದವರು ಕೊಟ್ಟ ದಾನ-ಧರ್ಮ ಮೂಲವಾದ ಆಧಾರವಾಗಿವೆ. ವೈದ್ಯಕೀಯ, ಪಶು ವೈದ್ಯಕೀಯ, ನೃತ್ಯ ಮತ್ತು ಸಂಗೀತ, ಇಂಜನೀಯರಿಂಗ್, ಹೋಟೆಲ ಉದ್ಯಮ ಮುಂತಾದ ಹಲವಾರು ಶಿಕ್ಷಣ ಸಂಸ್ಥೆಗಳಿವೆ. ಪದವಿ ಪೂರ್ವ ಹಾಗೂ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರಗಳವರೆಗೆ ಪದವಿ ಕೊಡುವ ಸಂಸ್ಥೆಗಳಿದ್ದು ಅವುಗಳು ಅಷ್ಟು ಅಭಿವೃದ್ಧಿ ಹೊಂದಲು ಹಲವು ಮನೆತನದವರು ಕೊಟ್ಟ ದಾನಧರ್ಮಗಳು ಒಂದು ಕಡೆಯಾದರೆ ಇನ್ನೊಂದು ಕಡೆಗೆ ದಾವಣಗೆರೆಯು ಕರ್ನಾಟಕದ ಕೇಂದ್ರ ಸ್ಥಳವಾಗಿರುವುದು.

'೧೯೩೪ರಲ್ಲಿ ರಾಷ್ಟ್ರಪತಿ ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ದಾವಣಗೆರೆಗೆ ಭೇಟಿ ನೀಡಿದಾಗ ಮಹಾತ್ಮಾ ಗಾಂಧಿ ವಿದ್ಯಾರ್ಥಿನಿಲಯಕ್ಕೆ ಅಡಿಗಲ್ಲು ಹಾಕಿದ್ದು ಒಂದು ಅವಿಸ್ಮರಣಿಯ ದಿನ. ಅದರಂತೆ ೧೯೦೦ರ ಸುಮಾರಿನಲ್ಲಿ ದಾವಣಗೆರೆಯಲ್ಲಿ ಪ್ರಾರಂಭವಾದ ಮೊದಲ ಶಾಲೆ ಅಂದಿನ **'ಆಂಗ್ಲೊವರ್ನಾಕುಲರ್'** ಶಾಲೆ, ಇಂದಿನ ಓಲ್ಡ್ ಮಿಡ್ಲ್ ಸ್ಕೂಲ್'[೬]. ಅಂದಿನಿಂದ ಇಲ್ಲಿಯವರೆಗೂ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಪ್ರಗತಿಗಳನ್ನು ಕಾಣಬಹುದಾಗಿದೆ. ಹಲವಾರು ವಿದ್ಯಾರ್ಥಿನಿಲಯಗಳನ್ನು ಹೊಂದಿ ಅತ್ಯುತ್ತಮವಾದ ಶಿಕ್ಷಣವನ್ನು ಕೊಡುತ್ತಿರುವುದರಿಂದ ಈ ಜಿಲ್ಲೆಗೆ ಹೆಚ್ಚಿನ ಮಹತ್ವ ಬಂದಿದೆ ದಾವಣಗೆರೆ ನಗರದಲ್ಲಿ ಯಾವುದೇ ರಾಜಕೀಯ ಸಭೆ, ಸಮಾರಂಭಗಳು ಹಾಗೂ ಕ್ರೀಡಾಕೂಟಗಳು, ಸಮಾವೇಶಗಳು ನಡೆದರೂ ಅದು ನಗರ ಸರಕಾರಿ ಪ್ರೌಢಶಾಲೆ ಮೈದಾನದಲ್ಲಿ. ಇಟ್ಟಿಗೆ ಹಾಗೂ ಗಾರೆಗಳಿಂದ ಕಟ್ಟಿದ ಈ ಸುಂದರವಾದ ಕಟ್ಟಡವು ಇಂದಿಗೂ ತನ್ನ ಹಿರಿಮೆಯನ್ನು ಉಳಿಸಿಕೊಂಡು ಬಂದಿದೆ.

---

೬ ಡಾ. ಹೆಚ್.ವಿ ಶಿವಶಂಕರ, ಶತಮಾನದ ದಾವಣಗೆರೆ, ಪು.ಸಂ. ೯೫.

ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣದಂತೆ ಸಾಂಸ್ಕ್ರತಿಕ ವಿಷಯಗಳನ್ನು ಭೋದಿಸಲು ಹಲವಾರು ಶಾಲೆಗಳು, ಕಾಲೇಜುಗಳು ಇವೆ. ಇವುಗಳ ಸಮಾಜದ ಅಗತ್ಯತೆಯನ್ನು ನೀಗಿಸುತ್ತಾ ಜನರಲ್ಲಿ ಅವುಗಳ ಬಗ್ಗೆ ಅರಿವು ಮೂಡುವಲ್ಲಿ ಸಹಾಯ ಮಾಡುತ್ತಿವೆ. ಚಿತ್ರಕಲಾ ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವದಾದರೆ ಕರ್ನಾಟಕ ರಾಜ್ಯದ ತಾಂತ್ರಿಕ ಶಿಕ್ಷಣದ ಆಶ್ರಯದಲ್ಲಿ ಪ್ರಾರಂಭವಾದ ಕಲಾಶಾಲೆಯು ಸರಕಾರಿ ಲಲಿತಕಲೆ ಮತ್ತು ಕರಕುಶಲ ಶಾಲೆ ಎಂದು ನಾಮಕರಣಗೊಂಡು ೧೯೬೪ ರಲ್ಲಿ ಪ್ರಾರಂಭವಾಯಿತು. ಈ ಕಲಾಶಾಲೆಯು ಅತೀ ದೊಡ್ಡವಾದ ಸುಮಾರು ೨೩ ಎಕರೆಯಷ್ಟು ನಿವೇಶನವನ್ನು ಹೊಂದಿದೆ. ಇಲ್ಲಿ ಐದು ವರ್ಷಗಳ ಲಲಿತಕಲೆ ಮತ್ತು ವಾಣಿಜ್ಯ ಕಲೆ ಎಂಬ ಕಲಾ ವಿಷಯಗಳಲ್ಲಿ ಅಧ್ಯಯನವನ್ನು ಮಾಡಿಸಲಾಗುತ್ತದೆ. ಲಲಿತಕಲೆಯಲ್ಲಿ ಬರುವಂತಹ ಇನ್ನಿತರ ಕಲೆಗಳಾದ ಶಿಲ್ಪಕಲೆ, ಗ್ರಾಫಿಕ್ ಕಲೆಗಳಲ್ಲಿಯೂ ಸಹ ತರಬೇತಿ ನೀಡಲಾಗುತ್ತದೆ. ೧೯೯೨ ರಲ್ಲಿ ಇದು ತಾಂತ್ರಿಕ ಶಿಕ್ಷಣದಿಂದ ಬೇರ್ಪಟ್ಟು ಕುವೆಂಪು ವಿಶ್ವವಿದ್ಯಾಲಯಕ್ಕೆ ಹಸ್ತಾಂತರವಾಯಿತು. ಇಲ್ಲಿಯ ಕಲಾಶಾಲೆಯಲ್ಲಿ ಕಲಿತು ಹೊದಂತಹ ಹಲವಾರು ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಪ್ರಖ್ಯಾತರಾಗಿದ್ದಾರೆ. ಇದಕ್ಕೆ ಕಾರಣ ಇಲ್ಲಿ ದೊರೆತಂತಹ ಉನ್ನತ ಮಟ್ಟದ ಕಲಾ ಶಿಕ್ಷಣವು ಕಾರಣವೆನ್ನಬಹುದು. ಇಲ್ಲಿ ಕೊಡುತ್ತಿರುವ ಕಲಾ ಶಿಕ್ಷಣವು ವಿಭಿನ್ನತೆಯಿಂದ ಕೂಡಿದ್ದು ಅವುಗಳನ್ನು ಬಗೆ ಬಗೆಯ ವಿಧಗಳಿಂದ ನೋಡುವುದು ಹಾಗೂ ಹೊಸ ಹೊಸ ತಂತ್ರಗಳನ್ನು ಬಳಸಿ ಕಲಾಕೃತಿಗಳ ರಚನೆಯನ್ನು ಮಾಡುವುದನ್ನು ಕಲಿಸಿ ಕೊಡಲಾಗುತ್ತಿದ್ದು, ಇದರಿಂದ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನ ಪ್ರಾಪ್ತಿಯಾಗುವುದಲ್ಲದೇ ಅದರಲ್ಲಿ ಹೆಚ್ಚಿನ ಪ್ರಾವಿಣ್ಯತೆಯನ್ನು ಪಡೆಯಬಹುದಾಗಿದೆ. ಈ ಚಿತ್ರಕಲಾ ಶಾಲೆಯು ದಾವಣಗೆರೆ ಜಿಲ್ಲೆಯ ಸಂಸ್ಕೃತಿಯ ಬದುಕಿನಲ್ಲಿ ಹೊಸದೊಂದು ಆಯಾಮ ನೀಡುವಲ್ಲಿ ಕಾರಣಿಕರ್ತವಾಗಿದೆ. ಒಂದಾನೊಂದು ಕಾಲದಲ್ಲಿ ಈ ಕಲಾ ಶಾಲೆಯ ಖಾಲಿಯಾಗಿ ಉಳಿದಿದ್ದ ನಿವೇಶನವನ್ನು ಸರ್ಕಾರವು ಜಿಲ್ಲಾ ಮಟ್ಟದ ಅಧಿಕಾರಿಗಳ ವಸತಿ ಗೃಹಗಳನ್ನು ಕಟ್ಟುವದಕ್ಕೊಸ್ಕರ ಅದನ್ನು ಸ್ವಾಧೀನಪಡಿಸಿಕೊಳ್ಳವ ಯತ್ನವನ್ನು ಮಾಡಿತ್ತು, ಆದರೆ ನಗರದ ಶಿಕ್ಷಣ ಪ್ರೇಮಿಗಳು, ಕಲಾ ಪ್ರೇಮಿಗಳು ಒಂದಾಗಿ ಹೋರಾಟವನ್ನು ಮಾಡಿ ಅದನ್ನು ಉಳಿಸಿಕೊಂಡಿದ್ದಾರೆ. ಇದರಿಂದ ದಾವಣಗೆರೆ ಜಿಲ್ಲೆಯಲ್ಲಿನ ಜನರಲ್ಲಿ ಸಾಂಸ್ಕ್ರತಿಕ ಜೀವನದ ಮೇಲಿನ ಪ್ರೀತಿ, ಪ್ರೇಮ ಮುಂತಾದವುಗಳಿಗೆ ಕನ್ನಡಿ ಹಿಡಿದಂತದೆ.

ಸಾಂಸ್ಕ್ರತಿಕ ಹಿನ್ನೆಲೆ: ಐವತ್ತರ ದಶಕದಿಂದೀಚೆಗೆ ದಾವಣಗೆರೆ ಸಾಹಿತ್ಯ ಮತ್ತು ಸಾಂಸ್ಕ್ರತಿಗಳ ಕ್ಷೇತ್ರಗಳನ್ನು ಮೈಗೂಡಿಸಿಕೊಂಡು ಬೆಳೆಯುವ ಉತ್ಸುಕತೆ ತೋರಿರುವದು ಕಂಡು ಬರುತ್ತದೆ. ಇಲ್ಲಿನ ವಿದ್ಯಾಕೇಂದ್ರಗಳು ಬೆಳೆಯುತ್ತಾ ಹೊದಂತೆ ಸಾಂಸ್ಕ್ರತಿಕ ಮಹತ್ವ ಕಾಣತೊಡಗಿರುವುದು ಕಂಡುಬರುತ್ತದೆ.

ದಾವಣಗೆರೆ ಜಿಲ್ಲೆಗೆ ತನ್ನದೇ ಆದ ಸಾಂಸ್ಕೃತಿಕ ವಿಶಿಷ್ಟತೆ ಇದೆ. ಇಲ್ಲಿನ ಜನ

ದೀಪಾವಳಿಯನ್ನು ಅತ್ಯಂತ ಸಡಗರದಿಂದ ಆಚರಿಸುತ್ತಾರೆ. ಯುಗಾದಿ ಮತ್ತು ಗಣೇಶನ ಹಬ್ಬವನ್ನೂ ಸಹ ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಾರೆ ಸಾಮಾನ್ಯವಾಗಿ ಎಲ್ಲಾ ಹಬ್ಬ-ಹರಿದಿನಗಳನ್ನು ಆಚರಿಸುವ ಪರಿಪಾಠ (ಪದ್ಧತಿ)ವನ್ನು ಜಿಲ್ಲೆಯಲ್ಲಿ ನಾವು ಕಾಣುತ್ತೇವಾದರೂ ದೀಪಾವಳಿಯಷ್ಟು ವಿಜೃಂಭಣೆ ಉಳಿದ ಯಾವ ಹಬ್ಬಗಳಿಗೂ ಇಲ್ಲ. ದೀಪಾವಳಿಯ ನಂತರದ ಪ್ರಾಶಸ್ತ್ಯ ನಾಗರ ಪಂಚಮಿಗೆ. ದಾವಣಗೆರೆಯ ಬಕ್ಕೇಶ್ವರ ಹಾಗೂ ಹಳೆಪೇಟೆ ವೀರಭದ್ರೇಶ್ವರನ ರಥೋತ್ಸವಗಳು ಎರಡು ವರ್ಷಗಳಿಗೊಮ್ಮೆ ನಡೆಯುವ ದುರ್ಗಾಂಬಿಕಾ ಜಾತ್ರೆ ಈ ಜಿಲ್ಲೆಯಲ್ಲಿಯೇ ದೊಡ್ಡ ಪ್ರಮಾಣದಲ್ಲಿ ನಡೆಯುವ ರಥೋತ್ಸವಗಳು. ಎರಡು ವರ್ಷಗಳಿಗೊಮ್ಮೆ ನಡೆಯುವ ದುರ್ಗಾಂಬಿಕಾ ಜಾತ್ರೆ, ಈ ಜಿಲ್ಲೆಯಲ್ಲಿ ಜರುಗುವ ಜಾತ್ರೆಗಳಲ್ಲಿಯೇ ಬೃಹತ್ ಪ್ರಮಾಣದ್ದಾಗಿರುತ್ತದೆ. ತಿಂಗಳುಗಟ್ಟಲೆ ಈ ಜಾತ್ರಾ ನಿಮಿತ್ತ ದುರ್ಗಾಂಬಿಕಾ ದೇವಾಲಯ ಆವರಣದಲ್ಲಿ ಸಂಗೀತಾದಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಲಸ್ಪಟ್ಟಿರುತ್ತವೆ. ದುರ್ಗಾಂಬಿಕಾ ದೇವಿ ನಗರದ ನಗರದೇವತೆಯಾಗಿರುವ ಕಾರಣಕ್ಕಾಗಿ ನಗರದಲ್ಲಿ ನೆಲೆಸಿರುವ ಹತ್ತೆಂಟು ಬಗೆಯ ಜಾತಿ-ಪಂಗಡಗಳ ಜನ ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಅಲ್ಲದೆ ಈ ನಗರದ ಆಸುಪಾಸಿನ ಊರುಗಳಲ್ಲಿ ನೆಲೆಸಿರುವ ಜನರೂ ಧಾರ್ಮಿಕ ಮತ್ತು ವ್ಯಾಪಾರ ದೃಷ್ಟಿಯಿಂದ ಈ ಜಾತ್ರೆಗೆ ಆಗಮಿಸುತ್ತಾರೆ. ಇಲ್ಲಿನ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯದವರು ಆಯಾ ದಿನಗಳಂದು ತಮ್ಮ ತಮ್ಮ ಹಬ್ಬಗಳನ್ನು ಶ್ರದ್ಧೋತ್ಸಾಹಗಳಿಂದ ಆಚರಿಸುತ್ತಾರೆ. ಆಯ್ಯಪ್ಪಸ್ವಾಮಿ ಉತ್ಸವಗಳು ವಿಜೃಂಭಣೆಯಿಂದ ಆಚರಣೆಗೊಳ್ಳುತ್ತಿರುವುದು ಇಲ್ಲಿನ ಇತ್ತೀಚೆಗಿನ ಸಾಂಸ್ಕೃತಿಕ ಬೆಳವಣಿಗೆಯಾಗಿದೆ. ಈ ಎಲ್ಲ ಹಬ್ಬ-ವಿಶೇಷಗಳಲ್ಲದೆ ದಾವಣಗೆರೆಯ ಜನ ಸಮೀಪದ ಅವರಗೊಳ್ಳದ ಈರಣ್ಣನ ಜಾತ್ರೆ, ಹೆಬ್ಬಾಳು ಕಾರ್ತಿಕ, ಬಾತಿ ಉರುಸ್, ಸಿದ್ದೇಶ್ವರ ಜಾತ್ರೆ, ಕಂದುವಾಡ ಆಂಜನೇಯ ಜಾತ್ರೆ ಮೊದಲಾದ ಜಾತ್ರಾ ವಿಶೇಷಗಳಿಗೂ ಹೋಗುತ್ತಾರೆ.

ದಾವಣಗೆರೆಯಲ್ಲೂ ಹೊರಗಿನಿಂದ ಬಂದು ನೆಲೆನಿಂತವರೆ ತುಂಬ ಜನ ಎಂದರೂ ಅತಿಶಯವಲ್ಲ. ಇಲ್ಲಿ ಕನ್ನಡ ಪ್ರಧಾನವಾಗಿ ಬಳಕೆಯಲ್ಲಿದ್ದರೂ ವಿವಿಧ ಭಾಷೆಯ ಬಳಕೆಯೂ ಇದೆ. ದಾವಣಗೆರೆಯಲ್ಲಿ ಬಳಕೆಯಲ್ಲಿರುವ ಕನ್ನಡ ಧಾರವಾಡ ಕನ್ನಡಕ್ಕೆ ಹತ್ತಿರವಾದಂತಹ ಕನ್ನಡ. ಭಾಷೆಯಲ್ಲಿ ಮೊನಚಿದೆ ತುಸು ಗಡಸುಗಾರಿಕೆ ಇದೆ. ಇಲ್ಲಿನ ಜನ ವ್ಯವಹಾರ ಕುಶಲರು, ವ್ಯಾಪಾರಿ ಮನೋಭಾವ ಇಲ್ಲಿನ ಮಣ್ಣಿನಲ್ಲಿಯೇ ಹಾಸು ಹೊಕ್ಕಾಗಿದೆ. ಸಾಮಾನ್ಯವಾಗಿ ಸದಾ ಕಾರ್ಯ ತತ್ಪರತೆ ಇಲ್ಲಿನ ಜನತೆಯ ಗುಣ ಬುದ್ಧಿವಂತರು, ಮೃದು ಸ್ವಭಾವಿಗಳು, ಒರಟರು ಹೀಗೆ ಬಗೆ ಬಗೆಯ ಗುಣ-ಸ್ವಭಾವದ ಜನ ಇಲ್ಲಿ ನೆಲೆ ನಿಂತಿರುವದರಿಂದ ಇಲ್ಲಿನ ಒಟ್ಟಾರೆ ಜನತೆಯ ನಡೆನುಡಿಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ.

ಅಂತೆಯೇ ದಾವಣಗೆರೆ ಜಿಲ್ಲೆಯು ಚಿತ್ರಕಲೆ, ಶಿಲ್ಪಕಲೆ, ವಾಸ್ತು ಶಿಲ್ಪ, ಸಾಹಿತ್ಯ, ಸಂಗೀತ, ನಾಟಕ, ನಾಟ್ಯ, ಕಲೆಗಳ ಪ್ರತಿಭಾ ಸಂಪನ್ನರ ನೆಲೆಯೂ ಹೌದು.

ಚಿತ್ರಕಲೆ

ದಾವಣಗೆರೆ ಜಿಲ್ಲೆಯಲ್ಲಿ ಪ್ರಾಚೀನವಾದ ಇತಿಹಾಸಗಳಿಂದ ದೊರೆಯುವ ಸ್ಥಳಗಳಲ್ಲಿ ಯಾವುದೇ ರೀತಿಯ ಚಿತ್ರಗಳು ಇಲ್ಲಿ ಕಾಣಿಸುವುದಿಲ್ಲ. ಇತ್ತೀಚಿನ ಕಾಲದಲ್ಲಿರುವ ಮಠ, ಮಾನ್ಯಗಳಲ್ಲಿನ ಗೋಡೆಗಳ ಮೇಲೆ ಕೆಲವೊಂದು ಚಿತ್ರಗಳನ್ನು ಕಾಣಬಹುದಾಗಿದೆ. ಹಬ್ಬ ಹರಿದಿನಗಳಲ್ಲಿ ಮನೆಯ ಮುಂಭಾಗಗಳಲ್ಲಿ, ಗೋಡೆಗಳ ಒಳಾಂಗಣಗಳಲ್ಲಿ ಕೆಲವೊಂದು ಚಿತ್ರಗಳನ್ನು ಚಿತ್ರಿಸಿದ್ದನ್ನು ಕಾಣಬಹುದಾಗಿದೆ. ಒಂದೇ ಬಗೆಯ ವಿವಿಧ ರೀತಿಯ ವಿನ್ಯಾಸಗಳನ್ನು ಬಳಸಿಕೊಂಡು ಅವುಗಳ ಮಧ್ಯೆ ಕೆಲವು ಬಣ್ಣಗಳನ್ನು ಬಳಕೆ ಮಾಡಿಕೊಂಡು ಚಿತ್ರ ರಚನೆಯನ್ನು ಮಾಡುತ್ತಾರೆ. ಇಲ್ಲಿ ಪುರಾತನ ಚಿತ್ರಗಳು ಕಾಣಸಿಗದಿದ್ದರು ಇತ್ತೀಚಿನ ಚಿತ್ರಗಳನ್ನು ಮಾತ್ರ ಕಾಣಬಹುದಾಗಿದೆ. ಜಾನಪದ ಚಿತ್ರಕಲಾವಿದರಾದ ಪತಿಯಪ್ಪ, ಶಂಕರಪ್ಪ ಕಮ್ಮಾರವರಂತಹ ಕಲಾವಿದರು ರಚಿಸಿದ ಚಿತ್ರಗಳನ್ನು ನೋಡಬಹುದಾಗಿದೆ.

ಇವುಗಳಿಂದ ದಾವಣಗೆರೆ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಸುಂದರವಾಗಲು ಕಾರಣವಾಗಿವೆ. ಚಿತ್ರಗಳಲ್ಲಿ ಈಗ ಸಮಕಾಲೀನ ಅರಿವು ಮೂಡಿಸುವ ಪ್ರಯತ್ನವೂ ಇಲ್ಲಿ ನಡೆಯುತ್ತಿರುವದರಿಂದ ಇಲ್ಲಿನ ಜನತೆಗೆ ಕಲೆಯ ನವ್ಯ ಸ್ವರೂಪದ ಅರಿವು ಅಷ್ಟಿಷ್ಟು ಮೂಡಲು ಕಾರಣವಾಗಿದೆ. ಇಲ್ಲಿನ ಅನೇಕ ಕಲಾವಿದರುಗಳು ರಾಜ್ಯ / ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿರುವದು ಗಮನಾರ್ಹ. ವಿ.ಬಿ. ಹಿರೇಗೌಡರ್, ಶಂಕರ ಪಾಟೀಲ, ಕಾಳಿದಾಸ್ ಪತ್ತಾರ, ಟಿ. ಬಿ. ಸೊಬಕ್ಕನವರ್, ವೈ.ಎಚ್. ಸೂಗೂರ್, ಟಿ.ವಿ. ಗಣೇಶನಗುಡಿ, ಬಿ.ಆರ್. ಕೊರ್ತಿ, ಮಲ್ಲಿಕಾರ್ಜುನ್ ಜಾಧವ್ ಪ್ರಮುಖರು. ಇಲ್ಲಿ ಕಲಿತು ಹೊರ ಹೋಗಿ ತಮ್ಮ ಪ್ರತಿಭೆಯನ್ನು ಬೆಳಗಿದವರಲ್ಲಿ ಇವರು ಪ್ರಮುಖರು.

ಹಿರೇಗೌಡರ್‌ರವರು ಸುಮಾರು ೩ ದಶಕಗಳ ಕಾಲ ದಾವಣಗೆರೆಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದವರು. ಕರ್ನಾಟಕ ಲಲಿತಕಲಾ ಅಕಾಡೆಮಿ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿವೆ. ಸುಮಾರು ೨೭ ವರ್ಷಗಳ ಕಾಲ ಮಹಾವಿದ್ಯಾಲಯ ಪ್ರಾಚಾರ್ಯರಾಗಿ ದುಡಿದವರು. ಇವರ ಕೃತಿಗಳಲ್ಲಿ ನೈಜತೆಯ ಜೊತೆಗೆ ರಮಣೀಯತೆ ಸಮ್ಮಿಶ್ರಣವಾಗಿರುತ್ತದೆ, ಇತ್ತೀಚೆಗಿನ ಕೆಲವು ವರ್ಷಗಳಿಂದ ನವ್ಯತೆಗೂ ತಮ್ಮನ್ನು ತೆರೆದುಕೊಂಡು, ಸಮಕಾಲೀನ ಕಲಾ ಧೋರಣೆಗೂ ತಮ್ಮನ್ನು ಸ್ಪಂದಿಸುತ್ತ ಕಲಾಕೃತಿ ರಚಿಸುತ್ತಾರೆ, ರಾಜ್ಯದ ಕಲಾ ವಲಯದಲ್ಲಿ ತಮ್ಮದೇ ಆದ 'ಅಲೆ' (Trend) ಸೃಷ್ಟಿಸಿಕೊಂಡರು.

ಶ್ರೀ ಶಂಕರ ಪಾಟೀಲರು ವಾಣಿಜ್ಯ ಕಲಾ ವಿಭಾಗದಲ್ಲಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದವರು ಮುಂಬೈ ಜೆ.ಜೆ. ಕಲಾ ಶಾಲೆಯ ಕಲಿತು ಬಂದವರು. ಕಲೆಯ ಬಗ್ಗೆ ಅಪರಿಮಿತ ಆಸಕ್ತಿ, ಕುತೂಹಲ ಹೊಂದಿದ್ದರು. ಚೌಕ ವರ್ಣಚಿತ್ರಗಳನ್ನು ಮತ್ತು ರೇಖಾ

ಚಿತ್ರಗಳನ್ನು ರಚಿಸಿದ್ದಾರೆ. ಕೃತಿಗಳಲ್ಲಿ ನಿರಂತರ ಪ್ರಯೋಗ ಶೀಲತೆ ಎದ್ದು ಕಾಣುವ ಅಂಶ. ಯಾವುದೇ ಒಂದು ಕಲಾ ಶೈಲಿಗೂ ಇವರು ಬದ್ಧರಾಗಿದ್ದವರಲ್ಲ. ಜೊತೆಗೆ ಶಾಸ್ತ್ರೀಯ ಸಂಗೀತದಲ್ಲೂ ಆಸಕ್ತಿ ಹೊಂದಿರುವರಾಗಿದ್ದರು ಇವರ ಸಹಜ ಗುಣವಾಗಿತ್ತು.

ಕಾಳಿದಾಸ ಪತ್ತಾರ್ ತಮ್ಮ ಕಲಾಕೃತಿಗಳಲ್ಲೂ ಜಾನಪದ ಸಂಸ್ಕೃತಿಯನ್ನು ಅಭಿವ್ಯಕ್ತಿಸಿದ್ದಾರೆ. ವಿಶೇಷವಾಗಿ ಗ್ರಾಮೀಣ ಬುಡಕಟ್ಟು ಜನಾಂಗದ ಸ್ತ್ರೀ ಆಕೃತಿಗಳೂ ಸಹ ಇವನ ಕೃತಿಗಳಲ್ಲಿ ತೋರ್ಪಡಿಕೆಯಾಗಿವೆ. ಹಳದಿ, ಕೆಂಪು, ನೀಲಿ, ಹಸಿರು ಈ ವರ್ಣಗಳೇ ಕೃತಿಗಳಲ್ಲಿ ಕಂಡುಬರುತ್ತವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿದ್ದು ಕೆಲವು ಸಮಯ ಮೈಸೂರಿನ ಕಾವಾದ ಡೀನ್ ಅಗಿ ಕಾರ್ಯ ನಿರ್ವಹಿಸಿದವರು.

ಶ್ರೀ ವೈ.ಹೆಚ್.ಸೂಗುರವರು ತಾಂತ್ರಿಕ ಆಚರಣೆಯಲ್ಲಿ ಕಂಡು ಬರುವಂತಹ ಜ್ಯಾಮಿತಿಕ, ಅವುಗಳಲ್ಲಿನ ಬಣ್ಣಗಾರಿಕೆಗಳಿಂದ, ಆಕರ್ಷಿತರಾಗಿ ತಾಂತ್ರಿಕ ಶೈಲಿಗೆ ಹತ್ತಿರವಾಗುವಂತಹ ಕಲಾಕೃತಿಗಳನ್ನು ರಚಿಸಿದವರು. ತಾಂತ್ರಿಕ ಆಚರಣೆಯಲ್ಲಿ ಮತ್ತೆ ಮತ್ತೆ ಪುನರಾವರ್ತಗೊಳ್ಳುವ ವಿವಿಧ ವರ್ಣಗಳ ಮಂಡಲಗಳು, ಲಿಂಗ, ಯೋನಿ, ನಾಗ, ಅರ್ಧ, ವೃತ್ತಾಕಾರ, ತ್ರಿಭುಜಾಕೃತಿಗಳು ಇತ್ಯಾದಿ ಆಕಾರಗಳು ಸಂಯೋಜನಗೊಂಡಿವೆ.

ಬಿ.ಆರ್. ಕೊರ್ತಿಯವರು ಅನೇಕ ವರ್ಷಗಳಿಂದ ಸಂಧಿವಾಸದಿಂದ ಪೀಡಿತರಾಗಿದ್ದರೂ ಚಿತ್ರಕಲೆಯಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿರುವವರು. ನಿಸರ್ಗ ಚಿತ್ರಣದಲ್ಲಿ ಮತ್ತು ಭಾವ ಚಿತ್ರಣದಲ್ಲಿ ಪಳಗಿದವರು, ಕರ್ನಾಟಕ ಲಲಿತಕಲಾ ಅಕಾಡೆಮಿಯಲ್ಲಿ ಸದಸ್ಯರಾಗಿದ್ದರು.

ಮಲ್ಲಿಕಾರ್ಜುನ ಜಾಧವ್ ಚಿತ್ರಕಲಾವಿದರಷ್ಟೇ ಅಲ್ಲ. ಸಂಗೀತ ಪ್ರೀಯರು. ನಾಟಕಾಸಕ್ತರು, ದಾವಣಗೆರೆಯ ಸಾಂಸ್ಕೃತಿಕ ವಲಯದಲ್ಲಿ ಸಹೃದಯ ಕಲಾಪ್ರೇಮಿಗಳೆಂದು ಗುರುತಿಸಿಕೊಂಡವರು. ಕಲೆಯ ಕುರಿತು ಸೊಗಸಾಗಿ ಮಾತನಾಡುವ ಜಾಣ್ಮೆ ಇದೆ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಶಿಲ್ಪಕಲೆ

ದಾವಣಗೆರೆ ಜಿಲ್ಲೆಯು ಶಿಲ್ಪ ಕಲೆಗೆ ಹೆಸರುವಾಸಿಯಾಗಿದೆ. ಇಲ್ಲಿನ ದೇವಾಲಯಗಳ ಮೇಲಿರುವ ಶಿಲ್ಪಗಳು ಇದಕ್ಕೆ ಸಾಕ್ಷಿಯಾಗಿ ನಿಂತಿವೆ. ದಾವಣಗೆರೆ ಭರಮಸಾಗರದ ಮಧ್ಯೆ ಲಕ್ಕಮುತ್ತೇನ ಹಳ್ಳಿ ಕ್ರಾಸ್‌ನಿಂದ ಸುಮಾರು ೨ ಕಿ.ಮೀ. ದೂರದಲ್ಲಿ ನೀರ್ಥಡಿಯೆಂಬ ಗ್ರಾಮವಿದೆ. ಅಲ್ಲಿ ಒಂದು ಸುಂದರವಾದ ಹಾಗೂ ಕಲಾತ್ಮಕವಾದ ಒಂದು ದೇವಾಲಯವಿದ್ದು ಅದು ಶ್ರೀರಂಗನಾಥ ಸ್ವಾಮಿ ದೇವಾಲಯವೆಂದು ಕರೆಯಲ್ಪಡುತ್ತದೆ. ದೇವಾಲಯದ ಎರಡು ಕಡೆಗಳಲ್ಲಿ ಜಗುಲಿಗಳಿದ್ದು ಅದು ತುಂಬಾ ಸುಂದರವಾದ ಕಲಾಕೃತಿಗಳನ್ನು ಹೊಂದಿದ ಕಂಬಗಳಿಂದ ಕೂಡಿದೆ. ದೇವಾಲಯದ ಒಳಗಡೆಯ ನವರಂಗದಲ್ಲಿರುವ ಬೃಹತ್ ಕಂಬಗಳ ಮೇಲೆ

ಸುಂದರವಾದ ಕೆತ್ತನೆಗಳಿವೆ. ಗೋಪಿಕಾ ಸ್ತ್ರೀಯೊಬ್ಬಳು ಮಜ್ಜಿಗೆ ಕಡಿಯುತ್ತಿರುವ ದೃಶ್ಯ, ಬಾಲ ಕೃಷ್ಣ ಬೆಣ್ಣೆ ತಿನ್ನುತ್ತಿದ್ದಾನೆ. ಶೇಷ ಶಯನ, ನರ್ತಿಸುತ್ತಿರುವ ನರ್ತಕಿಯರು ಹೀಗೆ ಹಲವಾರು ಸುಂದರವಾದ ಶಿಲ್ಪಗಳಿವೆ ಹಾಗೂ ಇಲ್ಲಿ ಹಲವಾರು ಶಿಲಾಶಾಸನಗಳನ್ನು ಕಾಣಬಹುದಾಗಿದೆ.

ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ ಕೋಟೆಯ ಮೇಲೆ ಲಿಂಗಗಳನ್ನು ಕೆತ್ತಿ ಎರಡು ಆನೆಗಳು ಸ್ನಾನ ಮಾಡುತ್ತಿರುವ ದೃಶ್ಯವಿದೆ. ಎರಡನೇಯ ಬಾಗಿಲಿನ ಮೇಲೆ ಗಣೇಶನ ಶಿಲ್ಪವಿದೆ. ಹೀಗೆ ಹಲವಾರು ಶಿಲ್ಪಗಳು ಇಲ್ಲಿವೆ. ಹರಪನಹಳ್ಳಿಯಿಂದ ೮ ಕಿ.ಮೀ. ದೂರದಲ್ಲಿರುವ ಬಾಗಳಿ ಗ್ರಾಮ. ಬಾಗಳಿಯು ಪ್ರಾಚೀನ ದೇವಾಲಯವಾದ ಶ್ರೀ ಕಲ್ಲೇಶ್ವರ ದೇವಾಲಯ ಹಾಗೂ ಶಾಸನಗಳ ಆಗರವಾಗಿದೆ. ಇಲ್ಲಿ ೩೬ ಶಾಸನಗಳಿವೆ, ಅನೇಕ ವೀರಗಲ್ಲುಗಳಿವೆ. ಇಲ್ಲಿ ಮುಖ್ಯವಾದದ್ದು ಕಲ್ಲೇಶ್ವರ ದೇವಾಲಯ. ಈ ದೇವಾಲಯದ ಮಹಾಮಂಟಪದ ಉತ್ತರದ ಭಾಗದ ಗರ್ಭಗುಡಿಯಲ್ಲಿ ಸುಂದರವಾದ ಹಾಗೂ ದೊಡ್ಡದಾದ ಉಗ್ರನರಸಿಂಹನ ಮೂರ್ತಿ ಅದರ ನೈಜ ಸೌಂದರ್ಯದಿಂದ ನೋಡುಗರನ್ನು ತನ್ನತ್ತ ಸೆಳೆದುಕೊಳ್ಳುತ್ತದೆ. ಕೆಳಗಡೆಗೆ ನಾರದ, ಪ್ರಹ್ಲಾದ ಮುಂತಾದ ವಿಗ್ರಹಗಳಿದ್ದು, ಇಲ್ಲಿಯ ಶಿಲ್ಪಗಳು ಇಲ್ಲಿ ಕೆಲಸ ಮಾಡಿದ ಶಿಲ್ಪಿಗಳ ನೈಪುಣ್ಯತೆಯನ್ನು ಶ್ರೇಷ್ಠ ಮಟ್ಟಕ್ಕೆ ಕರೆದೊಯ್ಯುತ್ತದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಇನ್ನೊಂದು ಗ್ರಾಮವಾದ ನೀಲಗುಂದವು ಐತಿಹಾಸಿಕ ಮಹತ್ವವನ್ನು ಪಡೆದ ಸ್ಥಳವಾಗಿದೆ. ಇಲ್ಲಿರುವ ಶ್ರೀ ಭೀಮೇಶ್ವರ ದೇವಾಲಯದ ಮೇಲೆ ಕೆತ್ತಿರುವ ಶಿಲ್ಪಗಳು ಕಲಾತ್ಮಕವಾಗಿ ಕೆತ್ತಲ್ಪಟ್ಟಿವೆ. ಹೀಗೆ ಈ ಜಿಲ್ಲೆಯಲ್ಲಿರುವ ಹಲವಾರು ದೇವಾಲಯಗಳ ಮೇಲೆ ಸುಂದರವಾಗಿ ಕೆತ್ತಲ್ಪಟ್ಟಿರುವ ಕಲಾಕೃತಿಗಳು ನಾಡೆನೆಲ್ಲೆಡೆ ಎಲ್ಲರ ಗಮನ ಸೆಳೆದುಕೊಂಡು ಇಲ್ಲಿಯ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಕಾರಣವಾಗಿವೆ.

ವಾಸ್ತುಶಿಲ್ಪ

ದಾವಣಗೆರೆ ಜಿಲ್ಲೆಯಲ್ಲಿ ಹಲವಾರು ಪುರಾತನ ದೇವಾಲಯಗಳಿದ್ದು ಅದರಲ್ಲಿ ಹರಿಹರದಲ್ಲಿರುವ ಹರಿಹರೇಶ್ವರ ದೇವಾಲಯ, ಬಾಗಳಿ, ಸಂತೆಬೆನ್ನೂರುಗಳಲ್ಲಿಯ ದೇವಾಲಯಗಳು ಕೇವಲ ಅಧ್ಯಾತ್ಮಿಕ ಕ್ಷೇತ್ರಗಳಷ್ಟೇ ಅಲ್ಲ. ದೇವಾಲಯ ವಾಸ್ತುಶಿಲ್ಪ ದೃಷ್ಟಿಯಿಂದಲೂ ಪ್ರಮುಖವಾದವುಗಳಾಗಿವೆ.

ಸಂತೆಬೆನ್ನೂರು ಪುಷ್ಕರಣೆ: ಹಿಂದೆ ಶಿವಮೊಗ್ಗ ಜಿಲ್ಲೆಯ ಭಾಗವಾಗಿದ್ದು. ೧೯೯೭ರಲ್ಲಿ ದಾವಣಗೆರೆ ಜಿಲ್ಲೆಯಾದ ನಂತರ ದಾವಣಗೆರೆಗೆ ಸೇರಿರುವ ಸಂತೆಬೆನ್ನೂರು ಐತಿಹಾಸಿಕ ಮಹತ್ವ ಪಡೆದಿರುವ ಸ್ಥಳ, ಇದು ದಾವಣಗೆರೆಯಿಂದ ೩೬ ಕಿ.ಮಿ. ಅಂತರದಲ್ಲಿದೆ. ಸಂತೆಬೆನ್ನೂರು ಬಸವಪಟ್ಟಣದ ಪಾಳೆಯಗಾರರು ಮೊದಲಾದವರುಗಳ ಆಳ್ವಿಕೆಗೆ ಒಳಪಟ್ಟಿದ್ದ ಸ್ಥಳವಾಗಿತ್ತು.

'ಕ್ರಿ.ಶ ೧೭೮೩ ರಲ್ಲಿ ಭಾರತದ ಸರ್ವೇಯಕ ಜನರಲ್‌ರು ಬರೆಸಿದ ಸಂತೆಬೆನ್ನೂರು ಸೀಮೆ

ಕೈಫಿಡಿಯತ್ತಿನಿಂದ ತಿಳಿದು ಬರುವುದೇನೆಂದರೆ. ವಿಜಯನಗರದ ಶ್ರೀ ಕೃಷ್ಣರಾಯರ ಅಳಿಯ ರಾಮರಾಯರು ಆಳುತ್ತಿರುವಾಗ ಹನುಮಪ್ಪ ನಾಯಕರು ಅರಸರಲ್ಲಿ ದಳಪತಿಯಾಗಿದ್ದು, ಉಚ್ಚಂಗಿ ಕೋಟೆಗೆ ಸೇರಿದ ಮದಕರಿನಾಡನ್ನು ಅಮರಮಾಗಣಿಯಾಗಿ ದಯಪಾಲಿಸಿದಾಗ ಈ ಸಂತೆಬೆನ್ನೂರು ಪ್ರದೇಶವು ಈ ಮದಕರಿನಾಡಿನಲ್ಲಿ ಅಸ್ತಿತ್ವದಲ್ಲಿದ್ದ ಪ್ರದೇಶಮಾಗಿತ್ತು ಎಂಬುದನ್ನು ಪುಷ್ಟೀಕರಿಸುತ್ತದೆ’[೬].

ಸುಮಾರು ೨೩೫ ಅಡಿ ಉದ್ದ, ೨೪೫ ಅಡಿ ಅಗಲ ೩೦ ಅಡಿ, ಆಳವನ್ನು ಹೊಂದಿರುವ ಪುಷ್ಕರಣಿ ಸಂತೆಬೆನ್ನೂರಿನಲ್ಲಿ ನೋಡತಕ್ಕ ಸ್ಥಳ. ಇದು ಕ್ರಿ. ಶ. ೧೫೫೮ ರಲ್ಲಿ ಮುಮ್ಮಡಿ ಹನುಮಪ್ಪನಾಯಕನ ಮಗ ಕೆಂಗಪ್ಪ ನಾಯಕವೆನ್ನುವವನಿಂದ ನಿರ್ಮಿಸಲ್ಪಟ್ಟಿತು. ಈ ಹೊಂಡಕ್ಕೆ ನಾಲ್ಕು ದಿಕ್ಕಿನಿಂದ ಇಳಿಯಲು ಪಾವಟಿಗೆಗಳಿದ್ದು ಹೊಂಡದ ಸುತ್ತಲೂ ಸುಮಾರು ೨ ೧/೨ – ೩ ಅಡಿ ಅಗಲವಾದ ಪೌಳಿಗೋಡೆ ಇದೆ. ಈ ಪುಷ್ಕರಣಿಯ ಸುತ್ತಲೂ ಎಂಟು ದಿಕ್ಕುಗಳಲ್ಲಿ ಎಂಟು ಮಂಟಪಗಳನ್ನು ನಿರ್ಮಿಸಲಾಗಿತ್ತು. ಆದರೆ ಈಗ ಎರಡು ಮಂಟಪಗಳು

ನಾಶವಾಗಿ ೬ ಮಂಟಪಗಳು ಮಾತ್ರ ಉಳಿದಿವೆ. ತಳಬಾಗದಲ್ಲಿ ೧೫೦ ಅಡಿ ಉದ್ದ, ೧೬೦ ಅಡಿ ಅಗಲವನ್ನು ಹೊಂದಿರುವ ಈ ಕೊಳಕ್ಕೆ ಇಳಿಯಲು ಮೆಟ್ಟಿಲುಗಳಿವೆ. ಮುಖ್ಯ ಪ್ರವೇಶದ್ವಾರದಿಂದ ಕೊಳಕ್ಕೆ ಇಳಿಯಲು ೫೨ ದೊಡ್ಡ ದೊಡ್ಡ ಪಾವಟಿಕೆಗಳಿದ್ದು ಉಳಿದ ಮೂರು ಕಡೆಗಳಲ್ಲಿ ಭವ್ಯವೂ, ಆಕರ್ಷಕವೂ ಆದ ಮಂಟವೊಂದನ್ನು ನಿರ್ಮಿಸಲಾಗಿದೆ. ಈ ಮಂಟಪದ ಒಟ್ಟಾರೆ ರಚನೆ ಒಂದು ದೇವಾಲಯಗಳ ಶಿಖರವನ್ನು ಹೋಲುತ್ತದೆ. ತಳ ಅಂತಸ್ತಿನ ಮೇಲೆ ಎರಡು ಮಂಟಪಗಳನ್ನು ಹೊಂದಿ, ತುದಿಯಲ್ಲಿ ಬೃಹತ್ ಕಳಸ ಹೊಂದಿರುವಂತಹ ರಚನೆ ಈ ಮಂಟಪದ್ದು. ಇಂದು ಈ ಪುಷ್ಕರಣೆಗೆ ಸ್ಥಳೀಯರು ಹೊಂಡ ಎಂದು ಕರೆಯುತ್ತಾರೆ ಮತ್ತು ಪುಷ್ಕರಣೆಯ ಮಧ್ಯದಲ್ಲಿರುವ ಮಂಟಪಕ್ಕೆ ವಸಂತ ಮಂಟಪ ಎನ್ನುವರು.

ಬಾಗಳಿ: ಹರಪನಹಳ್ಳಿಯಿಂದ ೮ ಕಿ.ಮೀ. ದೂರದಲ್ಲಿರುವ ಗ್ರಾಮ. ಇಲ್ಲಿ ಅನೇಕ ಶಾಸನಗಳು ಸಿಕ್ಕಿರುವದರಿಂದ ಹಿಂದೆ ರಾಜರ ಆಳ್ವಿಕೆಯ ಕಾಲದಲ್ಲಿ ಇದು ಪ್ರಮುಖವಾದ ಪ್ರದೇಶವಾಗಿತ್ತೆಂದು ಊಹಿಸಬಹುದು. ಬಾಗಳಿಯು ಹಿಂದೆ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರದ ಅರಸರು ಮೊದಲಾದ ರಾಜರುಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು. ಈ ಗ್ರಾಮ ದೇವಾಲಯಗಳ ಬೀಡು ಎಂದರೆ ಅತಿಶಯವಲ್ಲ. ಇಲ್ಲಿ ಪ್ರಾಚೀನವಾದ ಕಲ್ಲೇಶ್ವರ ದೇವಾಲಯದವಲ್ಲದೆ, ಲಕ್ಷ್ಮೀ ನಾರಾಯಣ ದೇವಾಲಯ, ಚನ್ನಬಸವ ದೇವಾಲಯ, ಸಂಗನಬಸಪ್ಪನ ದೇವಾಲಯ, ಇಷ್ಟಲಿಂಗ ಗುಡಿ, ಜೈನಬಸದಿ ಮೊದಲಾದ ಗುಡಿ–ಗುಡಾರಗಳುಂಟು. ಈ ಪ್ರಬಂಧದಲ್ಲಿ ಈ ಎಲ್ಲ ದೇವಾಲಯಗಳ ವಿವರಣೆಗೆ ಕೈ ಹಾಕದೆ ಪ್ರಾಚೀನತಮವಾದ ಕಲ್ಲೇಶ್ವರ ದೇವಾಲಯವನ್ನು ಮಾತ್ರ ಸಂಕ್ಷಿಪ್ತವಾಗಿ ವಿವರಿಸುತ್ತಿರುವೆ.

---

೬ ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.ಸಂ. ೫೧೨.

ಕಲ್ಲೇಶ್ವರ ದೇವಾಲಯ: ಈ ದೇವಾಲಯವು ಚಾಲುಕ್ಯ ವಿಕ್ರಮಾದಿತ್ಯನಿಂದ ಕ್ರಿ.ಶ. ೧೦೧೮ರಲ್ಲಿ ಕಟ್ಟಿಸಲ್ಪಟ್ಟಿತು. ಬಾಗಳಿಯಲ್ಲಿರುವ ದೊಡ್ಡ ಕೆರೆಯೊಂದರ ದಡದಲ್ಲಿ ನಿರ್ಜನವಾಗಿರುವ ತಗ್ಗಿನ ಪ್ರದೇಶವೊಂದರಲ್ಲಿ ಪೂರ್ವಾಭಿಮುಖವಾಗಿ ಸ್ಥಾಪಿತವಾಗಿರುವ ಈ ದೇವಾಲಯ ಸೌಂದರ್ಯ ಮತ್ತು ವೈಶಾಲ್ಯತೆ ಈ ಎರಡೂ ದೃಷ್ಟಿಗಳಿಂದಲೂ ಗಮನ ಸೆಳೆಯುತ್ತದೆ. ಈ ದೇವಾಲಯ ಶಿಖರ, ಗರ್ಭಗುಡಿ, ಅಂತರಾಳ, ಮಹಾಮಂಟಪ, ಪೌಳಿಗೋಡೆಯನ್ನು ಒಳಗೊಂಡಿರುವಂತಹ ರಚನೆ. ಇಡೀ ದೇವಾಲಯ ರಚನೆಯಾಗಿದ್ದು ಸ್ಥಳೀಯವಾಗಿರುವ ಬಳಪದ ಕಲ್ಲಿನಲ್ಲಿ.

ಕಲ್ಲೇಶ್ವರ ದೇವಾಲಯದ ಪ್ರಮುಖ ಆಕರ್ಷಣೆಯಭಾಗವೆಂದರೆ ಮಹಾಮಂಟಪ. ಈ ಮಂಟಪದಲ್ಲಿ ಸರಿಸುಮಾರು ೬೪ ಕಂಬಗಳಿದ್ದು, ಒಂದೊಂದು ಕಂಬವೂ ವೈವಿಧ್ಯಮಯ, ವೈಶಿಷ್ಟ್ಯ ಪೂರ್ಣ, ಕೆಲವು ಚೌಕಾಕಾರವಾಗಿದ್ದರೆ ಮತ್ತೆ ಕೆಲವು ವೃತ್ತಾಕಾರವಾಗಿವೆ. ಕೆಲವು ಅಷ್ಟಕೋನಾಕಾರದ ತಳಪಾಯದಿಂದ ಮೇಲೆದ್ದರೆ, ಮತ್ತೆ ಕೆಲವು ನಕ್ಷತ್ರಾಕಾರದ ತಳವಿನ್ಯಾಸ ಹೊಂದಿ ಮೇಲೆದ್ದಿವೆ. ಅಂತರಾಳ ಮತ್ತು ಮಹಾಮಂಟಪದ ದ್ವಾರಗಳೂ ಸಹ ಸುಂದರವಾಗಿ ಕೆತ್ತಲ್ಪಟ್ಟಿವೆ. ಗರ್ಭಗುಡಿಯ ಗೋಪುರ ೫ ಹಂತಗಳಿಂದ ಕೂಡಿದ್ದು, ಗುಮ್ಮಟಾಕಾರದ ಕಳಸ ಗೋಪುರವನ್ನು ಹೊಂದಿದೆ. ದೇವಾಲಯಕ್ಕೆ ಹೊಂದಿದಂತೆ ಪೂರ್ವದಿಕ್ಕಿನಲ್ಲಿ ಮಹಾದ್ವಾರವಿದ್ದು ಕಲಾತ್ಮಕವಾದ ಕುಸುರಿ ಕೆತ್ತನೆಗಳಿಂದ ಕೂಡಿದ ಚೌಕಟ್ಟನ್ನು ಹೊಂದಿದೆ.

ಹರಿಹರೇಶ್ವರ ದೇವಾಲಯ: ಇದು ನಿರ್ಮಾಣವಾಗಿದ್ದು ಕ್ರಿ.ಶ. ೧೩ನೇ ಶತಮಾನದಲ್ಲಿ. ಹೊಯ್ಸಳ ದೊರೆ ವೀರಬಲ್ಲಾಳನ ಮಗ ವೀರನರಸಿಂಹನ ದಂಡಾಧಿಪತಿಯಾಗಿದ್ದ ಆಂಧ್ರ ಮೂಲದ ಪೋಲಾಳ್ವ ಎನ್ನುವವನಿಂದ ಈ ದೇವಾಲಯ ನಿರ್ಮಾಣವಾಯಿತು ಎಂಬುದಾಗಿ ತಿಳಿದುಬರುತ್ತದೆ.

ಪೋಲಾಳ್ವನು ಸ್ವಭಾನು ಸಂವತ್ಸರದ ಮಾಘ ಶುದ್ಧ ಏಕಾದಶಿ ಬುಧವಾರ ೧೧೫ ಬಂಗಾರದ ಕಳಸಗಳಿಂದ ಕೂಡಿದ ಬೃಹತ್ ದೇವಾಲಯವನ್ನು ಕಟ್ಟಿಸಿದ. ಶಾಸನದಲ್ಲಿ ಸೂರ್ಯನೊಡನೆ, ಮೇರುವಿನೊಡನೆ ಪ್ರತಿಸ್ಪರ್ಧಿ ಎನ್ನುವಷ್ಟು ಶೋಭಾಯಮಾನವಾಗಿತ್ತು, ಹಲವಾರು ದೇವಾಲಯದ ನಿರ್ಮಾಣ ಮಾಡಿಸಿದರೂ ದೇವರನ್ನು ಈತ ಪ್ರತಿಷ್ಠಾಪಿಸಲಿಲ್ಲ. ಇಲ್ಲಿನ ದೇವರಾದ ಹರಿಹರೇಶ್ವರ ಸ್ವಯಂ ಉದ್ಭವ ಮೂರ್ತಿ ಎಂದು ನಂಬಿಕೆಯಿದೆ.

ಈ ದೇವಾಲಯದ ವಾಸ್ತುಶಿಲ್ಪ, ಹೊಯ್ಸಳ ಶೈಲಿಯಿಂದ ಕೂಡಿದೆ. ಭಾರಿ ಗಾತ್ರದ, ನುಣುಪಾದ ಕಂಬಗಳು, ಕಿರಿದಾದ ಎತ್ತರವುಳ್ಳ, ಮುಖಮಂಟಪ, ಗೋಡೆಗಳಲ್ಲಿನ ಚಿತ್ರಪಟ್ಟಿಕೆಗಳು ಇವೆಲ್ಲ ಹೊಯ್ಸಳ ಶೈಲಿಯ ಲಕ್ಷಣಗಳು. ದೇವಾಲಯ ಇಂದು ಗರ್ಭಗುಡಿ, ಮುಖಮಂಟಪ, ನವರಂಗ ಇವುಗಳನ್ನು ಒಳಗೊಂಡಿರುವಂತಹುದು. ಗರ್ಭಗುಡಿ ಸಾಧಾರಣವಾದಂತಹ ರಚನೆ

ಹೇಳಿಕೆಕೊಳ್ಳುವಂತಹ ವಿಶೇಷ ಅಲಂಕರಣವಿಲ್ಲ. ತುಸು ವಿಶಾಲವಾದ ಸ್ಥಳಾವಕಾಶ ಹೊಂದಿದೆ. ದೇವಾಲಯವು ಹೆಚ್ಚು ಗಮನಸೆಳೆಯುವುದು ದೇವಾಲಯದ ಹೊರಗೋಡೆಯ ಮೇಲಿನ ಚಿತ್ರ ಪಟ್ಟಿಕೆಗಳು ಮತ್ತು ಆರವತ್ತು ಕಂಬಗಳಿಂದ ಕೂಡಿರುವಂತಹ ವಿಶಾಲವಾದ ಮುಖಮಂಟಪದಿಂದ.

ಸಾಹಿತ್ಯ: ದಾವಣಗೆರೆ ಜಿಲ್ಲೆಯಲ್ಲಿ ಹಲವಾರು ಖ್ಯಾತ ಸಾಹಿತಿಗಳಿದ್ದಾರೆ. ಅವರುಗಳು ಹಲವಾರು ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ಅವರ ಕೃತಿಗಳನ್ನು ವಾಚನಮಾಡುತ್ತಾ ಇಲ್ಲಿಯ ಸಂಸ್ಕೃತಿ, ಪರಂಪರೆ, ಇತಿಹಾಸಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಡಾ॥ ಜಿ.ಎಸ್. ದೀಕ್ಷಿತ್, ಡಾ॥ ಎಮ್. ಚಿದಾನಂದಮೂರ್ತಿ, ಡಾ॥ ಎಮ್.ಜಿ. ಈಶ್ವರಪ್ಪನವರಂತಹ ಹಲವಾರು ಸಾಹಿತಿಗಳು ಖ್ಯಾತರಾಗಿದ್ದಾರೆ.

ಡಾ॥ ಎಂ. ಚಿದಾನಂದ ಮೂರ್ತಿ: ಚನ್ನಗಿರಿ ತಾಲ್ಲೂಕಿನ ಹಿರೇಕೋಗನೂರಿನವರು. (ಜನಿಸಿದ್ದು ೧೯೩೧ರಲ್ಲಿ, ತಂದೆ– ಕೊಟ್ಟೂರಯ್ಯ ತಾಯಿ– ಪಾರ್ವತಮ್ಮ) ಆಗ ಕನ್ನಡದ ಸಾಹಿತ್ಯ ದಿಗ್ಗಜರುಗಳಾದ ಪ್ರೊ॥ ತಿ.ನಂ. ಶ್ರೀಕಂಠಯ್ಯ, ಡಾ॥ ಎಲ್. ಬಸರಾಜ, ಡಾ॥ ಜಿ.ಎಸ್. ಶಿವರುದ್ರಪ್ಪ ಮೊದಲಾದವರ ವಿದ್ಯಾರ್ಥಿಯಾಗಿ ಕಲಿಯುವ ಭಾಗ್ಯ ಪ್ರಾಪ್ತಿ. ಮುಂದೆ ಮೈಸೂರಿನಲ್ಲಿ ವಿದ್ಯಾಬ್ಯಾಸ ಮುಂದುವರಿಸಿ, ಬಿ.ಎ. ಅನರ್ಸ್ ಮುಗಿಸಿದರು. ೧೯೫೭ ರಲ್ಲಿ ಎಂ.ಎ. ಪದವಿಯನ್ನು ಪಡೆದರಲ್ಲದೆ ಚಿನ್ನದ ಪದಕವೂ ಲಭಿಸಿತು. ತಿ.ನಂ ಶ್ರೀಕಂಠಯ್ಯನವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ಮಹಾ ಪ್ರಬಂಧಕ್ಕೆ ಪಿ.ಎಚ್.ಡಿ. ಪದವಿಪ್ರಾಪ್ತಿ, ಇವು ಚಿದಾನಂದ ಮೂರ್ತಿಯವರ ಶಿಕ್ಷಣ ಸಾಧನೆಯ ಮೈಲಿಗಲ್ಲುಗಳು.

ಇಂದು ನಾಡಿನ ಅತ್ಯಂತ ಶ್ರೇಷ್ಠ ಮಟ್ಟದ ಸಂಶೋಧಕರಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟಿರುವ ಇವರು ಕನ್ನಡ ನಾಡು, ನುಡಿ, ನೆಲ, ಜಲ, ಸಂಸ್ಕೃತಿಗಳ ರಕ್ಷಣೆಗೂ ಕುರಿತಂತೆ ಮಾಡುತ್ತಿರುವ ಚಿಂತನೆಗಳು, ನಡೆಸುತ್ತಿರುವ ಹೋರಾಟಗಳು ಮಂಡಿಸುತ್ತಿರುವ ಪ್ರಬುದ್ಧ ಪೂರ್ಣ ಮಾಹಿತಿಗಳು ಈ ಎಲ್ಲ ಕಾರಣಗಳಿಂದಾಗಿ ಕನ್ನಡ ನಾಡಿನಾದ್ಯಂತ ಒಂದು 'ಶಕ್ತಿ'ಯಾಗಿ ಪರಿಚಿತರಾಗಿದ್ದಾರೆ ಎಂದರೆ ಅತಿಶಯೊಕ್ತಿಯಲ್ಲ.

ಡಾ॥ ಜಿ.ಎಸ್. ದೀಕ್ಷಿತ್: ಖ್ಯಾತ ಇತಿಹಾಸ ತಜ್ಞರು. ಕರ್ನಾಟಕದ ಇತಿಹಾಸ ಅಕಾಡೆಮಿಯ ಸ್ಥಾಪಕ ಅಧ್ಯಕ್ಷರು, ಬೆಂಗಳೂರಿನ ಮಿಥಿಕ್ ಸೊಸೈಟಿಯ ಫೆಲೊ ಆಗಿದ್ದವರು. ಮುಂಬೈ, ಪುಣೆ ಕಾಲೇಜುಗಳಲ್ಲಿ, ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಇತಿಹಾಸ ವಿಭಾಗದಲ್ಲಿ ಸೇವೆ ಸಲ್ಲಿಸಿದವರು. ತಮ್ಮ ಸಂಶೋಧನಾ ಸಾಧನೆಗಾಗಿ ಅಮೆರಿಕೆಯ ಪುಲ್ ಬ್ರೈಟ್ ಸ್ಕಾಲರ್‌ಶಿಪ್ ಪಡೆದ ಮೇಧಾವಿಗಳು ಟೊರೆಂಟೊ ವಿಶ್ವವಿದ್ಯಾಲಯದಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ, ಇಂಡಿಯನ್ ಕಾಂಗ್ರೆಸ್ ಆಫ್ ಅಮೆರಿಕನ್ ಹಿಸ್ಟರಿ ಸಂಸ್ಥೆಯ ಸ್ಥಾಪಕರಾಗಿಯೂ

ದುಡಿದವರು. ಕಲ್ಕತ್ತೆಯ ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್‌ನ ಬೆಂಗಳೂರಿನಲ್ಲಿ ನಡೆದ ಸೇನರ ಜೊತೆಗೂಡಿ ಡಿಕ್ಷನರಿ ಆಫ್ ನ್ಯಾಶನಲ್ ಬಿಬ್ಲಿಯೋಗ್ರಾಫಿಯ ಹಲವಾರು ಸಂಪುಟಗಳ ರಚನೆಯಲ್ಲಿ ಶ್ರಮಿಸಿದವರು. ಇವರ ಸಾಧನೆಯನ್ನು ಗುರುತಿಸಿ ಗೋವಾದಲ್ಲಿ ನಡೆದ ಅಖಿಲ ಭಾರತ ಇತಿಹಾಸ ಪರಿಷತ್ತಿನ ಸುವರ್ಣ ಮಹೋತ್ಸವ ಸಮ್ಮೇಳನದಲ್ಲಿ ಸನ್ಮಾನಿಸಲಾಗಿದೆ. ಬಸವಣ್ಣನವರ ಕಾಲದ ಬಗ್ಗೆ, ವಿಜಯನಗರ, ಕಳೆದ ಮೊದಲಾದ ಸ್ಥಳಗಳ ಇತಿಹಾಸದ ಬಗ್ಗೆ ಹಲವಾರು ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಿ, ನಾಡಿನ ಇತಿಹಾಸ ತಜ್ಞರ, ಲಕ್ಷ್ಯ ಆ ಸ್ಥಳಗಳ ಕುರಿತು ಹರಿಯುವಲ್ಲಿ ಕಾರಣೀಭೂತರಾಗಿದ್ದಾರೆ ಎಂದರೆ ತಪ್ಪಲ್ಲ.

ಸಂಗೀತ

ಸಂಗೀತ ಕ್ಷೇತ್ರದಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳಲ್ಲಿ ಹಿಂದುಸ್ಥಾನಿ ಸಂಗೀತ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಹಾಗೂ ಇನ್ನು ಹಲವಾರು ಪ್ರಕಾರಗಳು ಬರುತ್ತವೆ. ಇಂತಹ ಸಂಗೀತ ಕ್ಷೇತ್ರಕ್ಕೆ ದಾವಣಗೆರೆ ಜಿಲ್ಲೆಯ ಸಂಗೀತ ಕಲಾವಿದರು ಕಾಯಾ, ವಾಚಾ, ಮನಸಾದಿಂದ ಹಗಲಿರುಳು ದುಡಿದು ಗಣನೀಯವಾದ ಸೇವೆಯನ್ನು ಸಂಗೀತ ಕ್ಷೇತ್ರಕ್ಕೆ ನೀಡಿದ್ದಾರೆ. ಅವರುಗಳಲ್ಲಿ ಜೀ. ದುರ್ಗೇಶ್ (ಹಿಂದುಸ್ಥಾನಿ ಸಂಗೀತ), ಶ್ರೀಮತಿ ರಜನಿ ರಘುನಾಥ ಕುಲಕರ್ಣಿ, ಭೀಮಸೇನ ರಂಗಾಚಾರ ಜೋಷಿ(ಕಾಖಂಡಕಿ), ರಾಜಗೋಪಾಲ್ ಭಾಗವತ ಮುಂತಾದ ಕಲಾವಿದರು ಹಲವಾರು ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಗೀತ ಕ್ಷೇತ್ರಕ್ಕೆ ಹಾಗೂ ದಾವಣಗೆರೆ ಜಿಲ್ಲೆಗೆ ಹೆಸರನ್ನು ತಂದು ಕೊಟ್ಟವರಾಗಿದ್ದಾರೆ.

ಭೀಮಸೇನ್ ರಂಗಾಚಾರ್ ಜೋಷಿ: ಕಳೆದ ಮೂವತ್ತೈದು ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು. ದಾವಣಗೆರೆಯ ಶ್ರೀ ಕೃಷ್ಣ ಸಂಗೀತ ವಿದ್ಯಾಲಯದಲ್ಲಿ ಹಿಂದುಸ್ತಾನಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ಆಕಾಶವಾಣಿಯಲ್ಲಿ ಬಿ. ಹೈಗ್ರೇಡ್ ಕಲಾವಿದರೂ ಸಹ. ಇವರ ತಂದೆ ರಂಗಾಚಾರ್ ರಾಮಾಚಾರ್ ಜೋಷಿಯವರೇ ಇವರ ಸಂಗೀತ ಗುರುಗಳು. ಹಾಡುಗಾರಿಕೆಯ ಜೊತೆಗೆ ಹಾರ್ಮೋನಿಯಂ ಮತ್ತು ತಬಲಾ ವಾದ್ಯ ಇವರ ಹವ್ಯಾಸ. ಬೆಂಗಳೂರು ದೂರದರ್ಶನ ಕೇಂದ್ರದಿಂದ ಇವರ ಕೆಲವು ಸಂಗೀತ ಕಾರ್ಯಕ್ರಮಗಳು ಪ್ರಸಾರಗೊಂಡಿವೆ.

ಜಿ ದುರ್ಗೇಶ್: ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಜೊತೆಗೆ ಲಘು ಸಂಗೀತ, ಭಜನೆ, ಕೀರ್ತನೆಗಳಲ್ಲಿ ಪರಿಣತರು. ವಿದ್ವಾನ್ ನಾರಾಯಣರಾವ್ ಮೀರಜ್ಕರ್ ಮತ್ತು ಮಹಾರಾಷ್ಟ್ರದ ವಿದ್ವಾನ್ ಎಸ್.ಬಿ. ಮಾನೆ ಇವರುಗಳ ಬಳಿ ಸಂಗೀತಾಭ್ಯಾಸ ನಡೆಸಿದ್ದಾರೆ. ದೂರದರ್ಶನದ ಚಂದನ ವಾಹಿನಿಯಲ್ಲಿ ಇವರ ಕೆಲವು ಕಾರ್ಯಕ್ರಮಗಳು ಪ್ರಸಾರವಾಗಿವೆ. ಅಲ್ಲದೆ ಮೈಸೂರು ದಸರಾ, ದಾವಣಗೆರೆ ಜಿಲ್ಲಾ ಉತ್ಸವ, ಕನ್ನಡ ರಾಜ್ಯೋತ್ಸವ ಮೊದಲಾದ ಸಂದರ್ಭಗಳಲ್ಲಿ ಸಂಗೀತ ಕಛೇರಿ ನೀಡಿದ್ದಾರೆ.

ವಿದುಷಿ ರಜನಿ ರಘುನಾಥ ಕುಲಕರ್ಣಿ: ರಾಯಲ ಸೀಮೆಯ ಪ್ರಖ್ಯಾತ ವಿದ್ವನ್ಮಣಿಗಳೆಂದು ಹೆಸರು ಪಡೆದಿದ್ದ ಎಂ. ರಾಘವೇಂದ್ರಾಚಾರ್ಯರ ಮೊಮ್ಮಗಳು. ಸಂಗೀತ ವಿದುಷಿಯಾಗಿದ್ದ ಇವರ ತಾಯಿ ಸೀತಮ್ಮನವರಲ್ಲಿಯೇ ಶಾಸ್ತ್ರೀಯ ಸಂಗೀತಾಭ್ಯಾಸ ನಡೆಸಿದವರು. ಆಕಾಶವಾಣಿಯ ಸುಗಮ ಸಂಗೀತ ವಿಭಾಗದ 'ಬಿ'ಗ್ರೇಡ್ ಕಲಾವಿದೆಯಾಗಿರುವ ರಜನಿ ಕುಲಕರ್ಣಿ ಸಂಗೀತವನ್ನೇ ಉಸಿರಾಗಿಸಿಕೊಂಡು ಕಾಯಾ–ವಾಚಾ–ಮನಸಾ ಸಂಗೀತ ಶಾರದೆಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಸದ್ಯ ನಾಟ್ಯ ಭಾರತಿ ಕೇಂದ್ರದಲ್ಲಿ ಸಂಗೀತ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗಮಕ ಕಲಾವಿದೆ ಪದ್ಮಜಾ ಶೇಷಗಿರಿರಾವ್: ಕರ್ನಾಟಕ ಗಮಕ ಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ, ಹಲವಾರು ಸಂಘ–ಸಂಸ್ಥೆಗಳಲ್ಲಿ ಮಹಿಳಾ ಪ್ರತಿನಿಧಿಯಾಗಿ ಸಾಹಿತ್ಯ, ಸಂಗೀತ ಸರಸ್ವತಿ ಲೋಕದಲ್ಲಿ ಪರಿಚಿತರಾಗಿರುವವರು. ಪ್ರಾಚೀನ ಕಾವ್ಯಗಳನ್ನು ಅರ್ಥವತ್ತಾಗಿ, ರಸವತ್ತಾಗಿ ವಾಚಿಸಿ, ಶ್ರೋತೃಗಳ (ಕೇಳುಗರ) ಹೃದಯದಲ್ಲಿ ಭಾವ ಸ್ಫುರಣ ಉಂಟುಮಾಡುವದರಲ್ಲಿ ನಿಷ್ಣತೆಯಾಗಿರುವವರು. ಹರಿಹರದಲ್ಲಿ ನೆಲೆಸಿರುವ ಪದ್ಮಜಾ ಶೇಷಗಿರಿರಾವ್‌ರವರು ಮೂಲತಃ ಸಂಗೀತಗಾರ್ತಿ. ಸದ್ಯ ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ನಾಟಕ

'ನಾಟಕವೆಂದರೆ ದಾವಣಗೆರೆ ಜಿಲ್ಲೆಯಲ್ಲಿರುವ ನಾಗರೀಕರಿಗೆ ತುಂಬಾ ಸಂತೋಷ. ವೃತ್ತಿನಾಟಕಗಳಿಗೆ ಸದಾ ಇಲ್ಲಿ ಪ್ರೋತ್ಸಾಹವಿತ್ತು. ಈಗಲೂ ಸಹ ಇಲ್ಲಿಯ ಜನ ನಾಟಕ ಪ್ರೀಯರಾಗಿದ್ದಾರೆ'[೮]. ಕೊಟ್ರಬಸಪ್ಪ, ಚಿಂದೋಡಿ ಲೀಲಾ, ಶ್ರೀ ಕೋ.ಲ. ಶಾಂತಪ್ಪ, ಚಿಂದೋಡಿ ವೀರಪ್ಪ, ಡಾ॥ ಎಮ್.ಜಿ. ಈಶ್ವರಪ್ಪ ಮುಂತಾದ ಕಲಾವಿದರು ಈ ನಾಟಕ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದಾರೆ. ಇವರೆಲ್ಲರೂ ವೃತ್ತಿಪರ ನಾಟಕ ಕ್ಷೇತ್ರಕ್ಕೆ ಅಪರಿಮಿತ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ಹವ್ಯಾಸಿ ನಾಟಕ ರಂಗದಲ್ಲೂ ಸಹ ಹಲವಾರು ಕಲಾವಿದರುಗಳಿದ್ದು, ಅವರುಗಳಲ್ಲಿ ಸಿದ್ದರಾಜು, ಆರ್.ಟಿ. ಅರುಣ್‌ಕುಮಾರ, ಪ್ರಸನ್ನಕುಮಾರರಂತಹ ಕಲಾವಿದರುಗಳನ್ನು ಹೆಸರಿಸಬಹುದಾಗಿದೆ.

ದಾವಣಗೆರೆ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಎಂದಾಕ್ಷಣ ಪ್ರಧಾನವಾಗಿ ನೆನಪಾಗುವುದು ನಾಟಕಗಳು. ಇಲ್ಲಿನವರು ನಾಟಕಗಳೆಂದರೆ ತುಂಬಾ ಖುಷಿ ಪಡುವ ಜನ. ಇಲ್ಲಿನ ಜನತೆಯಲ್ಲಿ ಬಹುತೇಕ ಎಲ್ಲ ಕಲೆಗಳನ್ನು ಗೌರವಿಸುವ ಗುಣವಿರುವುದಾದರೂ ಪ್ರಧಾನ ಗೌರವ ಸಲ್ಲುವದು ನಾಟಕಗಳಿಗೆ, ಅಷ್ಟರ ಮಟ್ಟಿಗೆ ಇಲ್ಲಿನ ಜನತೆಗೂ ರಂಗಭೂಮಿಗೂ ನಂಟು ಬೆಳೆದು ಬಂದಿದೆ. ವೃತ್ತಿ ನಾಟಕಗಳಿಗೂ ಇಲ್ಲಿ ಪ್ರೋತ್ಸಾಹಕ್ಕೆ ಕೊರತೆ ಇಲ್ಲ.

---

೮. ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.ಸಂ. ೧೦೮.

'ದಾವಣಗೆರೆಯಲ್ಲಿ ಮೊಟ್ಟ ಮೊದಲ ವೃತ್ತಿ ನಾಟಕ ಕಂಪನಿಯೆಂದರೆ ೧೯೨೧ ರಲ್ಲಿ ಪ್ರಾರಂಭವಾದ ಶ್ರೀ ಜಯಲಕ್ಷ್ಮಿ ಪ್ರಾಸಾದಿತ ಸಂಗೀತ ಷಡಕ್ಷರಯ್ಯ ಹಿರೇಮಠ ಮೊದಲಾದವರಿಂದ ಇದು ಆರಂಭವಾಯಿತು. ಈ ನಾಟಕ ಕಂಪನಿ ಹೆಚ್ಚು ಬೆಳೆಯಿತೆಂದರೆ ೧೫೦ ಎತ್ತಿನ ಬಂಡಿಗಳಲ್ಲಿ ನಾಟಕದ ಪರಿಕರಗಳನ್ನು ಹೇರಿಕೊಂಡು ನಾಡಿನ ಉದ್ದಗಲಕ್ಕೂ ಸಂಚರಿಸಿ, ಜಯಭೇರಿ ಬಾರಿಸಿ ೧೯೪೬ರಲ್ಲಿ ಮತ್ತೆ ದಾವಣಗೆರೆಗೆ ಬಂದಿತು'[೯] ಎಂಬುದಾಗಿ ತಿಳಿದು ಬರುತ್ತದೆ. ಆದರೆ ಇಂದು ಈ ನಾಟಕ ಕಂಪನಿಯ ಹೆಸರು ಕ್ಷೀಣಿಸಿದೆ. ಹೆಸರಿಗೆ ಮಾತ್ರ ವಿರುವ ನಾಟಕ ಕಂಪನಿಯಾಗಿದೆ. ಕೆ.ಬಿ.ಆರ್. ಡ್ರಾಮಾ ಕಂಪನಿ ಇಂದು ಅತ್ಯಂತ ಪ್ರತಿಷ್ಠಿತ ನಾಟಕ ಕಂಪನಿ ಎನಿಸಿದೆ. ಇದು ಪ್ರಾರಂಭವಾಗಿದ್ದು ೧೯೨೮ ರಲ್ಲಿ. ಚಿನ್ನದ ತೋಡಿ ವೀರಪ್ಪನವರ ಮಕ್ಕಳು, ಚಿಂದೋಡಿ ವೀರಪ್ಪ, ದೊಡ್ಡ ಕರಿಬಸಪ್ಪ, ಸಣ್ಣ ಕರಿಬಸಪ್ಪ, ಶಿವರಾಜ, ಶಾಂತರಾಜ ಹಾಗೂ ಶ್ರೀಮತಿ ಚಿಂದೋಡಿ ಲೀಲಾ ಇವರೇ ಆ ಕಂಪನಿಯ ಸರ್ವಸ್ವವೂ ಆಗಿರುವವರು ಚಿಂದೋಡಿ ಮನೆತನದವರಿಂದಲೇ ನಡೆಸಲ್ಪಡುತ್ತಿದೆ.

ಕೆ.ಬಿ.ಆರ್. ನಾಟಕ ಕಂಪನಿ ವೃತ್ತಿ ರಂಗಭೂಮಿ ಕ್ಷೇತ್ರದಲ್ಲೂ ಮುಂಚೂಣಿಗೆ ಬರಲು ಪದ್ಮಶ್ರೀ ಪ್ರಶಸ್ತಿ ವಿಜೇತೆ ಶ್ರೀಮತಿ ಚಿಂದೋಡಿ ಲೀಲಾ ಸಲ್ಲಿಸಿದ ಸೇವೆ ಅತ್ಯಂತ ಪ್ರಮುಖವಾದುದಾಗಿದೆ. ಈ ನಾಟಕ ಕಂಪನಿಯ ಪೋಲೀಸನ ಮಗಳು, ಹಳ್ಳಿ ಹುಡುಗಿ, ನಾಟಕಗಳು ಎಂಬ ಪ್ರಸಿದ್ಧವಾದವು. ಈಗ ಈ ನಾಟಕ ಕಂಪನಿ ಮೂರು ಶಾಖೆಗಳಾಗಿ ಕವಲೊಡೆದಿದ್ದು, ಒಂದಕ್ಕೆ ಚಿಂದೋಡಿ ಲೀಲಾ ನೇತೃತ್ವ ವಹಿಸಿದ್ದರೆ, ಮತ್ತೊಂದು ತಂಡಕ್ಕೆ ಚಿಂದೋಡಿ ಬಂಗಾರೇಶ ಮುಂದಾಳಾಗಿದ್ದಾರೆ. ಮಗದೊಂದಕ್ಕೆ ಚಿಂದೋಡಿ ಶ್ರೀ ಕಂಠೇಶ್ ನೇತೃತ್ವ ವಹಿಸಿದ್ದಾರೆ.

ಒಟ್ಟಿನಲ್ಲಿ ದಾವಣಗೆರೆ ಅನೇಕ ನಾಟಕ ರಚನಾಕಾರರು, ನಟರು ಮೊದಲಾದ ರಂಗ ಕಮೀಟಿಗಳನ್ನು ತನ್ನೊಡಲಲ್ಲಿ ಇರಿಸಿಕೊಂಡ ಭೂಮಿಯಾಗಿದೆ. ಇವರುಗಳಲ್ಲಿ ನಾಟಕ ರಚನಾಕಾರ ಕೋ.ಲ. ಶಾಂತಪ್ಪ, ರಂಗನಾಟ ವಾಸಣ್ಣ, ಸೀನರಿ ಮಲ್ಲಿಕಾರ್ಜುನ ಸ್ವಾಮಿ ಪ್ರಮುಖರು. ಕೋ.ಲ. ಶಾಂತಪ್ಪ "ಸ್ತ್ರೀ", ಮಿಠಾಯಿ ಬುಟ್ಟಿ, ಉತ್ತರ ಭೂಪ, ಮೊದಲಾದ ನಾಟಕಗಳ ಕರ್ತೃಗಳೆಂದು ತಿಳಿದುಬರುತ್ತದೆ. ರಂಗ ನಟ ವಾಸಣ್ಣ ರಂಗ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವುದರಲ್ಲೂ ಪ್ರಸಿದ್ಧರು.

ಸೀನರಿ ಮಲ್ಲಿಕಾರ್ಜುನ್ ಸ್ವಾಮಿ ನಾಟಕಗಳಿಗಾಗಿ ಸೂಕ್ತ ಸೀನರಿಗಳನ್ನು ಒದಗಿಸಿ ಪ್ರಸಿದ್ಧರಾದವರು. ಇಂದು ಮಲ್ಲಿಕಾರ್ಜುನ ಕಡಕೋಳ್, ಡಾ॥ ಎಂ.ಜಿ. ಈಶ್ವರಪ್ಪ. ಮೊದಲಾದವರು ಜಿಲ್ಲೆಯ ಒಂದಲ್ಲಾ ಒಂದು ಬಗೆಯ ರಂಗ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ.

---

೯. ಟಿ. ಗಿರಿಜಾ, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.ಸಂ. ೧೦೮.

ನಾಟ್ಯ

ಎಲ್ಲ ಕ್ಷೇತ್ರಗಳಲ್ಲಿರುವಂತೆ ನಾಟ್ಯ ಕ್ಷೇತ್ರದಲ್ಲಿಯೂ ಹಲವಾರು ಕಲಾವಿದರುಗಳಿದ್ದು, ಅವರು ನಾಟ್ಯದಲ್ಲಿ ಅಪರಿಮಿತವಾದ ಸಾಧನೆಯನ್ನು ಮಾಡಿ ನಾಡಿನಾದ್ಯಂತ ಹೆಸರು ಮಾಡಿದ್ದಾರೆ. ಅವರುಗಳಲ್ಲಿ ದಿ॥ ಶ್ರೀನಿವಾಸ್ ಕುಲಕರ್ಣಿ, ವಿದ್ವಾನ್ ರಘುನಾಥ ಕುಲಕರ್ಣಿ, ಪೂರ್ಣಿಮಾ ಭಾಗವತ, ದಿ॥ ಶೀಮತಿ ಎಮ್.ಎನ್. ಲಕ್ಷ್ಮೀದೇವಮ್ಮನಂತಹ ಕಲಾವಿದರು ನಾಡಿನೆಲ್ಲೆಡೆ ಹಲವಾರು ಕಾರ್ಯಕ್ರಮಗಳನ್ನು ಕೊಟ್ಟು ದಾವಣಗೆರೆ ಜಿಲ್ಲೆಯ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿಯುವಲ್ಲಿ ಕಾರಣೀಕರ್ತರಾಗಿದ್ದಾರೆ.

ಶ್ರೀನಿವಾಸ್ ಕುಲಕರ್ಣಿ: ನಾಟ್ಯದಲ್ಲಿಯೂ ದಾವಣಗೆರೆ ಜಿಲ್ಲೆ ತನ್ನ ಛಾಪನ್ನು ಮೂಡಿಸಿದೆ ಶ್ರೀನಿವಾಸ್ ಕುಲಕರ್ಣಿಯವರು ೧೯೫೫ರಲ್ಲಿ ದಾವಣಗೆರೆಯಲ್ಲಿ ನಾಟ್ಯ ಭಾರತಿ ಎಂಬ ಹೆಸರಿನ ನೃತ್ಯ ಶಾಲೆಯೊಂದನ್ನು ಆರಂಭಿಸುವ ಮುಖಾಂತರ ಈ ಜಿಲ್ಲೆಯಲ್ಲಿ ನೃತ್ಯದ ಕಂಪು ಪಸರಿಸತೊಡಗಿತು. ಇಂದಿಗೂ ಈ ಶಾಲೆ ನಡೆಯುತ್ತಿದೆ. ಶ್ರೀನಿವಾಸ ಕುಲಕರ್ಣಿಯವರು ತಮ್ಮ ಇಡೀ ಜೀವನವನ್ನು ನೃತ್ಯಕ್ಕಾಗಿಯೇ ಮೀಸಲಿಟ್ಟಿದ್ದರು.

ಶ್ರೀಮತಿ ಲಕ್ಷ್ಮೀ ದೇವಮ್ಮ: ಲಕ್ಷ್ಮೀ ದೇವಮ್ಮನವರೂ ಸಹ ತಮ್ಮ ಜೀವನವನ್ನೇ ನಾಟ್ಯ ಭಾರತಿ ಶಾಲೆಗಾಗಿ ನಾಟ್ಯಕ್ಕಾಗಿ ಮುಡಿಪಿಟ್ಟಿದ್ದಾರೆ. ಲಕ್ಷ್ಮೀದೇವಮ್ಮನವರದ್ದು ಬದುಕಿನಲ್ಲಿ ಸಾಕಷ್ಟು ನೋವು-ಕಷ್ಟಗಳನ್ನು ಕಿಂತುಂಡು ಮಾಗಿದ ಜೀವ. (ಜನಿಸಿದ್ದು ೧೯೨೧ ರಲ್ಲಿ ಹರಿಹರದಲ್ಲಿ ತಂದೆ-ಕಟ್ಟಿ ಸುಬ್ಬಾಶಾಸ್ತ್ರಿ. ತಾಯಿ ತುಂಗಮ್ಮ). ಆಗಿನ ಸಮಯದಲ್ಲೇ ಮೆಟ್ರಿಕ್ಯೂಲೆಷನ್‌ವರೆಗೆ ಓದಿದ್ದ ಇವರು ಬಾಲ್ಯದಿಂದಲೇ ಸಂಗೀತದಲ್ಲಿ ವಿಶೇಷ ಒಲವು ಹೊಂದಿರುವರಾಗಿದ್ದರು. ತಮ್ಮ ೮ನೇ ವಯಸ್ಸಿನಲ್ಲೇ (ಬಾಲ್ಯವಿವಾಹ) ಮದುವೆಯಾಗಿ ೯ನೇ ವಯಸ್ಸಿನಲ್ಲೇ ಪತಿಯನ್ನು ಕಳೆದುಕೊಂಡು ಬಾಲ ವಿಧವೆಯಾಗಿದುದು ಬದುಕಿನ ಉಪರ್ಯಾಸ, ಬದುಕಿನ ನೋವಿನಲ್ಲೂ ಸಂಗೀತದಲ್ಲಿ ಅದಮ್ಯ ಆಸಕ್ತಿ ಹೊಂದಿದ್ದರಿಂದ ತಮ್ಮ ತಾಯಿಯಿಂದ ವೀಣಾ ವಾದನವನ್ನು ಅಭ್ಯಸಿಸಿ, ಸಂಗೀತಕಲಿಕೆ ಆರಂಭಿಸಿದರು. ಸಂದರ್ಭವಶಾತ್ ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರ ಪರಿಚಯವಾಗಿ, ಅವರು ಲಕ್ಷ್ಮೀ ದೇವಮ್ಮನವರ ಒಳ್ಳೆಯ ಕಂಠಸಿರಿ ಹಾಗೂ ಸಂಗೀತಾಸಕ್ತಿ ಗುರುತಿಸಿ-ಲಕ್ಷ್ಮೀ ದೇವಮ್ಮನವರ ತಂದೆ-ತಾಯಿಗಳ ಸಮ್ಮತಿಯೊಂದಿಗೆ ಅವರನ್ನು ಶಿಷ್ಯೆಯನ್ನಾಗಿ ಸ್ವೀಕರಿಸಿ, ಕಥಕ್ಕಳಿ ಮತ್ತು ಭರತನಾಟ್ಯಗಳನ್ನು ಕಲಿಸಿದರು. ಅಲ್ಲಿಂದ ಇವರ ಬದುಕಿನ ದಿಕ್ಕೇ ಬದಲಿಸಿತು ಎಂದರೆ ತಪ್ಪಲ್ಲ. ಆಗಿನ ಕಾಲದಲ್ಲಿ ಹೆಸರಾಂತ (ಪ್ರಸಿದ್ಧ) ವಿದ್ವನ್ಮಣಿಗಳ ಗರಡಿಯಲ್ಲಿ ಪಳಗುವ ಸಂಯೋಗವೂ ಲಭಿಸಿತು. ಮದ್ರಾಸಿನ ಗೋಟುವಾದ್ಯ ಪ್ರವೀಣ ಶ್ರೀನಿವಾಸ ಅಯ್ಯಂಗಾರ್ ಮೈಸೂರಿನ ಆಸ್ಥಾನ ವಿದ್ವಾನ್ ದೇವೇಂದ್ರಪ್ಪ, ಚಕ್ರಕೋಟಿ ನಾರಾಯಣ ಶಾಸ್ತ್ರಿ ಮೊದಲಾದವರ ಬಳಿ ಸಂಗೀತಾಭ್ಯಾಸ ನಡೆಸಿದರು. ದೆಹಲಿ, ಮುಂಬೈ, ಮೈಸೂರು, ಬೆಂಗಳೂರು ಮೊದಲಾದ ಕಡೆಗಳಲ್ಲಿ ನೃತ್ಯ ಕಾರ್ಯಕ್ರಮ ನೀಡಿರುವ ಇವರು ಗುಬ್ಬಿ

ಕಂಪನಿ, ಕೆ.ಬಿ.ಆರ್. ಕಂಪನಿ, ಮೊದಲಾದ ನಾಟಕ ಕಂಪನಿಗಳಲ್ಲಿ ಗಾಯಕಿಯಾಗಿ, ನೃತ್ಯ-ಸಂಗೀತ ಸಂಯೋಜಕರಾಗಿ ಸೇವೆ ಸಲ್ಲಿಸಿದ್ದೂ ಉಂಟು. ತಮ್ಮ ಗುರು ಶ್ರೀನಿವಾಸ ಕುಲಕರ್ಣಿಯವರ ನಿಧನಾನಂತರ ನಾಟ್ಯ ಭಾರತಿ ಕಲಾ ಕೇಂದ್ರದ ಸಂಚಾಲಕತ್ವವನ್ನು ವಹಿಸಿಕೊಂಡು, ಅದರ ಏಳ್ಗೆಗಾಗಿ ನೃತ್ಯ ಪ್ರತಿಭೆಗಳನ್ನು ತಯಾರ ಮಾಡಿದರು. ಇದೇ ಮುಂದುವರಿಸಿದ ಗುರು-ಶಿಷ್ಯ ಪರಂಪರಾ ನೃತ್ಯ ಶಿಕ್ಷಣ 'ನಾಟ್ಯಭಾತಿ' ನೃತ್ಯ ಶಾಲೆಯಲ್ಲೂ ದೊರಕುತ್ತಿದೆ.

ವಿದ್ವಾನ್ ರಘುನಾಥ ಕುಲಕರ್ಣಿ: ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರ ಪರಂಪರೆಯನ್ನೇ ಮುಂದುವರಿಸಿಕೊಂಡು ಬಂದವರು 'ನಾಟ್ಯ ಭಾರತಿ' ನೃತ್ಯ ಮತ್ತು ಸಂಗೀತ ಶಾಲೆಯಲ್ಲಿ ನೃತ್ಯ ಗುರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರೆ, ಪತ್ನಿ ಸಂಗೀತ-ನೃತ್ಯ ವಿದುಷಿ ರಜನಿ ಕುಲಕರ್ಣಿಯವರಿಗೆ ಹೆಗಲೆಣೆಯಾಗಿ ಶ್ರಮಿಸುತ್ತಿರುವವರು. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಕುಮಾರ ಪಟ್ಟಣಂ, ಹರಿಹರ ಮತ್ತಿತರ ಕಡೆಗಳಲ್ಲಿ ಶಾಸ್ತ್ರೀಯ, ನೃತ್ಯ ತರಬೇತಿ ವಿದ್ವಾನ್ ಕೆ.ಜಿ.ಕುಲಕರ್ಣಿ, ನಾಟ್ಯಾಚಾರ್ಯ ಕೆ.ಎಂ. ರಾಮನ್‌ರವರುಗಳ ಬಳಿ ಹೆಚ್ಚಿನ, ಪರಿಣಿತಿ ಪಡೆದಿರುವ ರಘುನಾಥ ಕುಲಕರ್ಣಿಯವರು ಶ್ರೇಷ್ಠ ನೃತ್ಯ ಸಂಯೋಜನಕರೆಂದೆ ಹೆಸರಾಗಿರುವ ದೆಹಲಿಯ ಉಮಾಕಾತ್‌ರವರಲ್ಲಿಯೂ ತರಬೇತಿ ಪಡೆದವರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಭರತನಾಟ್ಯ ವಾರ್ಷಿಕ ಪರೀಕ್ಷೆಯಲ್ಲಿ ತೀರ್ವ ಗಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ 'ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿ ಪ್ರಶಸ್ತಿ', 'ವಿದುಷಿ ಲಕ್ಷ್ಮೀ ದೇವಮ್ಮ ಪ್ರಶಸ್ತಿ'ಗಳು ದೊರಕಿವೆ.

ಪೂರ್ಣಿಮ ಭಾಗವತ: ಪದವೀದರೆಯಾಗಿರುವ ಇವರು ಭರತನಾಟ್ಯದಲ್ಲಿ ಕಾರ್ಯ ಸಾಧನೆಗಳಲ್ಲಿ ಸಂಪೂರ್ಣ ನಡೆಸಿದವರು. ಪ್ರತಿ ರಾಜಗೋಪಾಲ ಭಾಗವತನ ಕಾರ್ಯ ಸಾಧನೆಗಳಲ್ಲಿ ಸಂಪೂರ್ಣ ಸಹಭಾಗಿ. ಶ್ರೀಮತಿ ಸುಶೀಲಾ ಚಳ್ಳಕೆರೆ ಬಳಿ ಭರತನಾಟ್ಯದ ಪ್ರಾಥಮಿಕ ಅಭ್ಯಾಸ ನಡೆಸಿದ ನಂತರ ಸಾಗರದ ವಿದ್ವಾನ್ ಜಿ.ಬ. ಜನಾರ್ಧನರವರ ಹತ್ತಿರ ಭರತನಾಟ್ಯದಲ್ಲಿ ಪ್ರೌಢ ತರಬೇತಿ. ವಿದುಷಿ ಕನಾಟಕ ಕಲಾಶ್ರಿ ಪ್ರಶಸ್ತಿ ಪುರಸ್ಕೃತೆ ಬೆಂಗಳೂರಿನ ಬಿ.ಕಿ. ವಸಂತ ಲಕ್ಷ್ಮಿಯವರು ಬಳಿ ವಿಭಿನ್ನ ಮಾರ್ಗದರ್ಶನವನ್ನು ಪಡೆದಿರುವರು.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಕೃಷಿ. ಶ್ರೀಮತಿ ಪೂರ್ಣಿಮಾ ಭಾಗವತರು ಕರ್ನಾಟಕ ಶಾಸ್ತ್ರೀಯ ಸಂಗೀತಾಭ್ಯಾಸ ನಡೆಸಿದ್ದು ಚಳ್ಳಕೆರೆಯ ಶ್ರೀಮತಿ ಸುಶೀಲ ಇವರ ಬಳಿಯಲ್ಲಿ ನಂತರ ಪತಿ ರಾಜ ಗೋಪಾಲ ಭಾಗವತರ ಹತ್ತಿರವೇ ಸಂಗೀತಾಭ್ಯಾಸ ಮುಂದುವರೆಸಿದರು. ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ತತ್ಪರರಾಗಿರುವ ಪೂರ್ಣಿಮಾರವರು 'ಭಾಗವತ ಪ್ರತಿಷ್ಠಾನ'ದ ಸದಸ್ಯೆಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಮೇಲಿನ ಎಲ್ಲ ವಿಷಯಗಳನ್ನು ನೋಡಿದಾಗ ದಾವಣಗೆರೆ ಜಿಲ್ಲೆಯಲ್ಲಿರುವ ಕಲಾವಿದರು ಹಾಗೂ ಅವರು ಮಾಡಿದ ಅವರದೇ ಆದ ಕ್ಷೇತ್ರಗಳಾದ ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ನಾಟಕ, ನಾಟ್ಯ ಮುಂತಾದವುಗಳ ಬಗ್ಗೆ ಹಾಗೂ ಅವುಗಳ ಆಚಾರ-ವಿಚಾರ ಮುಂತಾದ ಅಂಶಗಳನ್ನು ಗಮನಿಸಿದರೆ ದಾವಣಗೆರೆ ಜಿಲ್ಲೆಯ ಇತಿಹಾಸದ ಒಂದು ಚಿತ್ರಣ ಸಿಗುತ್ತಿದ್ದು, ಅದು ಎಷ್ಟು ಕ್ಷಿಪ್ರವಾಗಿ ಬೆಳವಣಿಗೆಯನ್ನು ಕಂಡಿದೆ ಎಂದು ಸ್ಪಷ್ಟವಾಗುತ್ತದೆ.

– * –

ಬಾತಿ ಗುಡ್ಡದ ಮೇಲಿನಿಂದ ಕಾಣುವ ಒಂದು ವಿಹಂಗಮ ನೋಟ.



ಬಾತಿ ಗುಡ್ಡದ ಮೇಲಿನಿಂದ ಕಾಣುವ ರೇವಣಸಿದ್ಧೇಶ್ವರ ದೇವಾಲಯ.



ಬಾಬಿ ಗುಡ್ಡದ ಮೇಲಿರುವ ಶಿಲ್ಪ ಕಲಾಕೃತಿಗಳು.





ದಾವಣಗೆರೆ ಕುಂದುವಾಡ ಕೆರೆಯ ದಡದಲ್ಲಿರುವ ಶಿಲ್ಪ ಕಲಾಕೃತಿಗಳು.





ಸಂಗೀತ ಹಾಗೂ ನೃತ್ಯ.





ನಾಟಕ ರಂಗ.





ಸಂತೆಬೆನ್ನೂರ ಪುಷ್ಕರಣಿ





ಬಾಗಳಿಯ ಕಲ್ಲೇಶ್ವರ ದೇವಾಲಯ





ಬಾಗಳಿ ದೇವಾಲಯದ ಮೇಲಿರುವ ಉಬ್ಬು ಶಿಲ್ಪಗಳು



ಹರಿಹರೇಶ್ವರ ದೇವಾಲಯ



ಹರಿಹರೇಶ್ವರ ದೇವಾಲಯದ ಗೋಡೆಗಳ ಮೇಲಿರುವ ನೃತ್ಯ ಶಿಲ್ಪಗಳು



ಅಧ್ಯಾಯ: ೩

ದಾವಣಗೆರೆ ಜಿಲ್ಲೆಯ ಜನಪದ ಚಿತ್ರಕಲೆ

'ಜನಾಂಗದ ಬದುಕು ಜೀವನ ಚರಿತ್ರೆಯೆನಿಸಿದರೆ ಕಲೆಗಳು ಅದರ ಆತ್ಮ ಚರಿತ್ರೆಯೆನಿಸುತ್ತವೆ. ಕಲೆಗಳ ಜನತೆ ಬದುಕಿದ ರೀತಿ ನೀತಿ, ಅನುಸರಿಸಿದ ಧರ್ಮ, ಬದುಕಿನಲ್ಲಿ ಕಂಡುಂಡ ಜೀವನ ಸಮಸ್ಯೆ, ಪರಿಶೀಲಿಸಿಕೊಂಡು ಬಂದ ಜೀವನ ಮೌಲ್ಯ ಇತ್ಯಾದಿಗಳ ವಿವರಣೆಗಳಾಗಿರುತ್ತವೆಯೆಂದರೆ ತಪ್ಪಲ್ಲ'[೧].

ಒಂದು ಸಂಸ್ಕೃತಿಯ ವೈಭವ ಸೂಚಿತವಾಗುವದು ಆ ಸಂಸ್ಕೃತಿಯಲ್ಲಿ ಸ್ಪಷ್ಟಗೊಂಡ ಕಲೆಗಳ ಆಧಾರದಿಂದ, ಏಕೆಂದರೆ ಕಲೆಗಳು ಒಂದು ಸಂಸ್ಕೃತಿಯ-ಜನಾಂಗದ ಚೈತನ್ಯ ಬುಗ್ಗೆಗಳು. ಅದರಲ್ಲೂ ಮುಖ್ಯವಾಗಿ ಜನಪದ ಕಲೆಗಳು ಸಾಮಾಜಿಕ ಜೀವನದ ಸಂಕೇತಗಳೂ, ರಾಷ್ಟ್ರೀಯ, ಸಂಸ್ಕೃತಿಯ ತಾಯಿಬೇರು ಆಗಿರುವದರಿಂದ ಜನಪದ ಕಲೆಗಳನ್ನು ಅಭ್ಯಸಿಸಿದರೆ ಜನ ಸಮುದಾಯದ ಕ್ರಿಯಾ ಶೀಲ ಮನಸ್ಸನ್ನು ಅಭ್ಯಸಿಸಿದಂತೆಯೇ ಸರಿ. ಹಾಗಾಗಿ ನನ್ನ ಈ ಪ್ರಬಂಧದಲ್ಲಿ ದಾವಣಗೆರೆ ಜಿಲ್ಲೆಗೆ ಸೀಮಿತವಾಗಿ ಈ ಜಿಲ್ಲೆಯ ಸಾಂಸ್ಕೃತಿಯ ವಿಶೇಷತೆ-ವಿಶಿಷ್ಟತೆಗಳನ್ನು ಹೆಚ್ಚಿಸಲು ಕಾರಣವಾದ ಜನಪದ ಚಿತ್ರಕಲೆಯ ಕುರಿತು ಒಂದಿಷ್ಟು ವಿವರಿಸುವ ಪ್ರಯತ್ನವಿದೆ. ದಾವಣಗೆರೆ ಜಿಲ್ಲೆಯಲ್ಲಿನ ಜನಪದ ಚಿತ್ರಕಲೆಯಲ್ಲಿ ಹಚ್ಚೆ ಹಾಕುವದು, ಮದರಂಗಿ ಚಿತ್ರಕಲೆ, ಕಸೂತಿ ಚಿತ್ರಕಲೆ, ಹಬ್ಬ-ಹರಿದಿನಗಳಲ್ಲಿ ಚಿತ್ರಿಸುವ ಚಿತ್ರ ವಿನ್ಯಾಸಗಳು, ರಂಗೋಲಿ ಹಾಕುವದು ಮೊದಲಾದವುಗಳು ಮುಖ್ಯವಾದ ಜನಪದ ಚಿತ್ರಕಲೆ ಎನಿಸಿವೆ.

ಹಚ್ಚೆ ಹಾಕುವರು: ಹಚ್ಚೆ ಹಾಕುವವರು ಸಾಮಾನ್ಯವಾಗಿ ಕೊರವಂಜಿ, ಕೊರಮರು, ಕುಕ್ಕೆಕೊರಮರು, ಸಿಳ್ಳೇಕ್ಯಾತರು, ಮೇದರು, ಬುರುಡೇ ಬೆಸ್ತರು ಮೊದಲಾದ ಜನಾಂಗದವರು. ಇವರಿಗೆ ಹಚ್ಚೆ ಹಾಕಿದ್ದಕ್ಕಾಗಿ ಧವಸ-ಧಾನ್ಯಗಳನ್ನೊ, ತೆಂಗಿನಕಾಯಿಯನ್ನೊ ಕಾಣಿಕೆಯಾಗಿ

---

೧. ಡಾ. ಎಸ್.ಸಿ.ಪಾಟೀಲ್, ಕರ್ನಾಟಕದ ಜನಪದ ಚಿತ್ರಕಲೆ, ಪು.ಸಂ. ೩.

ನೀಡುತ್ತಾರೆ. ಇಂದು ಹಣವನ್ನು ನೀಡುವುದುಂಟು (ತೆಂಗಿನಕಾಯಿ ಅಥವಾ ದವಸಧಾನ್ಯಗಳಿಗೆ ಬದಲಾಗಿ).

ದಾವಣಗೆರೆ ಜಿಲ್ಲೆಯಲ್ಲಿರುವ ಲಮಾಣಿಗರು ಹಚ್ಚೆ ಹಾಕಿಸಿಕೊಳ್ಳವದರಲ್ಲಿ ಮುಂದು. ಇವರಿಗೆ ಹಚ್ಚೆ ಹಾಕಿಸಿಕೊಳ್ಳುವದೆಂದರೆ ಧಾರ್ಮಿಕ, ಸೌಂದರ್ಯವರ್ಧಕ ಆಚರಣೆ. ಈ ಜನಾಂಗದವರು ಮೊಣಕಾಲು ಸಂಧಿ, ಗಲ್ಲ, ಮೂಗು, ಹಣೆ, ಕೈ ಬೆರಳುಗಳು ಹೀಗೆ ದೇಹದ ಬೇರೆ ಬೇರೆ ಅಂಗಗಳಿಗೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಈ ಸಮುದಾಯದ ಸ್ತ್ರೀಯರು ಅಂಗೈ, ಮುಂಗೈ, ಕಾಲುಗಳ ಮೀನುಖಂಡಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಮಾವಿನ ಎಲೆ, ಕಮಲದ ಹೂವು, ದೀಪಕಂಬ, ಪಕ್ಷಿ, ಚೇಳು, ಗಿಡ, ಬಳ್ಳಿ ಇತ್ಯಾದಿ ನಾನಾ ವಿನ್ಯಾಸಗಳುಳ್ಳ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಈ ಜಿಲ್ಲೆಯಲ್ಲಿರುವ ಲಂಬಾಣಿ ಸಮುದಾಯದ ಸ್ತ್ರೀಯರಲ್ಲಿ ತಾವೇ ಸ್ವತಃ ಹಚ್ಚೆ ಹಾಕಿಸಿಕೊಳ್ಳವವರೂ ಇದ್ದಾರೆ ಮತ್ತು ಈ ವೃತ್ತಿನಿರತರಿಂದ ಹಚ್ಚೆ ಹಾಕಿಸಿಕೊಳ್ಳುವವರೂ ಇದ್ದಾರೆ.

ಹಚ್ಚೆ ಹಾಕಿಸಿಕೊಳ್ಳುವ ಕ್ರಮ: ಮೊದಲು ದೀಪದ ಕಿಟ್ಟವನ್ನು ಸಂಗ್ರಹಿಸಲಾಗುತ್ತದೆ. ನಂತರ ಸಂಗ್ರಹವಾದಂತಹ ದೀಪದ ಕಿಟ್ಟವನ್ನು ಕೊಬ್ಬರಿ ಎಣ್ಣೆಯಲ್ಲಿ ಕರಗಿಸಿ, ದ್ರವ ಕಿಟ್ಟವನ್ನಾಗಿ ಪರಿವರ್ತಿಸಿಕೊಳ್ಳುತ್ತಾರೆ. ಹೀಗೆ ತಯಾರಾದ ದ್ರವ ಕಿಟ್ಟದಲ್ಲಿ ಸೂಜಿಯನ್ನು ಅದ್ದಿ ಅದ್ದಿ ಹಚ್ಚೆ ಹಾಕ ಬೇಕಾದ ಭಾಗದಲ್ಲಿ ತಮಗೆ ಬೇಕಾದ ವಿನ್ಯಾಸದ ಆಕಾರದಲ್ಲಿ ಚುಚ್ಚಿ ಕೊಳ್ಳುತ್ತಾರೆ. ತಮ್ಮ ಮರಣಾನಂತರ ತಮ್ಮೊಂದಿಗೆ ಬರುವದು ಹಚ್ಚೆ ಮಾತ್ರವೇ ಎಂದು ನಂಬುತ್ತಿದ್ದ ಲಂಬಾಣಿಗರು ಇಂದಿನ ಆಧುನಿಕ ಸಮಾಜದಲ್ಲೂ ತಾವೂ ಬದುಕಿನಲ್ಲಿ ಆಧುನಿಕತೆಯನ್ನು ರೂಢಿಸಿಕೊಳ್ಳುತ್ತ ಹಚ್ಚೆ ಹಾಕಿಸಿಕೊಳ್ಳುವುದರಲ್ಲಿ ಅನಾಸಕ್ತಿ ತಾಳ ತೊಡಗಿದ್ದಾರೆ.

ಮದರಂಗಿ ಕಲೆ: ಇದು ಇಲ್ಲಿನ ಬಹುತೇಕ ಎಲ್ಲ ಸಮುದಾಯದವರ ಪ್ರೀತಿಗೆ ಪಾತ್ರವಾಗುತ್ತಿರುವಂತಹುದು. ಹಿಂದೆ ಮುಸ್ಲಿಂ, ಮರಾಠಾ, ವಾರವಾಡಿ ಜನ ಸಮುದಾಯದಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದ ಈ ಕಲೆಗಾರಿಕೆ ಇಂದು ಅನ್ಯ ಸಮುದಾಯದವರನ್ನು ಸಹ ಆಕರ್ಷಿಸುತ್ತಿದೆ. ಅಲ್ಲದೆ ಹಬ್ಬ-ಹರಿದಿನಗಳು, ಮದುವೆಯಂತಹ ಮಂಗಳಕರ ಕಾರ್ಯಗಳಲ್ಲಿ ಮಾತ್ರ ಅಭಿವ್ಯಕ್ತಿಸಲ್ಪಡುತ್ತಿದ್ದ ಈ ಕಲೆಗಾರಿಕೆ ಇಂದು ದಿನ ನಿತ್ಯದ ಆನಂದದಾಯಕ ಆಚರಣೆಯಾಗಿ ಮಾರ್ಪಾಡುತ್ತಿದೆ. ಮನೆ-ಮನೆಗಳಲ್ಲಿ ಜಾತಿ-ಮತಗಳ ಭೇದವಿಲ್ಲದೆ. ಮದರಂಗಿ ಹಾಕುವವರು-ಹಾಕಿಸಿಕೊಳ್ಳುವವರು ಇದ್ದಾರೆ. ಬ್ಯೂಟಿಪಾರ್ಲರ್‌ಗಳಲ್ಲಿ ಮದರಂಗಿ ಹಾಕಲಾಗುತ್ತದೆ. ಹೀಗೆ ಬಗೆ ಬಗೆಯ ಚಿತ್ತಾರಗಳು ಕಾಣಿಸಿಕೊಳ್ಳುತ್ತಿವೆ. ಸ್ತ್ರೀಯರ ಹಸ್ತ ಸೌಂದರ್ಯವರ್ಧನೆಯಲ್ಲಿ ಮದರಂಗಿ ಹಾಕಿಸಿಕೊಳ್ಳುವದು ಅನಿವಾರ್ಯ ಎಂಬಷ್ಟರ ಮಟ್ಟಿಗೆ ಇದು ಜನಪ್ರೀಯವಾಗಿದೆ. ಈ ಕಲೆಗಾರಿಕೆ ನಗರದಲ್ಲಿ ಕೆಲವರ ವಾಣಿಜ್ಯ ಕಸುಬಾಗಿದ್ದರೆ ಹಳ್ಳಿಗರಲ್ಲಿ ಸ್ನೇಹದ, ಉತ್ತಮ ಬಾಂಧವ್ಯದ, ಕಲಾ ಕೌಶಲ್ಯದ ಆನಂದವನ್ನು ಹಂಚಿಕೊಳ್ಳುವ

ಹವ್ಯಾಸಿ ಕಲೆಯಾಗಿದೆ.

'ಕಲಾತ್ಮಕವಾಗಿ ಮದರಂಗಿ ಚಿತ್ರ ಬಿಡಿಸಿಕೊಂಡ ಮೇಲೆ ಸುಮಾರು ತಾಸುಗಳ ಕಾಲ ಅದನ್ನು ಆರಲು ಬಿಡಬೇಕಾಗುತ್ತದೆ. ನಂತರ ಅರಿವೆಯ ಸಹಾಯದಿಂದ ಸಾವಕಾಶವಾಗಿ ಒರೆಸಿ ತೆಗೆಯುತ್ತಾರೆ. ಆಗ ಅದರ ಮೇಲೆ ನೀರು ಬೀಳದಂತೆ ಮತ್ತೆ ೭-೮ ತಾಸು ಮುಂಜಾಗ್ರತೆ ವಹಿಸಬೇಕಾಗುತ್ತದೆ. ಮದರಂಗಿ ಒರೆಸಿ ತೆಗೆದ ಸ್ಥಳಕ್ಕೆ ಕೆಲವು ಸಲ ಸಾಸಿವೆ ಎಣ್ಣೆಯನ್ನು ಬಿಸಿ ಮಾಡಿದ ಲವಂಗದ ಪುಡಿಯನ್ನು ಲೇಪಿಸುವರು ಅಥವಾ ಸಕ್ಕರೆಯನ್ನು ನೀರಿನೊಂದಿಗೆ ಕಲಿಸಿ ಹಚ್ಚುತ್ತಾರೆ. ಇದರಿಂದ ಬಣ್ಣ ಕೆಂಪಾಗುವದಲ್ಲದೆ ಬಹಳ ದಿನ ಅಚ್ಚಳಿಯದೆ ಉಳಿಯುತ್ತದೆ'[೨].

'ಮದರಂಗಿ ಆರುತ್ತ ಬಂದಂತೆ ಹೆಕ್ಕಳೆಯಲಾಗುತ್ತದೆ. ಆ ಹೆಕ್ಕಳೆಯನ್ನು ಒರೆಸಿದಂತೆ ಹೆಕ್ಕಳೆ ಕಳೆದ ಜಾಗದಲ್ಲಿ ಮದರಂಗಿಯ ಬಿಂದು, ರೇಖೆಯಂತಹ ವಿನ್ಯಾಸ ಕಂಗೊಳಿಸುತ್ತದೆ. ಹಲವು ದಿನಗಳ ನಂತರ ಬಣ್ಣ ಮಸಕಾಗುತ್ತ ಕ್ರಮೇಣ ಇಲ್ಲದಾಗುವುದು'[೩]. ಮದರಂಗಿ ಚಿತ್ರಕಲೆ ಭಾವನಿಷ್ಠ ಕಲೆಯೂ ಹೌದು, ಅದರಂತೆಯೇ ಧರ್ಮ ನಿಷ್ಠವಾದುದೂ ಹೌದು. ದಾವಣಗೆರೆ ಜಿಲ್ಲೆಯ ಮಟ್ಟಿಗೂ ಈ ಮಾತು ಅನ್ವಯಿಸುತ್ತದೆ. ಇಲ್ಲಿಯ ಜನ ಯಾವದೇ ವಿಶೇಷ ಸಂದರ್ಭಗಳು ಇಲ್ಲದಿದ್ದರೂ ಖುಷಿಗೋಸ್ಕರ ಮದರಂಗಿಯಿಂದ ತಮ್ಮ ಶರೀರದ ವಿವಿಧ ಅಂಗಗಳನ್ನು ಅಲಂಕರಿಸಿಕೊಳ್ಳದೂ ಉಂಟು. ಇಲ್ಲಿ ಭಾವ ಪ್ರಧಾನ ಅಲ್ಲದೆ ಮದುವೆ, ಹಬ್ಬ, ಉತ್ಸವ, ಜಾತ್ರೆ ಇತ್ಯಾದಿ ವಿಶೇಷ ಸಂದರ್ಭಗಳಲ್ಲಿ ಶರೀರದ ವಿವಿಧಾಂಗಗಳನ್ನು ಮದರಂಗಿಯಿಂದ ಅಲಂಕೃತಗೊಳಿಸಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಧರ್ಮನಿಷ್ಠತೆ ಸಮ್ಮಿಳಿತವಾಗಿರುತ್ತದೆ.

ಪುರುಷರು ಮದರಂಗಿ ಹಚ್ಚಿಕೊಳ್ಳವದು ಅಪರೂಪ, ಮದುವೆಯಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೆಲವು ಪುರುಷರು ಮದರಂಗಿ ಹಚ್ಚಿಕೊಳ್ಳುತ್ತಾರೆ. ಸ್ತ್ರೀಯರದೇ ಹೆಚ್ಚು ಪಾಲು, ಮದರಂಗಿಯನ್ನು ಹಚ್ಚಿಸಿಕೊಳ್ಳವದರಲ್ಲಿ, ನಕ್ಷಾ ಪ್ರಧಾನ ಸುಳುವು, ಹೂಬಳ್ಳಿ, ಎಲೆಗಳ ನೂರಾರು ನಮೂನೆಯ ತಿರುವು ಮುರುವಿನ ಕಲಾತ್ಮಕ, ಅಲಂಕಾರಯುತ ಚಿತ್ರ ವಿನ್ಯಾಸಗಳು ಈ ಭಾಗದ ಜನರು ಹಚ್ಚಿಕೊಳ್ಳುವ ಮದರಂಗಿಯಲ್ಲಿ ಸೇರಿಕೊಂಡಿರುತ್ತದೆ.

ಕಸೂತಿ ಚಿತ್ರಕಲೆ: 'ಕಸೂತಿ' ಬಣ್ಣದ ದಾರಗಳಿಂದ ವಿಧವಿಧವಾದ ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರಕ್ಕೆ ಕಸೂತಿ ಎಂದು ಕರೆಯುವರು. ವಸ್ತ್ರದ ಮೇಲೆ, ವಿರಳವಾಗಿ ಚರ್ಮ, ಇತರ ವಸ್ತುಗಳ ಮೇಲೆ ಸೂಜಿ-ದಾರಗಳಿಂದ ಹೆಣೆದು ಮಾಡಿದ ಅಲಂಕಾರವನ್ನೇ ಕಸೂತಿ ಎನ್ನಬಹುದು. 'ಕಸೂತಿ ಕಲೆಯಲ್ಲಿ ಈ ಜಿಲ್ಲೆಯ ಸ್ತ್ರೀ ಸಮುದಾಯ ಅದರಲ್ಲೂ ವಿಶೇಷವಾಗಿ ಲಂಬಾಣಿ ಜನಾಂಗದ ಪಾಲು ಅಧಿಕ'[೪].

---

೨. ಡಾ.ಎಸ್.ಸಿ.ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ಪು.ಸಂ. ೧೧೮.
೩. — ಅದೇ — ಪು.ಸಂ. ೧೧೮.
೪. ಡಾ॥ ಎಸ್.ಸಿ. ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ. ಪು.ಸಂ. ೧೪೨.

ದಾವಣಗೆರೆ ಜಿಲ್ಲೆಯಲ್ಲಿ ಕ್ಯಾರಕಟ್ಟೆ ತಾಂಡಾ, ಬಸಪಟ್ಟಣ ತಾಂಡಾ ಚನ್ನಸಮುದ್ರ ತಾಂಡಾ ಸೇರಿದಂತೆ ಸರಿಸುಮಾರು ಮೂವತ್ತೊಂದಕ್ಕೂ ಮಿಕ್ಕಿ ಲಂಬಾಣಿ ತಾಂಡಾಗಳು ಇದ್ದು ಈ ತಾಂಡಾಗಳಲ್ಲಿನ ಲಂಬಾಣಿ ಸ್ತ್ರೀಯರಿಗೆ ಕಸೂತಿ ಕಲೆಯನ್ನು ಜೀವಂತವಾಗಿರಿಸಿದ ಶ್ರೇಯಸ್ಸು ಸಲ್ಲುತ್ತದೆ. ಈ ತಾಂಡಾಗಳಲ್ಲಿನ ಮಹಿಳೆಯರು ತಾವೇ ಕಸೂತಿ ಹಾಕಿ ಸಿದ್ಧ ಪಡಿಸಿದ್ದ ವಸ್ತುಗಳನ್ನು ಧರಿಸುತ್ತಾರೆ. ಇವರು ಸಿದ್ಧಪಡಿಸಿಕೊಳ್ಳುವ ಕಸೂತಿ ವಿನ್ಯಾಸಕ್ಕೆ ಇವರ ಆಡುಮಾತಿನಲ್ಲಿ ಒಂದೊಂದಕ್ಕೂ ಒಂದೊಂದು ಹೆಸರುಂಟು. ಒಂದು ಬಗೆಯ ಕಸೂತಿ ವಿನ್ಯಾಸಕ್ಕೆ ರೇಲೊ ಪೆರೇರೊ ಎಂದು ಹೆಸರಿಸಿದರೆ, ಮಗದೊಂದಕ್ಕೆ ಬಕ್ಯಾತೊಡೇರೊ, ಕಟ್ಟಾ ತೊಡೇರೊ, ಎಂಬ ಹೆಸರಿನ ಕಸೂತಿ ವಿನ್ಯಾಸಗಳನ್ನು ಮಾತ್ರ ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನ ನಡೆಸಿರುವೆ.

ಬಳ್ಳಿಯ ವಿನ್ಯಾಸ (ರೇಲೊ ಪೆರೇರೊ): ಇದು ಬಳ್ಳಿಯ ವಿನ್ಯಾಸವನ್ನು ಹೋಲುವಂತಹ ಒಂದು ಬಗೆಯ ಕಸೂತಿ. ಗಾಗ್ರಾದ ಮೇಲೆ ಹೆಣೆಯಲಾಗುವ ಬಳ್ಳಿಯಂತಿರುವ ಈ ವಿನ್ಯಾಸದಲ್ಲಿ ೨ ರಿಂದ ೩ ಇಂಚುಗಳ ಅಂತರದಲ್ಲಿ ಗಾಜುಗಳ ಪೋಣಿಸಲ್ಪಟ್ಟಿರುತ್ತವೆ. ಇದರಲ್ಲಿ ಕೆಂಪು ಅಥವಾ ಹಳದಿ ಬಣ್ಣದ ದಾರ ಉಪಯೋಗಿಸುವದು ಸಾಮಾನ್ಯ.

ಚುಕ್ಕೆಸಾಲಿನ ವಿನ್ಯಾಸ (ಬಕ್ಯಾ ತೊಡೇರೊ): ಇದು ಚಿಕ್ಕ ಚಿಕ್ಕ ಚುಕ್ಕೆಗಳ ಸಾಲಿನಾಕಾರದ ವಿನ್ಯಾಸ ಒಂದು ಸಾಲಿನಿಂದ ಮೂರು ಸಾಲುಗಳವರೆಗೆ ಚಿಕ್ಕ ಚಿಕ್ಕ ಚುಕ್ಕೆಗಳು ಸಾಲಾಗಿ ಪೋಣಿಸಲ್ಪಟ್ಟಿರುವದು ಈ ವಿನ್ಯಾಸದ ವೈಶಿಷ್ಟ್ಯ. ಬಣ್ಣ ಬಣ್ಣದ ದಾರಗಳ ಮೂಲಕ ಚುಕ್ಕೆ ಸಾಲು ನಿರ್ಮಾಣವಾಗಿರುತ್ತದೆ.

ತುಂಡು ಬಟ್ಟೆಯ ಕಸೂತಿ (ಕಟ್ಟಾ ಮೊಡೇರೊ): ಇದು ಬಟ್ಟೆಯನ್ನು ಕತ್ತರಿಸಿ, ಅಚ್ಚುಕಟ್ಟಾಗಿ ಸಿದ್ಧಪಡಿಸಿ ಉಳಿದ ಹಲವಾರು ತುಂಡು ಬಟ್ಟೆಗಳನ್ನು ಜೋಡಿಸಿ, ಉಡುಪುಗಳ ಮೇಲೆ ಹೆಣೆದು ತಯಾರಿಸುವಂತಹ ಕಸೂತಿ ವಿನ್ಯಾಸ, ಇದರಲ್ಲಿ ಬಟ್ಟೆಗಳ ಅಂಚುಗಳಲ್ಲಿ ಒಂದು ಇಂಚು ಅಗಲವುಳ್ಳ ಬಿಳಿಯ ಬಟ್ಟೆ ಕತ್ತರಿಸಿ, ಜೋಡಿಸಿ ಹೊಲಿಯಲಾಗುತ್ತದೆ. ಕಪ್ಪು ಬಟ್ಟೆಯ ಮೇಲೆ ಬಿಳಿಯ ಬಟ್ಟೆ ಹೊಲದಿರುವದರಿಂದ ಬಿಳಿಯ ಬಟ್ಟೆಯ ತುಂಡು ಎದ್ದು ಕಂಡು ವಿನ್ಯಾಸ ಮೆರುಗು ಪಡೆದು ಕಂಗೊಳಿಸುತ್ತದೆ. ಗೋಪುರಾಕೃತಿಯಂತೆ ಗೋಚರಿಸುವ ಬಿಳಿಯ ಬಟ್ಟೆ ತುಂಡುಗಳ ತುದಿಯ ಮೇಲೆ ಕೆಂಪು ಅಥವಾ ಹಳದಿ ಬಣ್ಣದ ದಾರದಿಂದ ಚೌಕಾಕಾರದ ಸುಂದರ ಕಸೂತಿ ವಿನ್ಯಾಸ ಇರುತ್ತದೆ.

ಲಂಬಾಣಿ ಸ್ತ್ರೀಯರು ಸಾಮಾನ್ಯವಾಗಿ ಧರಿಸುವುದು ಕೆಂಪು ವರ್ಣದ ಬಟ್ಟೆ. ಆ ಕೆಂಪು ವರ್ಣದ ಉಡುಪು ಬಣ್ಣ ಬಣ್ಣದ ದಾರಗಳಿಂದ ಹೆಣೆಯಲ್ಪಡುತ್ತದೆ. ಹಲವಾರು ವಿನ್ಯಾಸದ ಕಸೂತಿಯನ್ನು ಒಳಗೊಂಡಿದ್ದು, ಅದರಲ್ಲಿ ಅಂದವಾಗಿ ಕತ್ತರಿಸಲ್ಪಟ್ಟ ಗಾಜು, ಗೆಜ್ಜೆ, ಕವಾಡೆ

ಮೊದಲಾದ ವಸ್ತುಗಳಿಂದ ಅಲಂಕರಣಗೊಂಡಿರುತ್ತದೆ. ದಾವಣಗೆರೆ ಮತ್ತು ಸುತ್ತಮುತ್ತಲಿನ ಭಾಗದಲ್ಲಿ ವಾಸಿಸುವ ಲಂಬಾಣಿಗರು ಧರಿಸುವದು ಕೈಕಸೂತಿ ಉಡುಪುಗಳನ್ನು, ಹಾಗಾಗಿ ಒಂದು ಜೊತೆ ಉಡುಪು ತಯಾರಿಸಲು ಇವರಿಗೆ ಸರಿಸುಮಾರು ಒಂದು ವರ್ಷವೇ ಬೇಕಾಗುತ್ತದೆ.

ಹಬ್ಬ-ಹರಿದಿನಗಳಲ್ಲಿ ಚಿತ್ರಿಸುವ ಚಿತ್ರ ವಿನ್ಯಾಸಗಳು:

ಹಬ್ಬ ಹರಿ-ದಿನಗಳಲ್ಲಿ ದಾವಣಗೆರೆಯ ಆಸು-ಪಾಸಿನ ಹಳ್ಳಿಗರು ತಮ್ಮ ತಮ್ಮ ಮನೆಯ ಗೋಡೆಗಳನ್ನು, ನೆಲವನ್ನುಸಾರಿಸಿ, ಸುಣ್ಣ, ಬಣ್ಣ ಹಚ್ಚಿ ಅಲಂಕರಣಗೊಳಿಸುತ್ತಾರೆ. ಗೋಡೆಯ ಮೇಲೆ ಚುಕ್ಕೆಗಳನ್ನು ಸಾಲಾಗಿ ಇಟ್ಟು ಅಂದಗೊಳಿಸುವ ಪರಿಪಾಠವು ಇದೆ. ಕೆಲವು ಮನೆಗಳಲ್ಲಿ ಸುಣ್ಣದ ಚುಕ್ಕೆಗಳನ್ನು (ಸರಿಸುಮಾರು ಒಂದೇ ಅಳತೆಯ ಸುಣ್ಣದ ಚುಕ್ಕೆಗಳು) ಮನೆಯ ಮುಂದುಗಡೆ. ಬಾಗಿಲಿನ ಎರಡೂ ಬದಿಗಳಿಂದ ಗೋಡೆ ಮುಗಿಯುವವರೆಗೂ ಇಡುವುದೂ ಉಂಟು, ಕೆಲವರು ಗ್ರಾಮೀಣರು ತಮ್ಮ ಕೈ ಬೆರಳಿನಿಂದಲೇ ಈ ಚುಕ್ಕೆಗಳನ್ನು ಇರಿಸಿದರೆ, ಮತ್ತೆ ಕೆಲವರು ಸಣ್ಣ ಅರಿವೆ ತುಂಡಿನಿಂದ ಈ ರೀತಿಯ ಚುಕ್ಕೆಗಳನ್ನು ಇಡುತ್ತಾರೆ. ಮನೆಯಲ್ಲಿ ಕಿಟಕಿಗಳನ್ನು ಎಲೆ, ಬಳ್ಳಿಗಳ ವಿನ್ಯಾಸಗಳಿಂದ ಅಲಂಕರಿಸುವುದುಂಟು.

ದೀಪಾವಳಿ, ನಾಗರಪಂಚಮಿ, ಮದುವೆ, ಊರ ಜಾತ್ರೆಯಂತಹ ವಿಶೇಷ ಸಂದರ್ಭಗಳಲ್ಲಿ ಗ್ರಾಮೀಣರ ಮನೆಯ ನೆಲಗೋಡೆಗಳ ಹೊರಗಡೆಯಲ್ಲೂ ಅಲಂಕೃತಗೊಂಡಿವೆ. ಒಳಬದಿಯಲ್ಲಿಯೂ ಅಲಂಕೃತಗೊಂಡಿರುತ್ತವೆ. ಒಳ ಬದಿಯ "ಅಲಂಕರಣವೂ ವೈವಿಧ್ಯತೆ ಮತ್ತು ಕಲಾತ್ಮಕತೆಗಳ ಸಂಗಮವಾಗಿರುತ್ತದೆ. ಮನೆಯ ಜಂತಿ/ತೊಲೆಗಳ ಮೇಲೆ ಹಸ್ತ ಚಿತ್ರ ಮೂಡಿಸುವುದು, ಗೃಹ ಪ್ರವೇಶದ ಸಂದರ್ಭದಲ್ಲಿ ಗೋಡೆಯ ಮೇಲೆ ಹಸ್ತ ಮುದ್ರೆ ಮೂಡಿಸಿ ಬಾಗಿಲಿನ ಮೇಲೆ ಶುಭ-ಲಾಭ ಎಂದು, ಗೋಡೆಯ ಮೇಲೆ ಅಸ್ತಿಕ ಎಂದು ಬಗೆಯುವುದು, ಮಾಡುಗಳನ್ನು ಅಲಂಕರಣಗೊಳಿಸುವದು, ಬಣ್ಣ ಬಣ್ಣದ ಪಟ್ಟಿಗಳನ್ನು ಎಳೆಯುವದು (ಗೋಡೆಯ ಮೇಲ್ಭಾಗದಲ್ಲಿ ಬಾಗಿಲಿನ, ಜಂತಿ/ತೊಲೆಗಳ ಮೇಲೆ ಇತ್ಯಾದಿ) ಹೀಗೆ ಬಗೆ ಬಗೆಯ ರೀತಿಯಲ್ಲಿ ಅಂದಗೊಳಿಸುತ್ತಾರೆ.

ರಂಗೋಲಿ ಹಾಕುವುದು: ರಂಗೋಲಿ ಕಲೆ ನಮ್ಮ ಗರತಿಗರ ಕಲಾ ಪ್ರತಿಭೆಗೆ ಸಾಕ್ಷಿಯಾಗಿದ್ದು ಸೂರ್ಯೋದಯಕ್ಕೆ ಮೊದಲು ಸಗಣಿನೀರು ಹಾಕುತ್ತಾ ಅದರ ಮೇಲೆ ರಂಗೋಲಿ ಹಾಕುವವರು ಇಲ್ಲಿನ ಜನಪದ ಬದುಕಿನಲ್ಲಿ ಹಾಸು ಹೊಕ್ಕಾಗಿ ಬೆಳೆದು ಬಂದಿದೆ. ರಂಗೋಲಿ ಕಲೆಯಲ್ಲಿ ಹೆಚ್ಚಾಗಿ ಕಾಣಿಸುವದು ಜನಪದರ ಧಾರ್ಮಿಕ ನಂಬಿಕೆ. 'ರಂಗೋಲಿ', ಮಂಗಳಕರ ಎಂದು ಭಾವಿಸಿಕೊಳ್ಳುವ ಇಲ್ಲಿನ ಜನರನೇಕರು 'ರಂಗೋಲಿ ಹಾಕಿದರೆ ಶಾಂತಿ-ಸೌಹಾರ್ದತೆಗಳು ಮನೆಯಲ್ಲಿ ನೆಲೆಸುತ್ತವೆ' ಎಂಬ ಭಾವನೆಯಿಂದ ರಂಗೋಲಿಯನ್ನು ತಪ್ಪದೇ ಸೂರ್ಯೋದಯಕ್ಕೆ ಸರಿಯಾಗಿ ಹಾಕಿಡುವವರೂ ಉಂಟು. 'ರಂಗೋಲಿ ಇದ್ದರೆ ಮನೆಯಲ್ಲಿ

ದೇವತೆಗಳು ವಾಸಿಸುತ್ತಾರೆ' ಎಂಬುದು ಇಲ್ಲಿನ ಅಸ್ತಿಕ ಜನರ ಭಾವನೆಯಾಗಿದೆ. ಹೀಗಾಗಿ ಇಲ್ಲಿನ ವೀರಶೈವ ಸಮಾಜದವರು ಬ್ರಾಹ್ಮಣರು, ಲಂಬಾಣಿಗರು ಈ ಜನಾಂಗದವರೆಲ್ಲ ರಂಗೋಲಿ ತಪ್ಪದೇ ಹಾಕುತ್ತಾರೆ.

ಬ್ರಾಹ್ಮಣರ ಮನೆಗಳಲ್ಲಿ ನೆಂಟರು ಬಂದಾಗ ಸಾಮಾನ್ಯವಾಗಿರುವ ಆಚರಣೆಯೆಂದರೆ ಊಟದ ತಟ್ಟೆಯ ಸುತ್ತ ಎಲೆಯ ಸುತ್ತ ರಂಗೋಲಿ ಹಾಕುವದು. ಅಕ್ಕಸಾಲಿಗರಲ್ಲೂ ಈ ಸಂಪ್ರದಾಯವಿದೆ. ಊಟದ ತಟ್ಟಿಯ ಸುತ್ತ, ಎಲೆಯ ಸುತ್ತ, ರಂಗೋಲಿ ಹಾಕಿದರೆ ಊಟ ಜೀರ್ಣವಾಗುತ್ತದೆ, ಊಟ ಮಾಡುವವರ ಮನಸ್ಸು ಸಂತಸಗೊಳ್ಳುತ್ತದೆ. ನೆಲದಲ್ಲಿ ಪಾವಿತ್ರ್ಯತೆ ನೆಲೆಸುತ್ತದೆ ಎಂಬ ಇತ್ಯಾದಿ ನಂಬಿಕೆಗಳಿವೆ.

'ಲಂಬಾಣಿಯ ಜನರು ದೇವತಾ ಕಾರ್ಯಗಳಲ್ಲಿ ಆಯಾ ದೇವತೆಗಳಿಗೆ ಅನುಗುಣವಾಗಿ ಅವರ ಹೆಸರಿನಿಂದ ರಂಗೋಲಿ ಹಾಕುತ್ತಾರೆ. ಪೂರ್ವ-ಪಶ್ಚಿಮವಾಗಿ ಕುಳಿತುಕೊಂಡು ರಂಗೋಲಿ ಹಾಕಬೇಕೆಂಬ ನಿಯಮವಿದೆ. ಲಂಬಾಣಿ ಜನರು ಪೂಜಾಸ್ಥಾನದಲ್ಲಿ ಮಾತ್ರ ರಂಗೋಲಿ ಹಾಕುತ್ತಾರೆ'[೫]. ಶ್ರೀ ದುರ್ಗಾ ಮಾತೆಯ ಮುಂದೆ ವರ್ತುಲಾಕಾರವಾಗಿಯೂ ಭವಾನಿಯ ಮುಂದೆ ಚೌಕಾಕಾರವಾಗಿಯೂ ಸತ್ಯೆಯ ಮುಂದೆ ತ್ರಿಕೋನಾಕಾರವಾಗಿ ರಂಗೋಲಿ ಹಾಕುತ್ತಾರೆ. 'ರಂಗೋಲಿ ಹಾಕುವಾಗ ರೇಖೆಗಳು ಪರಸ್ಪರ ಸಮನಾಗಿ ಬರುವಂತೆ ಅಳತೆ ಗೋಲು ಹಿಡಿದು ರಂಗೋಲಿ ಹಾಕುತ್ತಾರೆ. ಪ್ರತಿ ಎರಡು ರೇಖೆಗಳು ಸಂಧಿಸುವಲ್ಲಿ ಲಿಂಬೆ ಹಣ್ಣು, ಅಡಿಕೆ, ಕಾಯಿ, ಹೂವುಗಳನ್ನಿಟ್ಟು ಪೂಜಿಸುವದು ಇವರ ವಾಡಿಕೆ. ಪುರುಷರೇ ರಂಗೋಲಿ ಹಾಕುವದು ಇಲ್ಲಿನ ಲಂಬಾಣಿ ಜನಾಂಗದ ವೈಶಿಷ್ಟ್ಯ'[೬].

ಲಂಬಾಣಿಗರಲ್ಲಿ ಮದುವೆಯ ಸಂದರ್ಭದಲ್ಲಿ ವಧು-ವರರ ಬೆನ್ನಮೇಲೆ ದುಷ್ಟ ಶಕ್ತಿಗಳು ಅವರನ್ನು ಮುಟ್ಟಬಾರದೆಂಬ ನಂಬಿಕೆಗೋಸ್ಕರ ಈ ರೀತಿ ಮಾಡಲಾಗುತ್ತದೆ. ಇದಕ್ಕೆ 'ಸಾಂಕ್ಯಾ ಪೊರೇರೊ' ಎಂದು ಅವರ ಆಡುಭಾಷೆಯಲ್ಲೂ ಕರೆದುಕೊಳ್ಳುತ್ತಾರೆ.

ಬ್ರಾಹ್ಮಣ ಸಮುದಾಯದವರು ಮದುವೆ, ಮುಂಜಿ, (ಉಪನಯನ) ಗೃಹ ಪ್ರವೇಶ, ಇನ್ನಿತರ ಹೋಮ-ಹವನಾದಿಗಳನ್ನು ನೆರವೇರಿಸುವ ಸಂದರ್ಭದಲ್ಲಿ ಬೇರೆ ಬೇರೆ ವರ್ಣಗಳ, ಬೇರೆ ಬೇರೆ ಆಕಾರಗಳ (ವರ್ತುಲ, ಚೌಕ, ತ್ರಿಕೋನ, ಇತ್ಯಾದಿ ಆಕಾರಗಳು) ರಂಗೋಲಿಗಳನ್ನು ಧಾರ್ಮಿಕ ಆಚರಣೆಯ ಒಂದು ಭಾಗವಾಗಿ ಹಾಕುತ್ತಾರೆ. ವೀರಶೈವ ಸಮುದಾಯದವರೂ ಗೃಹ ಪ್ರವೇಶ ಮೊದಲಾದ ವಿಶೇಷ ಸಂದರ್ಭಗಳಲ್ಲಿ ರಂಗೋಲಿ ಹಾಕುವುದುಂಟು. ಚೌಕ, ವರ್ತುಲ, ಇನ್ನಿತರ ಜ್ಯಾಮಿತಿಕ ಆಕೃತಿಯ ವಿನ್ಯಾಸಗಳನ್ನು 'ಸ್ವಸ್ತಿಕ್', 'ಓಂ', 'ಶ್ರೀ' ಮುಂತಾದ ಚಿಹ್ನೆಗಳನ್ನು

---

೫. ಡಾ.ಎಸ್.ಸಿ. ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ಪು.ಸಂ. ೨೪೧.

೬. ಡಿ.ಕೆ ಖಂಡೋಬಾ, ಕರ್ನಾಟಕದ ಲಂಬಾಣಿ ಜನಾಂಗ, ಒಂದು ಸಾಂಸ್ಕೃತಿಕ ಅಧ್ಯಯನ ಪು.ಸಂ. ೨೮೩.

ಬರೆಯುವುದುಂಟು. ಅಲ್ಲದೇ ಅಲಂಕಾರಕ್ಕಾಗಿ ಹೂ, ಎಲೆ, ಬಳ್ಳಿಗಳನ್ನು ಹಲವಾರು ಬಗೆಯ ಸುಳುವುಗಳನ್ನು ಬರೆಯುವುದಿದೆ.

ಒಟ್ಟಿನಲ್ಲಿ ರಂಗೋಲಿ ಹಾಕವುವದು ಇಲ್ಲಿನ ಜನಪದರ ಬದುಕಿನಲ್ಲಿ ಒಂದು ಅವಿಭಾಜ್ಯ ಆಚರಣೆಯಾಗಿದೆ. ನಗರದ ಜನ ಸಿದ್ಧ ಬಣ್ಣಗಳನ್ನು ತಂದು ಅಲಂಕಾರಕ್ಕಾಗಿ ಮನೆಯ ಎದುರುಗಡೆ ರಂಗೋಲಿ ಹಾಕಿಸಿದರೆ, ಗ್ರಾಮೀಣ ಭಾಗದ ಅನೇಕ ಮನೆಗಳಲ್ಲಿ ಇಂದಿಗೂ ಹಿಟ್ಟನ್ನೇ, ರಂಗೋಲಿ ಹುಡಿಯನ್ನೇ ರಂಗೋಲಿ ಹಾಕಲಿಕ್ಕೆ ಬಳಸುತ್ತಿದ್ದಾರೆ. ಇಂದಿನ ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಕೆಲವು ಮನೆಗಳಲ್ಲಿ ಬಣ್ಣಗಳ ರಂಗೋಲಿ ಹಾಕಲಾಗಿರುತ್ತದಷ್ಟೆ.

ದಾವಣಗೆರೆ ಜಿಲ್ಲೆಯಲ್ಲಿ ಜನಪದ ಚಿತ್ರ ಕಲಾವಿದರೂ ಇದ್ದಾರೆ. ಯಾವ ಪ್ರಶಸ್ತಿ, ಪ್ರಚಾರ ಇನ್ನಿತರ ಅಮಿಷಗಳಿಗೆ ಒಳಗಾಗದೆ ತಾವು ವಾಸಿಸುತ್ತಿರುವ ಪರಿಸರದ ಮಧ್ಯದಲ್ಲಿಯೇ ತಮ್ಮ ಪಾಡಿಗೆ ತಾವಿದ್ದು ಕಲಾಕೃತಿಗಳನ್ನು ರಚಿಸಿದವರೂ ಇದ್ದಾರೆ. ಯಾವ ಮಹಾವಿದ್ಯಾಲಯದ, ವಿಶ್ವವಿದ್ಯಾಲಯಗಳ ಮೆಟ್ಟಿಲು ಹತ್ತದೆ. ತಮ್ಮ ಸುತ್ತ-ಮುತ್ತಲಿನ ವಾತವರಣ, ಜೀವ ಸಂಕುಲಗಳು ಇವುಗಳ ಮೂಲಕವೇ ಬದುಕಿನಲ್ಲಿ ಶಿಕ್ಷಣ ಪಡೆದುಕೊಳ್ಳುತ್ತಾ, ತಮ್ಮಲ್ಲಿ ಹುದುಗಿದ ಕಲಾತ್ಮಕತೆಗೆ ತಾವೇ ತಮ್ಮರಿವಿನ ಮೂಲಕವೇ ಒಂದು ರೂಪ ಕೊಟ್ಟು, ಅಭಿವ್ಯಕ್ತಿಸಿ ಕಲಾವಿದರಾಗಿ ಹೊರಹೊಮ್ಮಿದ ಸಾಹಸಿಗರೂ ಉಂಟು. ಅಂತೆಯೇ ತಮ್ಮ ಪಾಡಿಗೆ ತಾವು ಎಲೆಮರೆಯ ಕಾಯಿಯಂತೆ ಇದ್ದು ಚಿತ್ರಕಲಾಕೈಂಕರ್ಯವನ್ನು ಕೈಗೊಂಡು 'ಕಾಯಕ ಜೀವಿ'ಯಾಗಿ ಬಾಳಿದವರಲ್ಲಿ ಹಲವರಿದ್ದಾರೆ. ಅವರುಗಳಲ್ಲಿ ಕಿನ್ನಾಳ ಕಲೆಯ ಸೋಮಣ್ಣ, ಶಂಕರಪ್ಪ ಕಮ್ಮಾರ, ಪತಿಯಪ್ಪ ನಂತವರು ಈ ಜಾನಪದ ಚಿತ್ರಕಲೆಯಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸಿ ಖ್ಯಾತರಾಗಿದ್ದಾರೆ.

ದೊಡ್ಡಾಟ: ಜನಪದ ರಂಗ ಭೂಮಿಯೆಂದು ಕರೆಯಲ್ಪಡುವ ದೊಡ್ಡಾಟ, ಸೂತ್ರ ಬೊಂಬೆಯಾಟ, ತೊಗಲು ಬೊಂಬೆಯಾಟ ಮುಂತಾದವುಗಳು ಸಹ ಈ ಜಿಲ್ಲೆಯಲ್ಲಿ ನಡೆಯುತ್ತವೆ. ಉತ್ತರ ಕರ್ನಾಟಕದಲ್ಲಿ ಬಯಲಾಟ, ದೊಡ್ಡಾಟವೆಂದು ಕರೆಯಲ್ಪಡುವ ಇದರ ಕಥಾ ವಸ್ತುವು ಪೌರಾಣಿಕವಾದುದ್ದಾಗಿದೆ. ಈ ದೊಡ್ಡಾಟದಲ್ಲಿ ಮುಖ್ಯವಾಗಿ ಕಾಳಗವನ್ನು ಪ್ರಮುಖವಾದ ವಿಷಯವಾಗಿದ್ದು ಭರ್ಜರಿಯಾದ ವೇಷ ಭೂಷಣಗಳು, ಭವ್ಯವಾದ ರಂಗಸಜ್ಜಿಕೆಯಲ್ಲಿ ಈ ಕಥೆಗಳನ್ನು ಆಡುತ್ತಾರೆ. ಪ್ರದರ್ಶನವಿರುವ, ದಿನ ಪಾತ್ರವರ್ಗದವರೆಲ್ಲರೂ ಬಣ್ಣದ ಚಾಕಿಯಲ್ಲಿ ಕೂಡಿಕೊಂಡು ದೇವರ ನಾಮವನ್ನು ಸ್ತುತಿಸಿ ಅಲ್ಲಿರುವ ವಾದ್ಯಗಳ ಪೂಜೆಯನ್ನು ಮಾಡುತ್ತಾರೆ. ಅದಾದ ನಂತರ ಬಣ್ಣವನ್ನು ಹಚ್ಚಿಕೊಳ್ಳುತ್ತಾರೆ. ಅದರ ನಂತರ ಗಣೇಶನ ಪೂಜೆಯೊಂದಿಗೆ ದೊಡ್ಡಾಟ ಪ್ರಾರಂಭವಾಗುತ್ತದೆ.

ಈ ದೊಡ್ಡಾಟಗಳು ಪೌರಾಣಿಕ ಕಥಾವಸ್ತುವನ್ನು ಹೊಂದಿದ್ದು ಗಿರಿಜಾ ಕಲ್ಯಾಣ. ಪಾಂಡು ವಿಜಯ. ದ್ರೋಣ ಪರ್ವ, ಕಾಳಾಸುರನ ವಧೆ, ಕನಕಾಂಗಿ ಕಲ್ಯಾಣ ಮುಂತಾದ ಕಥೆಗಳೆಂದು ಈ ಆಟದಲ್ಲಿ ೧೦ ರಿಂದ ೧೫ ಕಲಾವಿದರು ಪಾತ್ರವನ್ನು ಮಾಡುತ್ತಾರೆ. ಹಿನ್ನಲೆಯಾಗಿ ಇಬ್ಬರು ಹಾಡುಗಾರರಿರುತ್ತಾರೆ. ಕಲಾವಿದರು ಪಾತ್ರಗಳಿಗೆ ತಕ್ಕಂತೆ ರೂಪ, ಲಕ್ಷಣ, ಘನತೆ-ಗೌರವಗಳಿಗೆ ಹೊಂದಾಣಿಕೆಯಾಗುವಂತೆ ವೇಷಭೂಷಣವನ್ನು ಮಾಡಿಕೊಳ್ಳುತ್ತಾರೆ. ರಾಜ ಮಹಾರಾಜರು, ರಾಕ್ಷಸರು ಧರಿಸುವ ಕಿರೀಟಗಳು, ಆಭರಣಗಳು ಬೇರೆ ಬೇರೆಯಾಗಿರುತ್ತದೆ. ಕಿರೀಟವನ್ನು, ಭುಜ ಕಿರೀಟವನ್ನು ಹಗುರವಾದ ಕಟ್ಟಿಕೆಯಿಂದ ತಯಾರಿಸಿ, ಅವುಗಳಿಗೆ ಬಂಗಾರದ ಝುಗಮಗಿಸುವ ಕಾಗದವನ್ನು ಹಚ್ಚಿ, ಕನ್ನಡಿಯ ಚೂರುಗಳನ್ನು ಹಚ್ಚಿರುತ್ತಾರೆ. ರಾಕ್ಷಸ ಪಾತ್ರದವರ ಕಿರೀಟಗಳು ದೊಡ್ಡದಾಗಿರುತ್ತದೆ. ಕೈಯಲ್ಲಿ ಕೈಕಟ್ಟು, ಕೊರಳಲ್ಲಿ ವಿವಿಧ ಬಗೆಯ ಬಣ್ಣದ ಸರಗಳನ್ನು ಕೈಯಲ್ಲಿ ಖಡ್ಗ, ಬಿಲ್ಲು, ಗಧೆ ಕಾಲಲ್ಲಿ ಗೆಜ್ಜೆ ಮುಂತಾದವುಗಳು ವೇಷಭೂಷಣಗಳಾಗಿದ್ದು ನೋಡುಗನ ಮನಸ್ಸಿನಲ್ಲಿ ಇವುಗಳು ಅಚ್ಚಳಿಯದೇ ಉಳಿಯುತ್ತದೆ.

ಇವರು ಮುಖವರ್ಣಿಕೆ ವಿಶಿಷ್ಟತೆಯಿಂದ ಕೂಡಿದ್ದು ಪಾತ್ರಕ್ಕೆ ತಕ್ಕಂತೆ ಕಲಾವಿದರು ತಮ್ಮ ಪಾತ್ರಕ್ಕೆ ತಕ್ಕಂತೆ ತಾವೇ ಮುಖಕ್ಕೆ ಬಣ್ಣ ಹಚ್ಚಿಕೊಂಡು, ಆಭರಣ, ಕಿರೀಟಗಳನ್ನು ಹಾಕಿಕೊಂಡು ದೊಡ್ಡಾಟವನ್ನು ಆಡುತ್ತಾರೆ. ಮೊದಲು ಮುಖಕ್ಕೆ ವ್ಯಾಸಲಿನ್ ನನ್ನು ಹಚ್ಚಿಕ್ಕೊಂಡು ಹುಡಿ ಬಣ್ಣವನ್ನು ತಮ್ಮ ಪಾತ್ರಕ್ಕೆ ಅನುಗುಣವಾಗಿ, ಶಿವ, ಕೃಷ್ಣ ಪಾತ್ರದಾರಿಗಳು ಹಸಿರು ಮತ್ತು ನೀಲಿ ಬಣ್ಣವನ್ನು ಹಾಗೂ ಆನಂಜಯ ಪಾತ್ರದಾರಿಗಳು ಹಸಿರು-ತಿಳಿನೀಲಿ ಮುಂತಾದವುಗಳನ್ನು ಉಪಯೋಗಿಸುತ್ತಾರೆ. ಸಾಮಾನ್ಯ ಪಾತ್ರವರ್ಗದವರು ಜಿಂಕ ವೈಟ, ಕೆಂಪು, ಹಳದಿ ಮುಂತಾದ ಬಣ್ಣಗಳನ್ನು ಮಿಶ್ರಣವನ್ನು ವ್ಯಾಸಲಿನ್ ಅಥವಾ ಕೊಬ್ಬರಿ ಎಣ್ಣೆಯಲ್ಲಿ ಮಿಶ್ರಣ ಮಾಡಿ ಮುಖವರ್ಣಿಕೆ ಮಾಡಿಕೊಳ್ಳತ್ತಾರೆ.

ಇಂಥಹ ಕಲಾವಿದರೂ ಸಹ ಈ ಜಿಲ್ಲೆಯಲ್ಲಿಯ ಹರಪನಹಳ್ಳಿಯ ಕೊಟ್ಟೂರು ರೋಡಿನಲ್ಲಿರುವ ಮೇಗಳ ಪೇಟೆಯ ಸಾವಳಗಿ ಶೇಖರಪ್ಪನವರು ದೊಡ್ಡಾಟದ ಹಾದಿಯಲ್ಲಿ ಹಲವಾರು ಸಾಧನೆಗಳನ್ನು ಮಾಡಿ ಹಲವಾರು ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.

ಸೂತ್ರದ ಬೊಂಬೆಯಾಟ: 'ಸೂತ್ರದ ಬೊಂಬೆ ಎಂಬ ಭಾವ ಜಗತ್ಪಾಲಕನಾದ ಪರಮಾತ್ಮನೊಂದಿಗೆ ಸಮ್ಮಿಳಿತವಾಗಿದೆ. ಈ ಜಗತ್ತಿನ ಸೂತ್ರದಾರನೇ ಅವನು. ಅವನು ಸೂತ್ರಗಳಿಂದ ಈ ಲೋಕವನ್ನು ತನ್ನ ಇಷ್ಟಾನು ಸಾರವಾಗಿ ಆಡಿಸುತ್ತಾನೆ'[೭]. ಈ ಸೂತ್ರದ ಬೊಮಬೆಯಾಟವೂ ಸಹ ಪೌರಾಣಿಕ ಕಥಾ ವಸ್ತುವಿಗೆ ಮೂಲವಾಗಿದ್ದು ಇದರಲ್ಲಿ ಕೃಷ್ಣಾರ್ಜುನ ಕಾಳಗ, ಕರ್ಣಪರ್ವ, ವೀರ ಅಭಿಮನ್ಯು, ಸೀತಾಪಹರಣ, ಧರ್ಮರಾಯರ

---

೭ ಡಾ. ಹಿ.ಚಿ.ಬೋರಲಿಂಗಯ್ಯ, ಕರ್ನಾಟಕ ಜನಪದ ಕಲೆಗಳ ಕೋಶ, ಪು.ಸಂ. ೨೭೧.

ಅಜ್ಞಾತವಾಸ ಪಾಂಡವರ ವನವಾದ ಮುಂತಾದ ಕಥೆಗಳನ್ನು ಆಧರಿಸಿ ಸೂತ್ರಬೊಂಬೆಯಾಟವನ್ನು ಆಡಿಸುತ್ತಾರೆ. ರಂಗ ಸ್ಥಳವನ್ನು ಸ್ವಲ್ಪ ಎತ್ತರದ ಸ್ಥಳಗಳಲ್ಲಿ ನಿರ್ಮಿಸುತ್ತಾರೆ. ಅದರ ವಿಸ್ತೀರ್ಣ ಒಂಬತ್ತು ಮೊಳ ಉದ್ದವಾಗಿದ್ದು, ಹಾಗೂ ಏಳು ಮೊಳದಷ್ಟಿರುತ್ತದೆ. ರಂಗ ಮಂದಿರದಲ್ಲಿ ಸೂತ್ರದಾರ ವಾದ್ಯವೃಂದದವರು, ಹಿಮ್ಮೇಳದವರು ಹಾಗೂ ಸಹಾಯಕರು ನಿಲ್ಲಲು ಸಾಕಷ್ಟು ಸ್ಥಳಾವಕಾಶವನ್ನು ಮಾಡಿಕೊಟ್ಟಿರುತ್ತಾರೆ. ಮೇಲ್ಗಡೆಗೆ ಎರೆಡುವರೆ ಅಡಾಯಷ್ಟು ಉದ್ದದಾದ ತೆರೆಯನ್ನು ಕಟ್ಟುತ್ತಾರೆ. ನಂತರ ಗೊಂಬೆಗಳನ್ನೆಲ್ಲ ಕ್ರಮಭದ್ದವಾಗಿ ಜೋಡಿಸಿ ಪ್ರಾರ್ಥನೆಯೊಂದಿಗೆ ಆಟವು ಪ್ರಾರಂಭವಾಗುತ್ತದೆ.

ಸೂತ್ರದ ಗೊಂಬೆಗಳು ಹಗುರವಾದ ಕಟ್ಟಿಕೆಗಳಿಂದ ನಿರ್ಮಾಣ ಮಾಡುತ್ತಾರೆ. ಗೊಂಬೆಗಳಲ್ಲಿ ಕೈ–ಕಾಲುಗಳು ಅಲುಗಾಡಲು ಸಹಾಯವಾಗುವಂತೆ ಎರೆಡು ಕಡೆಗೆ ತಂತಿಯಿಂದ ಅದನ್ನು ಕಟ್ಟಿರುತ್ತಾರೆ. ಇದರಿಂದ ಕೈ ಕಾಲುಗಳು ಅಲುಗಾಡುವಂತೆ ಭಾಸವಾಗುತ್ತದೆ. ಅದರ ಮೇಲೆ ಪಾತ್ರಕ್ಕೆ ತಕ್ಕಂತೆ ಬಟ್ಟೆಗಳನ್ನು–ಆಭರಣಗಳನ್ನು ಹಾಕುತ್ತಾರೆ. ಇವರು ಸೂತ್ರದ ಬೊಂಬೆಗಳಿಗೆ ಎದ್ದುಕಾಣುವಂತೆ ಹಳದಿ–ಕೆಂಪು, ಕೇಸರಿ ಮುಂತಾದ ಬಣ್ಣಗಳನ್ನು ಉಪಯೋಗಿಸುತ್ತಾರೆ. ಅದರ ಮೇಲೆ ಕಪ್ಪು ಬಣ್ಣದಿಂದ ಕಣ್ಣು, ಮೀಸೆ, ಕೂದಲು ಮುಂತಾದ ಭಾಗಗಳನ್ನು ಚಿತ್ರಿಸುತ್ತಾರೆ. ಕಿರೀಟಕ್ಕೆ ಬಂಗಾರದ ವರ್ಣವನ್ನು ಉಪಯೋಗಿಸುತ್ತಾರೆ. ಕೈಗೆ ಕೈಪಟ್ಟಿಯನ್ನೂ ಸಹ ಬಂಗಾರದ ವರ್ಣಕಾರಿಕೆಯಿಂದ ಅಲಂಕೃತಗೊಳಿಸುತ್ತಾರೆ. ನೋಡಲು ಇವು ತುಂಬಾ ಕಲಾತ್ಮಕವಾಗಿ ಕಾಣುವುದಲ್ಲದೇ ನೋಡುಗರನ್ನು ಗಮನ ಸೆಳೆಯುತ್ತವೆ. ದಾವಣಗೆರೆ ಜಿಲ್ಲೆಯಲ್ಲಿರುವ ಹಲವಾಗಿಲು ಗ್ರಾಮದಲ್ಲಿರುವ ರಾಜ್ಯ ಪ್ರಶಸ್ತಿ ವಿಜೇತ ಬಿ. ಆರ್. ದೇವೇಂದ್ರಪ್ಪ ಹಾಗೂ ಸಂಗಡಿಗರು ಶ್ರೀ ಶಕ್ತಿ ಯಕ್ಷಗಾನ ಸೂತ್ರದ ಗೊಂಬೆ ಮಂಡಳಿ ಎಂಬ ಸಂಘವನ್ನು ಮಾಡಿಕೊಂಡು ಈ ಸೂತ್ರದ ಬೊಂಬೆಯಟದ ಉಳಿವಿಗಾಗಿ ಶ್ರಮವಹಿಸಿ ದುಡಿಯುತ್ತಿದ್ದಾರೆ.

ತೊಗಲು ಬೊಂಬೆಯಾಟ: ಮಲೆನಾಡಿನ ಪ್ರದೇಶಗಳನ್ನು ಹಾಗೂ ಕರಾವಳಿ ಪ್ರದೇಶಗಳನ್ನು ಬಿಟ್ಟು ರಾಜ್ಯದ ಎಲ್ಲೆಡೆಯೂ ಪ್ರಚಲಿತವಿರುವ ಈ ಕಲೆಯು ತೊಗಲು ಬೊಂಬೆ ಕಲೆ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಕಿಳ್ಳೆಕ್ಯಾತ ಅಥವಾ ಸಿಳ್ಳೆಕ್ಯಾತ, ಕಾಲಿಕ್ಯಾತ ಮುಂತಾದ ಹೆಸರುಗಳಿಂದ ಈ ಗೊಂಬೆಯಾಟವನ್ನು ಆಡಿಸುವವರನ್ನು ಕರೆಯುತ್ತಾರೆ. ಕಿಳ್ಳೆಕ್ಯಾತರ ಬಗೆಗಿನ ಕಥೆಯೊಂದು ಈ ರೀತಿ ಇದೆ. ಕತ್ತಾರೆ ಕಳಾಚಾರಿ ಎಂಬ ಮರಾಠಿ ವ್ಯಕ್ತಿ ವ್ಯವಸಾಯ ಕುಟುಂಬದ ಒಬ್ಬ ಹೆಂಗಸಿನೊಂದೆಗೆ ಗೌಪ್ಯ ಸಂಬಂದವಿಟ್ಟುಕೊಂಡಿದ್ದನಂತೆ, ಈ ಗುಪ್ತ ಸಂಬಂದ ಬಯಲಾದಾಗ ಆ ಹೆಣ್ಣಿನ ಮನೆಯವರು ಅವಳನ್ನು ಮಕ್ಕಳು ಸಮೇತವಾಗಿ ಹೊರಹಾಕಿದರು. ಆಗ ಕಾಳಾಚಾರಿ ತೊಗಲು ಗೊಂಬೆಗಳನ್ನು ಮಾಡಿಕೊಟ್ಟು ಅವರು ಜೀವನ ಮಾಡಲು ಸಹಾಯ ಮಾಡಿದ ಅವರೇ ಇಂದಿನ ಕಿಳ್ಳೆಕ್ಯಾತ ಜನಾಂಗದವರು. ಈ ತೊಗಲು ಬೊಂಬೆಯಾಟದಲ್ಲಿ ಪೌರಾಣಿಕ ವಿಷಯಗಳಿಗೆ ಸಂಬಂದಪಟ್ಟಂತೆ ವಿಷಯಗಳನ್ನಾಧರಿಸಿ ಆಟವಾಡುತ್ತಾರೆ.

ಗೊಂಬೆಯ ರಚನೆ: 'ತೊಗಲು ಗೊಂಬೆಯ ರಚನೆಗೆ ಜಿಂಕೆ ಅಥವಾ ಆಡಿನ ಚರ್ಮವನ್ನು ಉಪಯೋಗಿಸುತ್ತಾರೆ. ಜಿಂಕೆಯ ಚರ್ಮ ನಯ ಮತ್ತು ಸೂಕ್ಷ್ಮತೆಯಿಂದ ಕೂಡಿದ್ದು ಬಹುಪಾಲು ಪಾರದರ್ಶಕವಾಗಿರುತ್ತದೆ. ಅಲ್ಲದೆ ಸದಾಕಾಲ ಯಾವ ಬದಲಾವಣೆಗೂ ಒಳಗಾಗದೆ ಒಂದೇ ರೂಪದಲ್ಲಿ ಉಳಿದುಬರುವ ಶಕ್ತಿಯುಳ್ಳದ್ದು. ಆದರೆ ಆಡಿನ ಚರ್ಮ ಕೆಲವೊಂದು ಬಾರಿ ಚಳಿ ಮಳೆಗೆ ಸುಕ್ಕುಗಟ್ಟುತ್ತದೆ.

ಈಚೆಗೆ ಜಿಂಕೆಯ ಚರ್ಮವು ದೊರೆಯುವುದು ದುರ್ಲಭವಾಗಿರುವುದರಿಂದ ಆಡಿನ ಚರ್ಮದ ಬಳಕೆ ಹೆಚ್ಚಾಗಿದೆ. ಕೆಲವೊಂದು ಬಾರಿ ದೇವತಾ ಪಾತ್ರಗಳಿಗೆ ಮೀಸಲಾದ ರಾಮಾಯಣ, ಮಹಾಭಾರತ ಪ್ರಸಂಗದ ಗೊಂಬೆಗಳನ್ನು ಜಿಂಕೆ ಚರ್ಮದಿಂದಲೇ ಮಾಡಬೇಕೆಂಬ ನಿಯಮವಿದೆ. ಆಂಧ್ರ ಹಾಗೂ ಗಡಿಭಾಗಗಳಲ್ಲಿ ಗೊಂಬೆಯ ರಚನೆಗೆ ಎಮ್ಮೆಯ ಚರ್ಮವನ್ನೂ ಬಳಸುವುದು ಉಂಟು. ಆ ಭಾಗದ ಆಳೆತ್ತರದ ಗೊಂಬೆಗಳ ರಚನೆಗೆ ಹೆಚ್ಚಾಗಿ ಎಮ್ಮೆಯ ಚರ್ಮವೇ ಬೇಕಾಗುತ್ತದೆ. ಹೀಗೆ ಚರ್ಮವನ್ನು ಹದಗೊಳಿಸುವುದರ ಮೂಲಕ ಅದನ್ನು ಪಾರದರ್ಶಕ ರೂಪಕ್ಕೆ ತರುತ್ತಾರೆ. ಅನಂತರ ಅದರ ಮೇಲೆ ಬೇಕಾದ ಚಿತ್ರಗಳನ್ನು ಅಂದವಾಗಿ ಬರೆದು ಆಭರಣ, ಸೀರೆಯ ಅಂಚು, ರಥದ ಚಕ್ರ, ಕಿರೀಟ ಇತ್ಯಾದಿ ಕುಸುರಿ ಕೆಲಸಗಳನ್ನು ಬಹಳ ಸೂಕ್ಷ್ಮವಾಗಿ ಮಾಡುತ್ತಾರೆ. ಅನಂತರ ಹದವರಿತ ಬಣ್ಣವನ್ನು ಹಾಕುತ್ತಾರೆ. ಹೆಚ್ಚಾಗಿ ದೇವತಾ ಪಾತ್ರದ ಗೊಂಬೆಗಳಿಗೆ ನೀಲ, ನಸುಕೆಂಪು, ಹಳದಿ ಬಣ್ಣವನ್ನೂ ಘೋರ ಪಾತ್ರಗಳಿಗೆ ಸಿಂಧೂರ, ಕಡುಕೆಂಪು, ಕಪ್ಪು, ಹಳದಿ ಬಣ್ಣಗಳನ್ನೂ ಉಪಯೋಗಿಸುತ್ತಾರೆ. ಬೇರೆ ಬೇರೆ ರೀತಿಯ ಗಿಡಮೂಲಿಕೆಗಳಿಂದ ಸ್ವತ: ಅವರೇ ಬಣ್ಣವನ್ನು ತಯಾರಿಸಿಕೊಳ್ಳುತ್ತಾರೆ. ಹೀಗಾಗಿ ಬಹುಕಾಲದವರೆಗೂ ಬಣ್ಣ ಮಸುಕಾಗದಂತೆ ಈ ಗೊಂಬೆಗಳು ಉಳಿಯುತ್ತವೆ. ಈಗೀಗ ಇಂಥ ಬಣ್ಣಗಳ ಸ್ವತ: ತಯಾರಿ ನಿಂತು ಹೋಗಿದ್ದು ಆಧುನಿಕ ಬಣ್ಣಗಳನ್ನೇ ಬಳಸುತ್ತಾರೆ'[೮].

ತೊಗಲು ಬೊಂಬೆಗಳು ನೇರವಾಗಿ ನಿಂತುಕೊಳ್ಳಲು ಒಳಗಿನಿಂದ ಮಧ್ಯದಲ್ಲಿ ಕಡ್ಡಿಯನ್ನೂ ಸೇರಿಸಿ ಹೊಲಿದಿರುತ್ತಾರೆ. ಈ ಕಡ್ಡಿಗಳೇ ಗೊಂಬೆಯಾಟಕ್ಕೆ ಮಹತ್ವದಾಗಿದ್ದು, ಇದರ ಸಹಾಯದಿಂದಲೇ ತೊಗಲು ಬೊಂಬೆಯ ಆಟವನ್ನು ಆಡಿಸಿ ತೋರಿಸುತ್ತಾರೆ. ರಂಗಮಂಟಪವು ಆರು ಅಡಿ ಅಗಲ ೮ ಅಡಿ ಆಯತಾಕಾರದಿಂದ ಕೂಡಿದ್ದು, ರಂಗದ ಹಿಂಭಾಗದಲ್ಲಿ ಕರಿಯ ಬಣ್ಣದ ಬಟ್ಟೆಯಿಂದ ಹಾಗೂ ಮುಂಭಾಗದಲ್ಲಿ ಬಿಳಿಯ ಬಣ್ಣದ ಬಟ್ಟೆಯನ್ನು ಕಟ್ಟಿ ಗೊಂಬೆಗಳನ್ನು ಅದರ ಹಿಂಭಾಗದಿಂದಲೇ ತೋರಿಸುತ್ತಾರೆ. ಹಿಂಭಾಗದಲ್ಲಿ ದೀಪವನ್ನು ಹಚ್ಚಿದ್ದು ಬೆಳಕು ತೊಗಲುಗೊಂಬೆಗಳ ಮೇಲೆ ಬಿಟ್ಟು ಆ ಗೊಂಬೆಗಳ ಪ್ರತಿಫಲನ ಪಂಚೆಯ ಮೇಲೆ ಬಿದ್ದು ಅಮೋಘವಾಗಿ ಕಾಣುತ್ತದೆ. ಇವರ ತೊಗಲು ಬೊಂಬೆಗಳ ಮೇಲೆ ಸೂಕ್ಷ್ಮವಾಗಿ ಚಿತ್ರಿಸಿದಂತಹ ರೇಖೆಗಳಿದ್ದು ಅದರ ಮಧ್ಯದಲ್ಲಿ ಬಣ್ಣಗಳನ್ನು ಸಂಯೋಜಿಸಿ ತಮಗೆ ಬೇಕಾದ ಕಥೆಗಳನ್ನು ಆಧರಿಸಿ ಬೊಂಬೆಯಾಟವನ್ನು ಆಡಿಸುತ್ತಾರೆ.

---

೮. ಡಾ. ಹಿ.ಚಿ. ಬೋರಲಿಂಗಯ್ಯ, ಕರ್ನಾಟಕ ಜನಪದ ಕಲೆಗಳ ಕೋಶ, ಪು.ಸಂ. ೨೭೭

ಕಿನ್ನಾಳ ಕಲೆಯ ಸೋಮಣ್ಣ: ಸೋಮಣ್ಣನವರು ಕರ್ನಾಟಕದ ಜಾನಪದ ಚಿತ್ರಕಲೆಯಾದ ಕಿನ್ನಾಳ ಕಲೆಯಲ್ಲಿ ಹಲವಾರು ಕಲಾಕೃತಿಗಳನ್ನು ನಿರ್ಮಿಸಿದಂತವರಾಗಿದ್ದಾರೆ. ಇವರು ಕಿನ್ನಾಳದಲ್ಲಿ ಜನಿಸಿದರು. ಅಲ್ಲಿ ಕೆಲವು ವರ್ಷಗಳ ಕಾಲ ಇದ್ದು ಅಲ್ಲಿಂದ ಇಲ್ಲಿಯವರೆಗೂ ದಾವಣಗೆರೆಯಲ್ಲಿ ನೆಲೆಸಿದ್ದಾರೆ. ಕಲಾವಿದರು ಎಲ್ಲಿಯವರು ಆಗಿರಬಹುದು. ಅಥವಾ ಜನಿಸಿರಬಹುದು ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ನೆಲೆಸಿದ ಮೇಲೆ ಅವರು ನಮ್ಮವರೇ. ಕಿನ್ನಾಳದ ಈ ಸುಪ್ರಸಿದ್ಧವಾದ ಕಲೆಯನ್ನು ನಮ್ಮವರಿಗೆ ಪರಿಚಯಿಸಿದವರಾಗಿದ್ದಾರೆ. ಬಂಗಾರದ ಹೊಂಬಣ್ಣ ಹೊಂದಿದ ವರ್ಣಗಳಲ್ಲಿ ವಿಜೃಂಭಿಸುವ ಕಿನ್ನಾಳದ ಕಲೆಯ ರಚನೆಯಲ್ಲಿ ಇವರದು ಎತ್ತಿದ ಕೈ ಇವರ ವಂಶಸ್ಥರಲ್ಲಿ ಹಲವಾರು ಪ್ರಶಸ್ತಿಗಳು ಬಂದಿವೆ. ಇವರ ಅಜ್ಜನವರಿಗೆ ೧೯೬೯ರಲ್ಲಿ, ತಂದೆಯವರಿಗೆ ೧೯೮೫ರಲ್ಲಿ ಹಾಗೂ ಸೋಮಣ್ಣನವರಿಗೆ ೧೯೯೨ರಲ್ಲಿ ರಾಜ್ಯ ಪ್ರಶಸ್ತಿಗಳು ಲಭಿಸಿವೆ.

ಶಿಲ್ಪಿ ಶಂಕರಪ್ಪ ಕಮ್ಮಾರ: ಕಮ್ಮಾರಿಕೆಯ ಮನೆತನದಿಂದ ಬಂದವರು, ಬಾಲ್ಯದಿಂದಲೇ ಚಿತ್ರಕಲೆಯಲ್ಲಿ ಆಸಕ್ತರು. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಾದ ನರಗುಂದ ತಾಲೂಕಿನ ರಡ್ಡೇರ್ ನಾಗನೂರಿನಲ್ಲಿ ಪೂರೈಸಿದ ಬಳಿಕ ಪ್ರೌಢ ಶಿಕ್ಷಣವನ್ನು ಧಾರವಾಡದಲ್ಲಿ ಮುಗಿಸಿದರು. ನಂತರ ಚಿತ್ರಕಲಾ ಕಲಿಕೆಗಾಗಿ ಧಾರವಾಡದ ಹಾಲಭಾವಿ ಕಲಾ ಶಾಲೆಗೆ ಸೇರ್ಪಡೆಗೊಂಡರು. ಅಲ್ಲಿ ಡಿ.ವಿ. ಹಾಲಭಾವಿಯವರ ಮಾರ್ಗದರ್ಶನ ದೊರಕಿತು.

ಕಲಾ ಶಿಕ್ಷಣದ ನಂತರ, ಅಂದಿನ ಕಾಲದಲ್ಲಿ ಬ್ರಿಟೀಷ್ ಸರ್ಕಾರದವರು ನಡೆಸುತ್ತಿದ್ದ ಬರ್ಮಾಶೆಲ್ ಕಂಪನಿಯಲ್ಲಿ ಕೆಲವು ವರುಷಗಳ ಕಾಲ 'ಪೇಂಟರ್' ಆಗಿ ಕಾರ್ಯನಿರ್ವಹಿಸಿದರು, ಆದರೆ ಪ್ರಸಂಗವಶಾತ್ ಆ ವೃತ್ತಿಯನ್ನು ತ್ಯಜಿಸಿ, ಹರಿಹರಕ್ಕೆ ಬಂದು ಕಲಾಕಾಯಕ ಕೈಗೊಂಡರು. ಸಾಂಪ್ರದಾಯಿಕ, ಧಾರ್ಮಿಕ, ಸಾಮಾಜಿಕ ಶಿಲ್ಪ, ಚಿತ್ರರಚನೆಗಳಲ್ಲಿ ೪೦ ವರ್ಷಗಳ ಸುದೀರ್ಘ ಅವಧಿಯ ಸೇವೆ ಸಲ್ಲಿಸಿದರು.

ಶಂಕರಪ್ಪ ಕಮ್ಮಾರರು ರಚಿಸಿದ ಚಿತ್ರ ಮತ್ತು ಶಿಲ್ಪಗಳು ಮಂಗಳೂರು, ಕಾರವಾರ, ಮಂತ್ರಾಲಯ, ಶಿವಮೊಗ್ಗ, ಬೆಂಗಳೂರು, ಬೆಳಗಾವಿ ಮೊದಲಾದ ರಾಜ್ಯದ ಪ್ರಮುಖ, ನಗರಗಳಲ್ಲಿ ಅಲ್ಲಲ್ಲಿ ಖಾಸಗಿ ಸಂಗ್ರಹದಲ್ಲಿ ಸೇರಿವೆ. ಕೇಂದ್ರ ಸರ್ಕಾರವು ನವದೆಹಲಿಯಲ್ಲಿ ಆಯೋಜಿಸಿದ್ದ ಅಖಿಲ ಭಾರತ ಮಟ್ಟದ ಕರಕುಶಲ ಸಮ್ಮೇಳನದಲ್ಲಿ ಆಹ್ವಾನಿತ ಕಲಾವಿದರಾಗಿ ಚಿತ್ರದುರ್ಗ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಶಂಕರಪ್ಪನವರು, ಅಲ್ಲಿಯೇ ಹೃದಯಾಘಾತಕ್ಕೊಳಗಾಗಿ ನಿಧನರಾದುದು ವಿಧಿಯ ವಿಪರ್ಯಾಸ.

ಪತಿಯಪ್ಪ: ಪತಿಯಪ್ಪ ಜನಿಸಿದ್ದು ದಾವಣಗೆರೆ ಸಮೀಪದ ಬಾತಿಯ ಬಳಿ ಇರುವಂತಹ ಕುಂದವಾಡ ಎಂಬ ಊರಿನಲ್ಲಿ. ಇವರು ಕಲಿತಿದ್ದು ಕೇವಲ ೪ನೇ ತರಗತಿಯವರೆಗೆ ಮಾತ್ರ. ಇವರ ಕಲಾಕಲಿಕೆಯ ಗುರುಗಳು ಯಾರು/ ಇವರ ಕಲಿಕಾತರಬೇತಿ ನಡೆದದ್ದು ಎಲ್ಲಿ, ಯಾವಾಗ

ಇತ್ಯಾದಿ ವಿವರಗಳು ಸಿಕ್ಕಿಲ್ಲ. (ಅಲಭ್ಯ) ಇವರಿಗೆ ಚಿಕ್ಕಂದಿನಿಂದಲೂ ರಾಮಾಯಣ ಮೊದಲಾದ ಧಾರ್ಮಿಕ ಪೌರಾಣಿಕ ಕಥೆಗಳನ್ನು ಕೇಳುವುದರಲ್ಲಿ ಆಸಕ್ತಿ ಇತ್ತು ಎಂಬುದಾಗಿ ತಿಳಿದುಬರುತ್ತದೆ. ತಮ್ಮ ಬದುಕಿನುದ್ದಕ್ಕೂ ಇಂತಹ ವಿಷಯಗಳಲ್ಲಿ ಆಸಕ್ತರಾಗಿದ್ದ ಪತಿಯಪ್ಪನವರು ರಾಮಾಯಣದ ೭ ಖಂಡಗಳನ್ನು ವರ್ಣ ಚಿತ್ರಗಳಲ್ಲಿ ಅಭಿವ್ಯಕ್ತಿಸಿದ್ದು, ಅವು ನಮಗೆ ಪತಿಯಪ್ಪನವರ ಕಲಾ ಶ್ರೀಮಂತಿಕೆಯನ್ನು ಗುರುತಿಸುವಲ್ಲಿ ನೆರವಾಗುವ ಮಹತ್ವದ ಆಕರಗಳಾಗಿವೆ.

ತಾವು ಕೇಳಿದ ರಾಮಾಯಣ ಕಥೆಯನ್ನು ಆಧರಿಸಿ ಸ್ಕೆಚ್ ಮಾಡಿಕೊಳ್ಳುತ್ತಿದ್ದ ಇವರು ನಂತರದಲ್ಲಿ ಕ್ರಮಬಧ್ಧವಾಗಿ/ ಸುಸಂಬದ್ಧವಾಗಿ ಸಂಯೋಜಿಸಿ ವರ್ಣ ತುಂಬುತ್ತಿದ್ದರು. ತಾವೇ ಸ್ವತಃ ಸಿದ್ಧಪಡಿಸಿಕೊಂಡ ಕುಂಚಗಳು, ಬಣ್ಣಗಳ ಮೂಲಕವೇ ವರ್ಣಗಾರಿಕೆ ಚಿತ್ರಕ್ಕೆ ನೀಡುತ್ತಿದ್ದರು. ಹಲವು ಬಣ್ಣದ ಕಲ್ಲುಗಳನ್ನು, ಎಲೆ, ಮಣ್ಣುಗಳನ್ನು ಹುಡಿಮಾಡಿ, ನಂತರ ಜರಡಿ ಹಿಡಿದು ಅವುಗಳನ್ನು ಚೆನ್ನಾಗಿ ಸೋಸಿ ನವಿರಾದ ಸೂಕ್ಷ್ಮ ಹುಡಿಗಳನ್ನು ಮಾತ್ರ ಆಯ್ದುಕೊಂಡು ಸಣ್ಣ ತೆಂಗಿನ ಚಿಪ್ಪಿನಲ್ಲಿ/ ಬಟ್ಟಲಿನಲ್ಲೊ ಅವುಗಳನ್ನು ಶೇಖರಿಸಿಟ್ಟುಕೊಂಡು ತಮಗೆ ಬೇಕಾದಾಗ ಬಳಸುತ್ತಿದ್ದರು.

ಪತಿಯಪ್ಪನವರ ಕಲಾಕೃತಿಗಳ ವಿಶಿಷ್ಟತೆ: 'ಒಂದು ಕಲಾಕೃತಿ ಯಾವುದೇ ಪ್ರಮುಖ ವಿಷಯವನ್ನು, ವಸ್ತುವನ್ನು ಕುರಿತದ್ದಾದರೂ ಅದರ ಕಲಾತ್ಮಕ ಮೌಲ್ಯವನ್ನು ನಿರ್ಧರಿಸುವುದು ಅದರ ಸಂಯೋಜನೆಯ ಮೂಲಕವೇ. ಯಾವುದೇ ಒಂದು ಚಿತ್ರಕಲಾಕೃತಿ ನೋಡುಗನ ಮೇಲೆ ಉಂಟುಮಾಡುವ ಪರಿಣಾಮದಲ್ಲಿ ಚಿತ್ರ ಸಂಯೋಜನೆ ಅಥವಾ ಯೋಜನೆ ತುಂಬ ಮುಖ್ಯವಾದ ಸ್ಥಾನವನ್ನುಗಳಿಸುತ್ತದೆ. ಲಂಬವಾದ ಸ್ಥಳ ಹೆಚ್ಚುಳ್ಳ (Vertical) ಎತ್ತರದ ಅಥವಾ ಸಮಾನಾಂತರವಾದ ಸ್ಥಳ ಹೆಚ್ಚುಳ್ಳ ಅಗಲದ (Horizontal) ಅಥವಾ ಉದ್ದ, ಅಗಲಗಳೆರಡೂ ಸಮಾನವಾಗುಳ್ಳ ಚಿತ್ರಕ್ಷೇತ್ರಗಳುಳ್ಳ ಫಲಕಗಳು ತಮ್ಮ ಆಕೃತಿಗಳಿಗೆ ಅನುಗುಣವಾಗಿ ವಿಭಿನ್ನ ಭಾವನೆಗಳನ್ನು, ಪರಿಣಾಮಗಳನ್ನು ನೋಡುಗನಲ್ಲಿ ಉಂಟು ಮಾಡಬಲ್ಲವು ಎಂಬುದನ್ನು ನಾವು ತಿಳಿದಿದ್ದೇವೆ. ಹೀಗೆ ನಿಶ್ಚಿತವಾದ ಪರಿಣಾಮವನ್ನುಂಟುಮಾಡುವಂತಹ ಈ ಚಿತ್ರ ಕ್ಷೇತ್ರದಲ್ಲೂ ಯಾವ ಸ್ಥಳದಲ್ಲಿ ಯಾವ ಆಕೃತಿಯನ್ನು ಯಾವ ಅಳತೆಯಲ್ಲಿ ಕಲಾವಿದ ಇಟ್ಟಿದ್ದಾನೆಂಬುದೂ ಮುಖ್ಯವಾಗುತ್ತದೆ'[೯]. ಈ ಅಂಶಗಳ ಹಿನ್ನೆಲೆಯಲ್ಲಿ ನಾವು ಪತಿಯಪ್ಪನವರ ಕಲಾಕೃತಿಗಳನ್ನು ಅವಲೋಕಿಸಬೇಕಾಗುತ್ತದೆ.

ಪತಿಯಪ್ಪ ಕಲಾಕೃತಿ ರಚನೆಗೆ ಮುಖ್ಯವಾಗಿ ಆಯ್ದುಕೊಂಡಿದ್ದು ಪೇಪರನ್ನು ನೀರಿನಲ್ಲಿ ಕಲಿಸಿದ ಬಣ್ಣದಪುಡಿಗಳನ್ನು ಪೇಪರ್ ಮೇಲಿನ ಚಿತ್ರಾಕೃತಿಗೆ ತುಂಬಿದ್ದಾರೆ. (ಲೇಪಿಸಿದ್ದಾರೆ) ಬಹುಪಾಲು ಆಕೃತಿಗಳು ಚಿಕ್ಕ ಅಳತೆಯವು ಕೆಲವು ಕಲಾಕೃತಿಗಳು ಒಂದೇ ಪೇಪರ್ ಮೇಲೆ ಹಲವಾರು ಚಿಕ್ಕ ಚಿಕ್ಕ (ಐದು ಅಥವಾ ಆರು ವೃತ್ತಗಳತೆ) ವೃತ್ತಗಳನ್ನು ಆಯೋಜಿಸಿ, ಅದರೊಳಗೆ

೯. ಡಾ॥ ಅ.ಲ.ನರಸಿಂಹನ್, ಜನಪ್ರಿಯಕಲಾ ಮಾಲಿಕೆ ದೃಶ್ಯ ಕಲೆಗಳ ಗುಣಗ್ರಹಣ, ಪು.ಸಂ. ೧೭.

ಆಕಾರಗಳನ್ನು ರಚಿಸಿ, ವರ್ಣ ಲೇಪಿಸಲ್ಪಟ್ಟವುಗಳು. ಇಂತಹ ಕಲಾಕೃತಿಗಳಲ್ಲಿ ಅಲ್ಲಲ್ಲಿ ಉಳಿದಂತಹ ತೆರಪಿನ ಅವಕಾಶವನ್ನೂ ಹೂಗಳಿಂದಲೊ, ಎಲೆ, ಬಳ್ಳಿಗಳಿಂದಲೇ ಭರ್ತಿ ಮಾಡಿದ್ದಾರೆ. ವರ್ಣಲೇಪನ ತೆಳುವಾಗಿದೆ. ಮಾನವಾಕಾರ ರಚನೆಯಲ್ಲಿ ಕಲಾವಿದ ನೈಜತೆಗೆ ಹತ್ತಿರವಾಗಿದ್ದಾನೆ. ಬದಿಯ ನೋಟವನ್ನು ತೋರಿಸುತ್ತಿರುವಂತಹ (ಬದಿಯ ನೋಟದಲ್ಲಿರುವಂತಹ) ಮಾನವಾಕಾರದ ಎದೆ, ಕೈ, ಕಾಲುಗಳು ಪೂರ್ಣ ನೋಟದಲ್ಲಿರುವಂತೆಯೇ ತೋರಿಸಲ್ಪಟ್ಟಿವೆ. ಮೈಗೆ ಚಪ್ಪಟೆ ವರ್ಣ ಲೇಪನವಿದೆ. ಉಡುಗೆ ತೊಡುಗೆಗಳಿಗೆ ನೆರಿಗೆಗಳನ್ನು ತೋರಿಸಲು ಪ್ರಯತ್ನಿಸಿದ್ದು ಕಂಡುಬರುತ್ತದೆ. ಆಕೃತಿಗಳಿಗೆ ಬಾಹ್ಯ ರೇಖೆ (Out line) ಎಳೆದಿದ್ದು ಅವು ಅಷ್ಟೊಂದು ಸತ್ವಯುತವಾಗಿಲ್ಲ ಮತ್ತು ಸರಾಗವಾಗಿ ಲಾಲಿತ್ಯ ಪೂರ್ಣವಾಗಿ ಎಳೆಯಲ್ಪಟ್ಟಿಲ್ಲ. ಒಂದೇ ಸಮತಲದಲ್ಲಿ ಬೇರೆ ಬೇರೆ ವೃತ್ತಗಳಲ್ಲಿ ದೃಶ್ಯವನ್ನು ಸಂಯೋಜಿಸಿದ್ದು, ಆವೃತ್ತಗಳಿಗೆ ಎಳೆದಿರುವಂತಹ ಬಾಹ್ಯ ರೇಖೆಯಲ್ಲಿ ಸತ್ವ ಕಂಡು ಬಂದಿರುವುದಿಲ್ಲ. ಲಾಲಿತ್ಯವಾಗಲಿ, ಸರಾಗವಾಗಿ–ಹದವರಿತು ಸಾಗಿದ ಕುಂಚದ ಓಟವಲ್ಲ, ಬಾಹ್ಯ ರೇಖೆ ಎಳೆಯುವಲ್ಲಿ ಕಲಾವಿದ ತುಂಬ ಪ್ರಯಾಸ ಪಟ್ಟಿರುವಂತೆ ಕಂಡುಬರುತ್ತದೆ.

ದೃಶ್ಯದ ಒಟ್ಟಾರೆ ಸಂಯೋಜನೆಯನ್ನು ಗಮನಿಸಿದರೆ, ಹಿನ್ನೆಲೆ–ಮುನ್ನೆಲೆಯ ಕಲ್ಪನೆ ಕಲಾವಿದರಿಗೆ ಇತ್ತು ಮತ್ತು ಅದನ್ನು ಅಭಿವ್ಯಕ್ತಿಸುವಲ್ಲಿ ಪ್ರಮಾಣಿಕವಾದಂತಹ ಪ್ರಯತ್ನ ನಡಿಸಿದ್ದು ವೇದ್ಯವಾಗುವ ಅಂಶ. ಯಥಾದರ್ಶನದ ರೀತಾ ಆಕೃತಿಗಳನ್ನು ಚಿತ್ರಿಸುವ/ ಸಂಯೋಜನೆಗೊಳಿಸುವ ಪ್ರಯತ್ನವೂ ಇದೆ.

ಮರ, ವನ, ಹುಲ್ಲು ಇತ್ಯಾದಿ ನಿಸರ್ಗ ಚಿತ್ರಣ ಬಹುಮಟ್ಟಿಗೆ ನೈಜವಾಗಿ ಚಿತ್ರಿಸಲ್ಪಟ್ಟಿದೆ. ಅವುಗಳಲ್ಲಿ ಜೀವ ಕಳೆಯದೆ. ಬಹುಶಃ ಕಲಾವಿದರು ನಿಸರ್ಗದ ಮಧ್ಯೆಯೇ ಜೀವಿಸುತ್ತಿದ್ದುದರಿಂದ ನಿಸರ್ಗ ಹೆಚ್ಚು ಭಾವ ಪೂರ್ಣವಾಗಿ, ಸಹಜ ಸೊಬಗಿನಿಂದ ಕೂಡಿ ಚಿತ್ರಿತಗೊಂಡಿರಬಹುದೇನೋ?

ಹನುಮಂತ ಅಶೋಕ ವನವನ್ನು ಧ್ವಂಸ ಮಾಡುತ್ತಿರುವುದು, ರಾಮ ಲಕ್ಷ್ಮಣರು ವನದಲ್ಲಿ ಸಂಚರಿಸುತ್ತಿರುವುದು, ಮೊದಲಾದ ಚಿತ್ರಗಳಲ್ಲಿ ನಿಸರ್ಗದ ಚಿತ್ರಣ ಹೆಚ್ಚು ಸತ್ವಯುತವಾಗಿಯೂ ಜೀವಂತಿಕೆಯಿಂದ ಕೂಡಿಯೂ ಚಿತ್ರಿತವಾಗಿದೆ.

ಹನುಮಂತ ಅಶೋಕವನವನ್ನು ಧ್ವಂಸ ಮಾಡುತ್ತಿರುವುದು

ಈ ಚಿತ್ರದಲ್ಲಿ ಹನುಮಂತ ಅಶೋಕವನದಲ್ಲಿನ ಫಲಭರಿತ ವೃಕ್ಷವೊಂದನ್ನು ಏರಿ, ಫಲವನ್ನು ಕೀಳುತ್ತಿದ್ದಾನೆ. ಹನುಮನ ದಾಳಿಗೆ ಒಳಗಾಗಿರುವ ವನದಲ್ಲಿಯ ಹಸಿರು ಹುಲ್ಲು, ವೃಕ್ಷಗಳು ರಭಸವಾಗಿ ಅಲುಗಾಡುತ್ತಿವೆ. ಬಿರುಗಾಳಿ ಬೀಸಿದಾಗ ಮರ–ಗಿಡಗಳ, ಹೂಗಳು, ಹಸಿರು ಹುಲ್ಲುಗಾವಲು, ಇವೆಲ್ಲ ಜೊರಾಗಿ ಅಲುಗಾಡುವುದನ್ನು ತುಂಬ ಸಹಜವಾಗಿ,

ಸತ್ವಪೂರ್ಣವಾಗಿ ಕಲಾವಿದರು ಅಭಿವ್ಯಕ್ತಿಸಿದ್ದಾರೆ. ಚಲನಶೀಲತೆ ಅಶೋಕ ವನದ ಹೂಗಿಡಗಳ ಚಿತ್ರಣದಲ್ಲಿ ಅತ್ಯುತ್ತಮ ರೀತಿಯಲ್ಲಿ ಅಡಕಗೊಂಡಿದೆ. ಅಲ್ಲದೆ ಯಥಾದರ್ಶನ (Prspective) ಕಲ್ಪನೆ ಕೂಡ ಈ ಚಿತ್ರದಲ್ಲಿ ಉತ್ತಮವಾಗಿ ಮೂಡಿ ಬಂದಿದೆ. ಜಾನಪದ ನೆಲೆಗಟ್ಟನ್ನು ದಾಟಿ ಶಾಸ್ತ್ರೀಯತೆಯತ್ತ ಕಲಾವಿದರು ಒಲವು ತೋರಿಸುವದು ಗಮನಕ್ಕೆ ಬರುತ್ತದೆ.

ರಾಮಲಕ್ಷ್ಮಣರು ವನದಲ್ಲಿ ಸಂಚರಿಸುತ್ತಿರುವುದು: ರಾಮಲಕ್ಷ್ಮಣರು ಎದುರು ಬದುರಾಗಿ ನಿಂತಿದ್ದಾರೆ. ಏನನ್ನೋ ಸಂಭಾಷಿಸುತ್ತಿರುವಂತೆ ಭಾಸವಾಗುತ್ತದೆ. ಹೂಗಳಿಂದ ತುಂಬಿದ, ಹಸಿರಿನಲ್ಲಿ ನಿಂತಿರುವ ಇವರ ಹಿಂದುಗಡೆ ಹೂಗಳಿಂದ ತುಂಬಿರುವ ಮರಗಳ ಟೊಂಗೆಗಳೂ ಸಹ ಎದುರು ಬದುರಾಗಿ ಚಿತ್ರಿಸಲ್ಪಟ್ಟಿವೆ. ಹಿನ್ನೆಲೆಯ ವಿಶಾಲ ತೆರಪಿನಲ್ಲಿ ತುಸು ಬೂದು ಬಣ್ಣ ಮಿಶ್ರಿತ ಬಿಳಿಯ ಬಣ್ಣ ಬಳಿಯಲ್ಪಟ್ಟಿದ್ದು, ಅದು ನಂತರದಲ್ಲಿ ಆದಂತಹ ಬದಲಾವಣೆಯಾಗಿರಬಹುದೆಂಬ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ರಾಮ-ಲಕ್ಷ್ಮಣರಿಬ್ಬರ ಉಡುಗೆ-ತೊಡುಗೆಗಳೂ ಪರಸ್ಪರ ಒಂದೇ ಬಣ್ಣದಲ್ಲಿ ಚಿತ್ರಿಸಲ್ಪಟ್ಟಿದ್ದು, ಉಡುಗೆಯಲ್ಲೂ ನೆರಿಗೆಯನ್ನು ತೋರಿಸಲು ಪ್ರಯತ್ನಿಸಲಾಗಿದೆ. ನೆರಿಗೆಯನ್ನು ತುಸು ದಟ್ಟವರ್ಣಗಾರಿಕೆಯಿಂದ ತೋರಿಸುವ ಪ್ರಯತ್ನವಿದೆ. ರಾಮ ಲಕ್ಷ್ಮಣರಿಬ್ಬರೂ ಮೈಬಣ್ಣ ಒಂದೇ ತೆರನಾಗಿದ್ದು ಚಪ್ಪಟೆ ವರ್ಣಲೇಪನವಿದೆ ಮತ್ತು ತೆಳುವಾದವರ್ಣ ಲೇಪನವಿದೆ. ಚಿತ್ರಿತ ಆಕೃತಿಗಳಿಗೆ ಬಾಹ್ಯ ರೇಖೆ ಎಳೆಯಲಾಗಿದ್ದು ಆ ರೇಖೆಯಲ್ಲಿ ಸತ್ವವಾಗಲಿ, ಸರಾಗವಾದ (ಸಲೀಸಾದ) ಚಲನಶೀಲತೆಯಾಗಲಿ ಕಂಡು ಬರುವುದಿಲ್ಲ. ಆದರೆ ಬಾಹ್ಯ ರೇಖೆಯ ಸೂಕ್ಷ್ಮತೆ ಕಾಯ್ದುಕೊಳ್ಳುವಲ್ಲಿ ಕಲಾವಿದರು ಸಫಲರಾಗಿದ್ದಾರೆ.

ಪತಿಯಪ್ಪ ಕೆಲವು ಶಿಲ್ಪಗಳನ್ನು ರಚಿಸಿದ್ದು, ಅವು ಹುಣಸೆಬೀಜ ಮತ್ತು ಕಟ್ಟಿಗೆ ಪೌಡರ್ ಮಿಶ್ರಣಮಾಡಿ ರಚಿಸಿದವುಗಳು. ಇವುಗಳಲ್ಲಿ ನಾಗರ ಹಾವು ಮತ್ತು ಹಣ್ಣು ಹಂಪಲುಗಳು ನೈಜತೆಯಿಂದ ಕೂಡಿದ್ದು, ಉಳಿದಂತೆ ಮಾನವಾಕೃತಿಗಳು ಶುದ್ಧ ಜಾನಪದೀಯ ಲಕ್ಷಣಗಳಿಂದ ಕೂಡಿವೆ.

ಒಟ್ಟಿನಲ್ಲಿ ಪತಿಯಪ್ಪ ಆ ಕಾಲದ ಶ್ರೇಷ್ಠ ಮಟ್ಟದ ಕಲಾವಿದ. ದಾವಣಗೆರೆ ಜಿಲ್ಲೆಯೊಂದರ ಗ್ರಾಮೀಣ ಭಾಗದಲ್ಲಿ ಜನಿಸಿ, ಕಷ್ಟದ ಬದುಕಿನಲ್ಲಿಯೂ ತಮ್ಮಲ್ಲಿರುವ ಕಲಾವಂತಿಕೆಗೊಂದು ಅಭಿವ್ಯಕ್ತಿ ಕೊಟ್ಟುಕೊಂಡು ಅರಳಿದವರು. ಪತಿಯಪ್ಪ ರಚಿಸಿದ ಕೆಲವು ಕಲಾಕೃತಿಗಳನ್ನು (ವರ್ಣ ಚಿತ್ರಗಳನ್ನು) ಗಮನಿಸಿದಾಗ ಅವು ಶುದ್ಧ ಜಾನಪದ ಮಟ್ಟವನ್ನು ದಾಟಿನಿಂತ ಕೃತಿಗಳೆಂದೆನಿಸುತ್ತವೆ. ಬಹುಶಃ ಈ ಕಲಾಪ್ರತಿಭೆಗೆ ಸೂಕ್ತ ಕಲಿಕಾ ವ್ಯವಸ್ಥೆ/ ಕಲಾ ತರಬೇತಿ ಸಿಕ್ಕಿದ್ದರೆ ಒಬ್ಬ ಅಪ್ರತಿಮ ಕಲಾವಿದರಾಗಿ ಹೊರಹೊಮ್ಮುತ್ತಿದ್ದರು ಎಂದು ನಿಸ್ಸಂದೇಹವಾಗಿ ಅಭಿಪ್ರಾಯ ಪಡೆಯಬಹುದು.

ಜನಪದ ಕಲೆಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಜೀವನ ವಿಧಾನ ಬದಲಾಗುತ್ತಿರುವುದರಿಂದ ಪರಂಪರಾಗನುಗತವಾಗಿ ಬಂದಂತಹ ಇಂತಹ ಕಲೆಗಳ ಮೇಲೆ ಜನ ಸಮುದಾಯದ ಆಸಕ್ತಿಯು ಕಡಿಮೆಯಾಗುತ್ತಿರುವುದರಿಂದ ಜೀವನ ಸೌಂದರ್ಯ ಇಂತಹ ಜನಪದ ಕಲೆಗಳಲ್ಲಿ ಅಡಕವಾಗಿವೆ.

– * –

ವಿವಿಧ ಆಕಾರಗಳಲ್ಲಿ ರಚನೆಗೊಂಡ ಹಚ್ಚೆ ಚಿತ್ರಗಳು









ಕಸೂತಿಯಲ್ಲಿ ರಚನೆಯಾದ ವಸ್ತುಗಳು












ಗೋಡೆಯ ಮೇಲೆ ರಚನೆಯಾದ ಚಿತ್ರಗಳು













ಸೂತ್ರ ಬೊಂಬೆಯಾಟ





ತೊಗಲು ಗೊಂಬೆ



ಶಂಕ್ರಪ್ಪ ಕಮ್ಮಾರವರು ರಚಿಸಿದ ಶಿಲ್ಪ ಕಲಾಕೃತಿಗಳು







ಪಕಿಯಪ್ಪನವರು ರಚಿಸಿದ ಚಿತ್ರಕಲಾಕೃತಿಗಳು





ಪತಿಯಪ್ಪನವರು ರಚಿಸಿದ ಶಿಲ್ಪ ಕಲಾಕೃತಿಗಳು





ಅಧ್ಯಾಯ: ೪

ದಾವಣಗೆರೆ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು

ಮಾನವನ ಜೀವನವು ಮೂರು ಅಂಶಗಳಾದ ತನು,ಮನ, ದನಗಳೆಂಬ ಮೂರು ಬಗೆಯ ಅಂಶಗಳಿಂದ ಕೂಡಿದ್ದು, ಶಿಕ್ಷಣವು ಇವುಗಳನ್ನು ಸಂಸ್ಕರಿಸಿ ಅವುಗಳ ಉತ್ತೇಜನವನ್ನು ಕೊಡುವ ಕಾರ್ಯವನ್ನು ಸದಾಕಾಲವೂ ಮಾಡುತ್ತಿರುತ್ತದೆ, ನಾವು ವಾಸಿಸುತ್ತಿರುವಂಥಹ ಈ ಸಮಾಜದಲ್ಲಿ ಶಾಲೆಗೆ ಬಿಡಲಾಗದ ನಂಟಿದೆ. ಶಾಲೆಯಲ್ಲಿ ಉತ್ತಮವಾದ ಶಿಕ್ಷಣವನ್ನು ಪಡೆದು ಸಮಾಜದ ಅಭಿವೃದ್ದಿಗೆ ಕಾರಣಗಳಾವುತ್ತವೆ.

ಚಿತ್ರಕಲಾ ಶಿಕ್ಷಣ ಸಂಸ್ಥೆಗಳು, ಚಿತ್ರಕಲೆಗಾಗಿ ಹುಟ್ಟಿಕೊಂಡ ಸಂಘ ಸಂಸ್ಥೆಗಳು, ಹಲವಾರು ಹವ್ಯಾಸಿ ಪೆಂಟಿಂಗ್ ತರಗತಿಗಳು ಮುಂತಾದವುಗಳು ಚಿತ್ರಕಲಿಕೆಗಾರರಲ್ಲಿ ಹೆಚ್ಚಿನ ಪ್ರಭಾವ ಬೀರಿ ಚಿತ್ರಕಲೆಗಳಲ್ಲಿ ಒಲವು ತೋರಲು ಕಾರಣಿಕರ್ತವಾಗಿವೆ ಹಾಗೂ ಚಿತ್ರಕಲಾ ಕ್ಷೇತ್ರದಲ್ಲಿ ಸಾರ್ಥಕತೆ ಪಡೆಯುತ್ತವೆ.

ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ಕಲಾ ಶಿಕ್ಷಣ ದೊರಕಿಸಿ ಕೊಡುವಲ್ಲಿ ಸರಕಾರದ ಪಾತ್ರ ಅತಿ ಮುಖ್ಯವಾಗಿದ್ದು. ಅದಿನ್ನೂ ಅಷ್ಟರ ಮಟ್ಟಿಗೆ ತೃಪ್ತಿತರದ ಮಾತು. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಪ್ರತಿ ಶಾಲೆಯಲ್ಲಿಯೂ ಚಿತ್ರಕಲಾ ಶಿಕ್ಷಣ ಮುಖ್ಯವಾದ ವಿಷಯವಾಗಿದ್ದು, ಇದು ಅವಶ್ಯವಿದ್ದಾಗಲೂ ಕೂಡ ಇತ್ತ ಕಡೆ ಅಷ್ಟು ಸರಿಯಾಗಿ ಗಮನ ಹರಿಸದಂತಹ ಸರಕಾರಗಳು, ಇಡೀ ಜಿಲ್ಲೆಯಲ್ಲಿಯೇ ಹತ್ತಾರು ಪ್ರೌಢಶಾಲೆಗಳಲ್ಲಿ ಮಾತ್ರ ಶಿಕ್ಷಕರನ್ನು ನೇಮಿಸಿಕೊಂಡು ಚಿತ್ರಕಲಾ ಶಿಕ್ಷಣ ನೀಡುತ್ತಿವೆ. ಇಲ್ಲಿರುವ ಖಾಸಗಿ ಸಂಸ್ಥೆಯವರು ಕೂಡ ಇದರ ಬಗ್ಗೆ ಹೆಚ್ಚಿನ ಒಲವು ತೋರಿದ್ದು, ಮಕ್ಕಳಲ್ಲಿ ಚಿತ್ರಕಲೆಯ ಬಗ್ಗೆ ತಿಳುವಳಿಕೆಯನ್ನು ಕೊಟ್ಟು ಅದರಲ್ಲಿ ಅವರಿಗೆ ತರಬೇತಿ ನೀಡಿ ಮಕ್ಕಳ ಭೌತಿಕ ಬೆಳವಣಿಗೆಗೆ ಕಾರಣೀಕರ್ತರಾಗಿದ್ದಾರೆ. ಇವರು ನುರಿತ ಕಲಾವಿದರನ್ನು ಕರೆಸಿಕೊಂಡು ಚಿತ್ರಕಲೆಯಲ್ಲಿ ಬೇರೆ ಬೇರೆ ವಿಷಯಗಳಲ್ಲಿ ಹಲವಾರು ತಂತ್ರಗಳನ್ನು ಬಳಸಿ ಚಿತ್ರರಚಿಸುವ ವಿವಿಧ ಬಗೆಯ ಚಿತ್ರಕಲಾಕೃತಿಗಳನ್ನು ಮಾಡುವ ವಿಧಾನಗಳನ್ನು ತಿಳಿಸಿಕೊಡುತ್ತಾರೆ.

ಇಂಥ ಬೆಳವಣಿಗೆಯಿಂದ ಮಕ್ಕಳಲ್ಲಿ ಸೃಜನಾತ್ಮಕ, ಸಾಂಸ್ಕೃತಿಕ, ಚಿಂತನಶೀಲತೆ ಬೆಳವಣಿಗೆಯಾಗುವುದಂತು ಸತ್ಯ.

ದಾವಣಗೆರೆ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಮತ್ತು ಚಿತ್ರಕಲೆಯನ್ನು ಪ್ರಚಾರಗೊಳಿಸುವ ಉದ್ದೇಶದಿಂದ ಕೆಲವೊಂದು ಸಂಘಸಂಸ್ಥೆಗಳ ಮುಖಾಂತರ ಒಂದು ಸದುದ್ದೇಶವನ್ನು ಈಡೇರಿಸುತ್ತಿರುವುದು ಒಂದು ರೀತಿಯಲ್ಲಿ ಸಮಾಧಾನಕರ ಸಂಗತಿಯಾಗಿದೆ. ಕೆಲವೊಂದು ಸಂಘ–ಸಂಸ್ಥೆಗಳಾದ ಸಂಕಲನ, ಕಲಾಕುಂಚ, ರೋಟರಿಕ್ಲಬ್, ಲಾಯನ ಕ್ಲಬ್ ಮುಂತಾದವುಗಳು ಈ ಚಿತ್ರಕಲೆಯ ವಿಚಾರವಾಗಿ ಇದನ್ನು ಬೆಳೆಸುವ ಉದ್ದೇಶದಿಂದ ಹಲವಾರು ಚಿತ್ರಕಲಾ ತರಬೇತಿಯನ್ನು ಕೊಡುವ ತರಗತಿಗಳನ್ನು ಪ್ರಾರಂಭಿಸಿದ್ದಾರೆ. ಇವುಗಳು ಹೆಚ್ಚಾಗಿ ರಜಾದಿನಗಳಲ್ಲಿ ನಡೆಯುತ್ತಿದ್ದು ಹಾಗೂ ಚಿತ್ರಕಲೆಯಲ್ಲಿ ಸ್ಪರ್ಧೆಯನ್ನು ಸಹ ಏರ್ಪಡಿಸುತ್ತಾರೆ. ಪ್ರಮುಖ ಸಂದರ್ಭಗಳಲ್ಲಿ ಚಿತ್ರಕಲಾ ಸ್ಪರ್ಧೆಗಳನ್ನು ನಿಯೋಜಿಸುವುದರ ಮುಖಾಂತರ ಮಕ್ಕಳಲ್ಲಿ ಸ್ಪರ್ಧಾತ್ಮಕ ಬೆಳವಣಿಗೆಯೊಂದಿಗೆ ಅವರಲ್ಲಿನ ಪ್ರತಿಭೆಯನ್ನು ಗುರುತಿಸಿ ಪ್ರಶಸ್ತಿಗಳ ಮೂಲಕ ಗೌರವಿಸುತ್ತಿವೆ.

ಹೊರಗಿನಿಂದ ಬರುವ ಕಲಾವಿದರುಗಳಿಗೆ ತಮ್ಮ ಕಲಾಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸುವ ನಿಟ್ಟಿನಲ್ಲಿ ದಾವಣಗೆರೆಯಲ್ಲಿ ಕಲಾಗುರು ಆರ್ಟಗ್ಯಾಲರಿಯನ್ನು ಸ್ಥಾಪಿಸಿದ್ದರು. ಇದರಿಂದ ಬೇರೆ ಬೇರೆ ಕಡೆಗಳಲ್ಲಿರುವ ಸಂಪ್ರದಾಯ ಮುಂತಾದವುಗಳನ್ನು ಅರಿಯಲು ಸಹಾಯವಾಗುತ್ತವೆ. ಇದು ಸುಮಾರು ವರ್ಷಗಳಿಂದ ತನ್ನ ಸೇವೆಯನ್ನು ಮಾಡುತ್ತಿದ್ದು ಸದ್ಯ ಇದನ್ನು ನಿಲ್ಲಿಸಲಾಗಿದೆ.

ಹಾಗೆಯೇ ಬಹುಮುಖ್ಯವಾಗಿ ದಾವಣಗೆರೆ ಜಿಲ್ಲೆಯಲ್ಲಿ ಚಿತ್ರಕಲೆಯಲ್ಲಿಯೇ ತರಬೇತಿಯನ್ನು ಕೊಡುವ ವಿಚಾರವಾಗಿ ಮೂರು ಕಡೆಗಳಲ್ಲಿ ಚಿತ್ರಕಲಾ ಶಾಲೆಗಳು ಪ್ರಾರಂಭಗೊಂಡವು. ಅವುಗಳಲ್ಲಿ ಜಗಳೂರಿನಲ್ಲಿರುವ ಖಾಸಗಿ ವಿದ್ಯಾಸಂಸ್ಥೆಯೊಂದು ರಾಜಾ ರವಿವರ್ಮ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿತು. ಅದು ೧೯೯೨ ರಲ್ಲಿ ಪ್ರಾರಂಭವಾಗಿದ್ದು, ಅಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಕರ ತರಬೇತಿಯನ್ನು ನೀಡಲಾಗುತ್ತಿದೆ. ಸದ್ಯ ಅಲ್ಲಿ ೧೨ ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಒಬ್ಬ ಪ್ರಾಚಾರ್ಯರು ಹಾಗೂ ಇಬ್ಬರು ಶಿಕ್ಷಕ ವೃಂದದವರಿದ್ದಾರೆ. ಅಲ್ಲಿ ಕಲಾಶಿಕ್ಷಣಕ್ಕೆ ಬೇಕಾಗುವಂತಹ ವಸ್ತುಚಿತ್ರಣ, ವ್ಯಕ್ತಿ ಅಧ್ಯಯನ, ಡಿಸೈನ, ಮುಂತಾದವುಗಳ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿದೆ.

ಹಾಗೆಯೇ ಬೆಳಗಾವಿಯಲ್ಲಿ ಮುಖ್ಯ ಶಾಖೆಯನ್ನು ಹೊಂದಿದ್ದ ಉಮಾ ಕಲಾಮಂದಿರ ಸಂಸ್ಥೆಯು, ದಾವಣಗೆರೆಯಲ್ಲಿ ಉಪಶಾಖೆಯನ್ನು ೧೯೯೦ ರಲ್ಲಿ ಪ್ರಾರಂಭಿಸಿ ಉಮಾ ಕಲಾಮಂದಿರವೆಂಬ ಹೆಸರಿನಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿಯನ್ನು ಇದೂ ಸಹ

ಪ್ರಾರಂಭಿಸಿತ್ತು. ಸುಮಾರು ಐದು-ಆರು ಜನ ಸಿಬ್ಬಂದಿ ವರ್ಗದವರು ಇಲ್ಲಿ ಕೆಲಸಮಾಡುತ್ತಿದ್ದರು. ಆದರೆ ಕಾರಣಾಂತರದಿಂದ ಸುಮಾರು ವರ್ಷಗಳಿಂದ ಈ ಕಲಾಶಾಲೆಯು ಮುಚ್ಚಲ್ಪಟ್ಟಿದ್ದು ಅಲ್ಲಿ ಈಗ ಯಾವುದೇ ಕಲಾ ಶಿಕ್ಷಣವಾಗಲಿ, ಕಲಾ ಚಟುವಟಿಕೆಯಾಗಲಿ ನಡೆಯುತ್ತಿಲ್ಲ. ಹಾಗೆಯೇ, ಇವುಗಳಲ್ಲಿ ಎಲ್ಲ ಕಲಾಶಾಲೆಗಳಿಗಿಂತ ಹೆಚ್ಚು ಕ್ರಿಯಾಶಾಲಿಯಾದುದೆಂದರೆ ಕುವೆಂಪು ವಿಶ್ವವಿದ್ಯಾಲಯದಿಂದ ನಡೆಸಲ್ಪುವ ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯವು ಜಿಲ್ಲೆಯಲ್ಲಿ ಮಾತ್ರವಲ್ಲದೇ ರಾಜ್ಯದ ರಾಷ್ಟ್ರ ಮಟ್ಟದಲ್ಲಿ ಹಲವಾರು ಸಾಧನೆಗಳನ್ನು ಮಾಡಿ ಹೆಸರುವಾಸಿಯಾಗಿದೆ.

ಕಲೆ ಮಾನವನಿಗೆ ಮೂಲಭೂತವಾದ ವಿಷಯಗಳನ್ನು ಕಂಡು ಕೊಳ್ಳಲು, ಲೌಕಿಕತೆಯನ್ನು ಅರಿತುಕೊಳ್ಳಲು ನೆರವಾಗಿದೆ. ಹೊಸ ದೃಷ್ಟಿ ಮತ್ತು ಕಾರ್ಯಕಲಾಪದ ಮನೋರಂಜನೆಯನ್ನು ಮಾಡಿದೆ. ಯಾವುದನ್ನು 'ಕ್ರಿಯೇಟಿವಿಟಿ' ಎನ್ನುತ್ತೇವೆಯೋ ಅದು ನಮ್ಮ ತಿಳುವಳಿಕೆಯನ್ನು ವಿಸ್ತರಿಸಿ ಜೀವನದಲ್ಲಿ ಉಂಟಾದ ಅನುಭವಗಳನ್ನು ಹೊಸದಾಗಿ ಸೃಷ್ಟಿಸುವ ಕಲೆ ನಮ್ಮಲ್ಲಿರಬೇಕು. ಅಂತಹ ಕಲೆ ಯಾವುದೆಂದರೆ ಯಾವುದೇ ಒಂದು ಕಲಾಕೃತಿಯನ್ನು ನೋಡಿದಾಗ ಅದನ್ನು ಮತ್ತೆ ಮತ್ತೆ ಹಲವಾರು ಸಾರಿ ನೋಡಬೇಕೆನಿಸುತ್ತದೆಯೋ ಅದೇ ಉತ್ತಮವಾದ ಕಲಾಕೃತಿಯಾಗಿ ಹೊರಹೊಮ್ಮುತ್ತದೆ. ಅಂತಹ ಕಲೆ ಶಾಶ್ವತವಾಗಿ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುತ್ತದೆ.

ಕಲೆಯ ಬಗ್ಗೆ ಯೋಚನೆ ಮಾಡಿದಾಗ ಕಲೆಯು ಮಾನವ ಕುಲದಷ್ಟೇ ಪ್ರಾಚೀನವಾದದ್ದು. ಭಾರತದಲ್ಲಿ ಇರುವ ಅಜಂತಾ-ಎಲ್ಲೋರಾಗಳಲ್ಲಿ ಇರುವಂತಹ ಬಿತ್ತಿ ಚಿತ್ರಗಳಲ್ಲಿ ಆ ಕಾಲದ ಕಲಾವಿದನ ಕಲಾ ಕೌಶಲ್ಯಕ್ಕೆ ಕನ್ನಡಿ ಹಿಡಿದಂತಿದೆ. ಕಲೆ ಹಾಗೂ ಅದರ ಬಗ್ಗೆ ಅರಿತುಕೊಂಡು, ಅದರಿಂದ ಆನಂದದ ಅನುಭವಗಳನ್ನು ಪಡೆಯಬೇಕಾದರೆ ಅದರ ಬಗ್ಗೆ ಅರವಳಿಕೆ ಬಹು ಮುಖ್ಯವಾಗಿದೆ. ಇದರಿಂದಾಗಿ ಕಲಾಸಂಸ್ಥೆಗಳಿಂದ ತಿಳುವಳಿಕೆಯನ್ನು ಮತ್ತು ಆನಂದವನ್ನು ಪಡೆಯಬಹುದಾಗಿದೆ.

ವಿವಿಧ ಬಗೆಯ ಕಲೆಗಳು ಮಾನವ ಕುಲದಷ್ಟೇ ಹಳೆಯದಾಗಿದ್ದು ಹಾಗೂ ಮಾನವನ ಬದುಕಿನಲ್ಲಿ ಹಲವಾರು ಬದಲಾವಣೆಯನ್ನು ಮಾಡಿಕೊಂಡು ಬಂದಿರುವಂತಹದು. ಮನುಷ್ಯನನ್ನು ತನ್ನಲ್ಲಿ ಸೀಮಿತಗೊಳಿಸದೆ ಪರಮ ತತ್ವರ ಕಡೆಗೆ ತಿರುಗಿಸುವ ಕಲೆಯೇ ಶ್ರೇಷ್ಠವಾದದ್ದು, ಅಮರ ತತ್ವದ ಕಡೆ ತಿರುಗಿಸುವುದೇ ಅದರ ಗುರಿಯಾಗಿದೆ.

ಕಲೆಯನ್ನು ಆಸ್ವಾದಿಸಿ ಸಂತೋಷವನ್ನು ಹಾಗೂ ಆನಂದವನ್ನು ಪಡೆಯಬೇಕಾದರೆ ದೇಶ, ವಿದೇಶಗಳ ಹಾಗೂ ಅಲ್ಲಿಯ ಪರಿಸರ, ಆಚಾರ ವಿಚಾರ, ಸಂಸ್ಕೃತಿ ಮತ್ತು ಅಲ್ಲಿಯ ವಿವಿಧ ಬಗೆಯ ಇತಿಹಾಸಗಳ ತಿಳುವಳಿಕೆಯು ಅತ್ಯಮೂಲ್ಯವಾದ ಪಾತ್ರ ವಹಿಸುತ್ತದೆ. ಆ

ವಿಷಯದ ಕುರಿತಾಗಿ ಹೆಚ್ಚಿನ ಜ್ಞಾನವು ಪ್ರತಿಯೊಬ್ಬರು ತಿಳಿದು ಕೊಳ್ಳುವುದು ಅತ್ಯವಶ್ಯಕವಾಗಿದೆ. ವಿಶೇಷವಾಗಿ ಕಲಾ ವಿದ್ಯಾರ್ಥಿಗಳು, ಕಲಾಭಿಮಾನಿಗಳು ಹಲವಾರು ವಿಚಾರವಾಗಿ ಕಲೆಯ ಬಗ್ಗೆ ಸಾಮಾನ್ಯ ತಿಳುವಳಿಕೆಯು ಪಡೆದುಕೊಳ್ಳುವದು ಅತ್ಯವಶ್ಯಕವಾಗಿದೆ.

ಹಾಗೆಯೇ ಒಂದು ಕಲಾ ಶಿಕ್ಷಣವನ್ನು ನೀಡುತ್ತಿರುವ ಕಲಾ ಸಂಸ್ಥೆಯ ವಿಷಯವಾಗಿ ಅಭ್ಯಸಿಸಿ ಅದರ ಕುರಿತಾಗಿ ಪರಿಚಯಿಸಬೇಕಾದರೆ ಅದರ ಹಿಂದಿನ ಹಾಗೂ ಇತ್ತೀಚಿನ ಕಲಾ ಶಿಕ್ಷಣದಲ್ಲಿ ಆದ ಹಲವಾರು ಬದಲಾವಣೆಗಳು ಹಾಗೂ ಬೆಳವಣಿಗೆಗಳ ವಿವಿಧ ರೀತಿಯ ಸ್ಥಿತಿಗತಿಗಳನ್ನು ಅರಿತುಕೊಳ್ಳುವದು ತುಂಬಾ ಅವಶ್ಯಕವು ಹಾಗೂ ಅರ್ಥಪೂರ್ಣವೂ ಆಗಿದೆ.

ಪುರಾತನ ಕಾಲದಲ್ಲಿ ಈಗಿನ ಕಾಲದ ಮಾದರಿಯಲ್ಲಿ ಕಲಾಶಾಲೆಗಳು ಅಸ್ತಿತ್ವದಲ್ಲಿ ಇರಲಿಲ್ಲ. ಆಗಾಗ ಕೆಲವೊಂದು ಕಲಾ ವೃತ್ತಿಯವರು ಕೃತಿಗಳ ರಚನೆಯಲ್ಲಿ ಹಲವಾರು ನಿಯಮ, ನಿಭಂದನೆಗಳನ್ನು ಮಾಡಿಕೊಂಡು ಕಲಾಕೃತಿಗಳ ರಚನೆಯಲ್ಲಿ ತೊಡಗುತ್ತಿದ್ದರು. ಆವಾಗ ಅದು ಅತ್ಯವಶ್ಯಕವೂ ಆಗಿರುತ್ತಿತ್ತು.

ಕಲಾ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಯನ್ನು ನಾವು ಗಮನಿಸಿದಾಗ ಆವಾಗ ಅಸ್ಥಿತ್ವದಲ್ಲಿದ್ದ "ಗುರುಕುಲ" ಮಾದರಿಯಲ್ಲಿ ಕಲೆ ಮತ್ತು ಕರಕುಶಲದ ವಿಷಯವಾಗಿ ಶಿಕ್ಷಣ ನೀಡುತ್ತಿದ್ದುದು ಗಮನಿಸಬಹುದಾಗಿದೆ. ಹಲವಾರು ಪುರಾತನ ಗ್ರಂಥಗಳಲ್ಲಿ ತಿಳಿಸಿರುವಂತೆ ಶ್ರೀಮಂತ ವರ್ಗದವರ ಮನೆ ಹಾಗೂ ಅರಮನೆಗಳಲ್ಲಿನ ಚಿತ್ರಕಲಾ ಶಿಕ್ಷಣದ ಬಗ್ಗೆ ಶಾಲೆಗಳಲ್ಲಿ ಭಾವಚಿತ್ರ, ಬಿತ್ತಿ ಚಿತ್ರಗಳ ರಚನಾ ವಿಧಾನ ಮುಂತಾದವುಗಳನ್ನು ಕಲಿಸಿ ಕೊಡುತ್ತಿದುದರ ಬಗ್ಗೆ ಹಲವಾರು ವಿವರಣೆಗಳು ದೊರೆಯುತ್ತವೆ. ಕಲೆ ವೃತ್ತಿಯಾಗಿ ಮಾರ್ಪಾಡಾಗಿ ಕಲಾ ಶಿಕ್ಷಣವು ಹಲವು ಮನೆತನಗಳಲ್ಲಿ ವಂಶ ಪಾರಂಪರಾಗತವಾಗಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿನವರೆಗೂ ಸಾಗಿ ಕಲೆಯು ಕುಶಲ ಕಲೆಯಾಗಿಯೂ, ಸೃಜನಾತ್ಮಕ ಕಲೆಗಳಾಗಿಯೂ ಕಾಣಿಸುತ್ತಿದ್ದವು. ರಾಜ ಮಹಾರಾಜರ ಆಶ್ರಯದಿಂದ ಅವರ ಸಂಸ್ಥಾನಗಳಲ್ಲಿ ಹಲವಾರು ಬಗೆಯ ಸಂಪ್ರದಾಯಿಕ ಕಲಾ ಪ್ರಕಾರಗಳು ಮೂಡಿ ಬಂದವು. ಅದರ ಜೊತೆ ಜೊತೆಯಲ್ಲಿಯೇ ಜನಪದರ ಹಲವಾರು ಕಲಾ ಪ್ರಕಾರಗಳು ಬೆಳಕಿಗೆ ಬಂದವು.

ಆದಾದ ನಂತರ ಬ್ರಿಟಿಷರು ಭಾರತಕ್ಕೆ ಬಂದು ಆಡಳಿತವನ್ನು ಪ್ರಾರಂಭಿಸಿದರು. ಬ್ರಿಟಿಷರು ಭಾರತವನ್ನು ಆಳುತ್ತಿರುವ ಸಂಧರ್ಭಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಮಾದರಿಯ ಆಡಳಿತಕ್ಕೆ ಹೆಚ್ಚಿನ ಒತ್ತು ಕೊಟ್ಟರು. ಅದೇ ರೀತಿಯಾಗಿ ಕಲಾ ಶಿಕ್ಷಣದಲ್ಲಿಯೂ ಬ್ರಿಟಿಷರು ಹಲವಾರು ಬಗೆಯ ಬದಲಾವಣೆಗಳನ್ನು ಮಾಡಿದರು. ಕಲಾ ಶಿಕ್ಷಣವನ್ನು ಕೊಡಿಸುವದಕ್ಕೋಸ್ಕರ ಅವರು ಬ್ರಿಟಿಷ್ ಮಾದರಿಯ ಕಲಾಶಾಲೆಗಳನ್ನು ಭಾರತದಲ್ಲಿ ತೆರೆದರು. ಅವುಗಳಲ್ಲಿ ಮುಖ್ಯವಾಗಿ ಕಲ್ಕತ್ತಾ, ಮದರಾಸು, ಮುಂಬೈ, ಲಕನೌಗಳಲ್ಲಿ ಕಲಾ ಶಾಲೆಗಳನ್ನು ತೆರೆದು ಬ್ರಿಟಿಷ್ ಮಾದರಿಯ

ಕಲಾಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದರು. ಈ ಇಂಗ್ಲೀಷ್ ಮಾದರಿಯಲ್ಲಿರುವ ಕಲಾ ಶಾಲೆಗಳು ಭಾರತದಲ್ಲಿರುವ ಕಲಾಭಿರುಚಿ ಬೆಳೆಸಲು ಹಾಗೂ ಬೆಳೆಯಲು ನಾಂದಿಯಾಯಿತು.

ಈ ಕ್ರಮವನ್ನು ಅನುಸರಿಸಿ ದೇಶದ ಹಲವಾರು ಭಾಗಗಳಲ್ಲಿ ಹಾಗೂ ಅನೇಕ ಕಡೆಗಳಲ್ಲಿ ಕಲಾ ಶಿಕ್ಷಣದಲ್ಲಿ ಬದಲಾವಣೆಗಳು ಕಂಡು ಬಂದವು. ಶಾಂತಿನಿಕೇತನ, ದೆಹಲಿ, ಮುಂಬೈ, ಬರೋಡಾ, ಅಹಮದಾಬಾದ, ಹೈದರಾಬಾದನಲ್ಲಿ ಹಲವಾರು ಕಲಾಮಂದಿರಗಳು ಸ್ಥಾಪನೆಗೊಂಡವು. ಮುಖ್ಯವಾಗಿ ಅದರಲ್ಲೂ ಕರ್ನಾಟಕದ ಕೆಲವೊಂದು ಸ್ಥಳಗಳಲ್ಲಿ ಚಿತ್ರಕಲಾ ಶಿಕ್ಷಣವನ್ನು ನೀಡುವ ಹಲವಾರು ಕಲಾ ಸಂಸ್ಥೆಗಳು ಪ್ರಾರಂಭಗೊಂಡು ಕಲೆ ಮತ್ತು ಕಲಾ ಶಿಕ್ಷಣದಲ್ಲಿ ಹಲವಾರು ಬದಲಾವಣೆಗಳಾದವು.

೧೮೩೩ ರಲ್ಲಿ ಮುಮ್ಮುಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಾರಂಭವಾದ ಉಚಿತ ಕಲಾ ಶಾಲೆ ಮೈಸೂರಿನಲ್ಲಿ ಆರಂಭವಾಯಿತು. ಇದರಲ್ಲೂ ಪ್ರಮುಖವಾಗಿ ರಾಜ ಮನೆತನದಲ್ಲಿ ಬಂದಂತವರಿಗೆ ಕಲಿಯಲು ಅವಕಾಶ ಕಲ್ಪಿಸಲಾಗಿತ್ತು ಮತ್ತು ಕಲೆಯನ್ನು ಕಲಿಯುವ ಆಸಕ್ತಿಯುಳ್ಳವರಿಗೆ ಈ ಕಲಾ ಶಾಲೆಯಲ್ಲಿ ಕಲೆಯನ್ನು ಅಭ್ಯಸಿಸಲು ಅನುವು ಮಾಡಿಕೊಡಲಾಗಿತ್ತು. ಇದಕ್ಕೆ ಒಂದು ಶಿಕ್ಷಣ ನೀತಿಯನ್ನು ೧೮೫೭ ರಲ್ಲಿ ರೂಪಿಸಿದರು. ಆದಾದ ನಂತರ ೧೮೬೯ರಲ್ಲಿ ಸರ್ಕಾರಿ ಕೈಗಾರಿಕಾ ಶಾಲೆಯಾಗಿ ಪ್ರಾರಂಭವಾಯಿತು. ೧೮೬೬ ರಲ್ಲಿ ಭಾರತ ಸರಕಾರದ ಅಂಗೀಕಾರವನ್ನು ಪಡೆದು ಮದ್ರಾಸಿನ ಮೆಟ್ರಿಕೋಲೇಷನ ಪರಿಕ್ಷೆಗೆ ಕುಳಿತುಕೊಳ್ಳಲು ತರಬೇತಿ ನೀಡಲಾಗುತ್ತಿತ್ತು. ಪ್ರಾರಂಭದಲ್ಲಿ ಕೇವಲ ಮರಗೆಲಸ ಹಾಗೂ ಕಮ್ಮಾರಿಕೆಯು ಇಲ್ಲಿಯ ಪ್ರಮುಖ ಕಲಿಕೆಯ ವಿಷಯಗಳಾಗಿದ್ದವು. ಕೆಲವು ಕಾಲಾನಂತರ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಇದರಲ್ಲಿ ಬೆರೆತುಕೊಂಡವು.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಿಗುವದಕ್ಕೂ ಮೊದಲು ಅನೇಕ ಖಾಸಗಿ ಕಲಾ ಸಂಸ್ಥೆಗಳು ಹಲವಾರು ಚಿತ್ರಕಲಾ ಶಾಲೆಗಳನ್ನು ಪ್ರಾರಂಭಿಸಿದವು. ಅವುಗಳಲ್ಲಿ ೧೯೧೯ ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದ ಅ.ನ. ಸುಬ್ಬರಾವರವರ ಕಲಾಮಂದಿರವು ಪ್ರಾರಂಭಗೊಂಡು ಕಲಾ ಶಿಕ್ಷಣಕ್ಕೆ ಹೆಚ್ಚಿನ ಮಹತ್ವಕೊಡುತ್ತಾ ಬಂದಿತು. ಅದೇ ರೀತಿಯಲ್ಲಿ ಧಾರವಾಡದಲ್ಲಿ ೧೯೩೫ ರಲ್ಲಿ ಪ್ರಾರಂಭವಾದ ಹಾಲಬಾವಿ ಕಲಾ ಶಾಲೆಯು, ಅದರಂತೆ ೧೯೪೧ ರಲ್ಲಿ ಟಿ.ಪಿ. ಅಕ್ಕಿಯವರು ಪ್ರಾರಂಭಿಸಿದ ವಿಜಯಕಲಾ ಮಂದಿರವು ಗದುಗಿನಲ್ಲಿ ಪ್ರಾರಂಭವಾಯಿತು. ಇವುಗಳಲ್ಲಿ ಚಿತ್ರಕಲೆಯ ಬಗ್ಗೆ ಹೊಸ ಪಠ್ಯ ಕ್ರಮವನ್ನು ಸೇರ್ಪಡಿಸಿಕೊಂಡು ಕಲಾ ಶಿಕ್ಷಣವನ್ನು ಕೊಡಲು ಪ್ರಾರಂಭಿಸಿದರು.

ಮುಂದೆ ಸ್ವಾತಂತ್ರ್ಯನಂತರದ ವರ್ಷಗಳಲ್ಲಿ ೧೯೫೧ ರಲ್ಲಿ ಎಂ.ಡಿ. ಮಿಣಜಗಿಯವರು ಹುಬ್ಬಳ್ಳಿಯಲ್ಲಿ ವಿಜಯ ಮಹಾಂತೇಶ ಕಲಾ ಮಂದಿರ ಎಂಬ ಕಲಾ ಶಾಲೆಯನ್ನು

ಪ್ರಾರಂಭಿಸಿದರು. ೧೯೬೦ ರ ಸುಮಾರಿಗೆ ಬೆಂಗಳೂರಿನಲ್ಲಿ ಎಂ.ಎಸ್, ನಂಜುಂಡರಾವರವರು ಕಲಾ ಶಾಲೆಯನ್ನು ಪ್ರಾರಂಭಿಸಿದರು. ಇದೇ ರೀತಿಯಾಗಿ ೧೯೬೪ ರಲ್ಲಿ ದಾವಣಗೆರೆಯಲ್ಲಿ ಸರ್ಕಾರಿ ಕಲೆ ಮತ್ತು ಕರಕುಶಲ ವಿದ್ಯಾಲಯ ಕಲಾ ಶಾಲೆಯು ಪ್ರಾರಂಭವಾಯಿತು. ೧೯೬೮ ರಲ್ಲಿ ಬೆಂಗಳೂರಿನಲ್ಲಿ ಆರ್. ಎಂ. ಹಡಪದರವರು ಕೆನ ಕಲಾ ಶಾಲೆಯನ್ನು ಪ್ರಾರಂಭಿಸಿದರು ಮತ್ತು ೧೯೬೬ ರಲ್ಲಿ ಮೈಸೂರಿನಲ್ಲಿ ಕಾವಾ ಕಲಾ ಶಾಲೆಗಳು ಪ್ರಾರಂಭವಾದವು. ಆ ಪ್ರಕಾರವಾಗಿ ಕರ್ನಾಟಕದ ಬೀದರ, ಗುಲ್ಬರ್ಗಾ, ಬೆಳಗಾಂ, ಮುಧೋಳ್, ಕಾರವಾರ, ಉಡುಪಿ, ತುಮಕೂರ, ಮುಂತಾದ ಹಲವಾರು ಊರುಗಳಲ್ಲಿ ಕಲಾಶಾಲೆಗಳು ಪ್ರಾರಂಭಗೊಂಡವು. ಕೆಲವೊಂದು ಕಲಾ ಶಾಲೆಗಳಲ್ಲಿ ಈಗಲೂ ಸಹ ಗುರುಕುಲ ಶಿಲ್ಪಕಲೆಯನ್ನು ಅಭ್ಯಸಿಸಲು ಕುಲಕುಲ ಪದ್ದತಿಯನ್ನು ಹೆಚ್ಚಾಗಿ ಬಳಸುವ ಪರಿಪಾಠವು ಬಂದಿದೆ. ಇವುಗಳಲ್ಲಿ ಸಾಂಪ್ರದಾಯಕ ಶೈಲಿಯಲ್ಲಿ ಶಿಲ್ಪಗಳನ್ನು ಅಭ್ಯಸಿಸಲು ಅನುವು ಮಾಡಿಕೊಡಲಾಗುತ್ತದೆ. ದೇವನಹಳ್ಳಿ, ಶಿವಾರ ಮುಂತಾದ ಸ್ಥಳಗಳಲ್ಲಿ ಈ ಪದ್ಧತಿಯಲ್ಲಿ ಕಲಾ ಶಿಕ್ಷಣವನ್ನು ಕೊಡುತ್ತಿರುವದು ಕಾಣಬಹುದಾಗಿದೆ.

ಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯದಲ್ಲಿ ಆಗಿನ ಕಾಲದಲ್ಲಿ ಅಂದರೆ ಹಳೆಯ ಮೈಸೂರು ರಾಜ್ಯದಲ್ಲಿ ಲಲಿತಕಲೆ ಹಾಗೂ ಕರಕುಶಲ ವೃತ್ತಿಯನ್ನು ಆಧರಿಸಿದ ಚಿತ್ರಕಲಾ ಶಿಕ್ಷಣದ ತರಬೇತಿಯನ್ನು ನೀಡಲಾಗುತ್ತಿತ್ತು. ಸ್ವಾತಂತ್ರ ನಂತರದಲ್ಲಿ ರಾಜ್ಯಗಳು ಪುನರ್ ವಿಂಗಡನೆಗಿಂತ ಮೊದಲು ಕಲಾಭ್ಯಾಸ ಕೈಗೊಳ್ಳಲು ಮುಂಬೈ, ಹೈದರಾಬಾದ, ಕಲ್ಕತ್ತಾ, ಮದ್ರಾಸ ಮುಂತಾದ ಕಡೆಗಳಲ್ಲಿರುವ ಕಲಾ ಶಾಲೆಗಳನ್ನು ಅವಲಂಭಿಸಿರಬೇಕಾಗಿರುತ್ತಿತ್ತು. ಆಗಿನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕೆಲವೊಂದು ಕಲಾಶಾಲೆಗಳ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿರಲಿಲ್ಲ. ಅವುಗಳ ಸ್ಥಿತಿ–ಗತಿಗಳು ಶೋಚನೀಯ ಪರಿಸ್ಥಿತಿಯಲ್ಲಿತ್ತು. ಇವುಗಳನ್ನು ಬಿಟ್ಟರೆ ಕಲಾಭ್ಯಾಸವನ್ನು ಮಾಡಲು ದೂರದಲ್ಲಿರುವ ಕಲಾಶಾಲೆಗಳಿಗೆ ಹೋಗಬೇಕಾಗುತ್ತಿತ್ತು. ಇವುಗಳು ಕೆಲವೊಂದು ಶ್ರೀಮಂತ ವರ್ಗದವರಿಗೆ ಹಾಗೂ ಅನುಕೂಲಸ್ಥರಿಗೆ ಮಾತ್ರ ಸಾಧ್ಯವಾಗುತ್ತಿತ್ತು. ಈ ಒಂದು ಸಮಸ್ಯೆಯನ್ನು ಪರಿಹರಿಸಲು ಕಲಾಭಿಮಾನಿಗಳು ಹಾಗೂ ಕಲಾಸಕ್ತರಿಗೆ ಒಂದು ಸರಕಾರಿ ಕಲಾ ಶಾಲೆಯನ್ನು ಪ್ರಾರಂಭಿಸಬೇಕೆನ್ನುವ ಒಂದು ಬೇಡಿಕೆಯನ್ನು ಹಲವರು ಸರಕಾರದ ಮುಂದೆ ಇಟ್ಟರು. ಇದನ್ನು ಪರಿಗಣನೆಗೆ ತೆಗೆದುಕೊಂಡ ಸರಕಾರ ಕಲಾಭ್ಯಾಸಕ್ಕೆ ಇಲ್ಲಿರುವ ಸಮಸ್ಯೆಯನ್ನು ಗಮನಿಸಿ ಈ ನಾಡಿನ ಸಂಸ್ಕೃತಿ ಹಾಗೂ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರಲು ಗಮನ ಹರಿಸಿತು. ಅದರಂತೆ ಆಗಿನ ಮೈಸೂರು ಸರಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಒಂದು ಕಲಾಶಾಲೆಯನ್ನು ಪ್ರಾರಂಭಿಸಲು ಆಸಕ್ತಿ ತೋರಿಸಿತು. ಈ ಪ್ರಸ್ತಾಪದ ಹಿಂದೆ ಡಾ॥ ಎಂ. ವಿ. ಮಿಣಜಗಿಯವರು ಹೆಚ್ಚಿನ ಆಸಕ್ತಿ ವಹಿಸಿದ್ದು ಇವರು ಈ ವಿಷಯವನ್ನು ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡ ವ್ಯಕ್ತಿಯಾಗಿದ್ದರು. ಈ ಕಲಾ ಶಾಲೆಯ ಪ್ರಸ್ತಾವನೆಯನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಗೆ ವಹಿಸಿದ್ದರು. ಮುಂದೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯು ಕಲಾಶಿಕ್ಷಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಬದಲಾಗಿ. ತಾಂತ್ರಿಕ ಶಿಕ್ಷಣ

ಇಲಾಖೆಗೆ ಸೇರಿಸಿದರು. ಈ ಎಲ್ಲ ಮಾಹಿತಿಗಳನ್ನು ಸರಿಯಾಗಿ ಪರಿಶೀಲನೆ ಮಾಡಿ ಈ ಕಲಾ ಶಾಲೆಯನ್ನು ರಾಜ್ಯದ ಕೇಂದ್ರ ಸ್ಥಾನವಾದ ದಾವಣಗೆರೆಯಲ್ಲಿ ಪ್ರಾರಂಭಿಸಬೇಕೆಂದು ನಿರ್ಣಯಿಸಿದರು. ದಾವಣಗೆರೆಯು ಎಲ್ಲ ರೀತಿಯ ಮೂಲಭೂತ ಸೌಕರ್ಯವನ್ನುಹೊಂದಿದ್ದು ರಾಜ್ಯದ ಕೇಂದ್ರ ಬಿಂದುವಾಗಿರುವುದರಿಂದ ೧೯೬೪-೬೫ ರ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಬೇಕೆಂದು ಆದೇಶ ಹೊರಡಿಸಿದರು. ಕರ್ನಾಟಕ ಸರ್ಕಾರವು ಈ ಕಲಾ ಶಾಲೆಯನ್ನು ಉನ್ನತ ಮಟ್ಟದಲ್ಲಿ ಬೆಳೆಸುವ ದೃಷ್ಟಿಯಿಂದ ಆಗ ಚಿತ್ರಕಲೆಯಲ್ಲಿ ತರಬೇತಿ ನೀಡಲು ಮುಂಚೂಣಿಯಲ್ಲಿದ್ದ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ‌ನ ಮಾದರಿಯಲ್ಲಿ ಈ ಕಲಾ ಶಾಲೆಗೆ ಬೇಕಾದ ವಿವಿಧ ವಿಭಾಗಗಳಾದ ಗ್ರಾಫಿಕ್, ಶಿಲ್ಪಕಲೆ, ಲಲಿತಕಲೆ ಹಾಗೂ ಅನ್ವಯಿಕಕಲೆಗೆ ಬೇಕಾಗುವ ಹಾಗೂ ಆಡಳಿತ ಕಛೇರಿ, ಸಭಾಂಗಣ ಕಟ್ಟಡ, ವಸ್ತು ಸಂಗ್ರಹಾಲಯ, ಪ್ರಾಚಾರ್ಯರ ಹಾಗೂ ಸಿಬ್ಬಂದಿ ವರ್ಗದವರ ವಸತಿಗಳು ಹೀಗೆ ಅನೇಕ ರೀತಿಯ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ದಾವಣಗೆರೆ ತಾಲ್ಲೂಕ ಶಾಮನೂರ ಗೋಮಾಳ ಜಮೀನಿನಲ್ಲಿ ೨೩ ಎಕರೆಯಷ್ಟು ನಿವೇಶನವನ್ನು ೧೯೬೬ ರಲ್ಲಿ ಈ ಕಲಾ ಶಾಲೆಯನ್ನು ಪ್ರಾರಂಭಿಸಲು ಮಂಜೂರು ಮಾಡಿತು. ಅಲ್ಲಿ ಈ ಕಲಾ ಶಾಲೆಯ ಕಟ್ಟಡವನ್ನು ನಿರ್ಮಾಣ ಮಾಡಿ, ೧೯೬೪ ರಲ್ಲಿ ಸರಕಾರಿ ಚಿತ್ರಕಲೆ ಮತ್ತು ಕರಕುಶಲ ಶಾಲೆಯನ್ನು ಅಂದಿನ ಮೈಸೂರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ದಿ. ಶ್ರೀ. ಎಸ್. ನಿಜಲಿಂಗಪ್ಪನವರು ದಾವಣಗೆರೆಯಲ್ಲಿ ಉದ್ಘಾಟಿಸಿದರು.

ಈ ವಿದ್ಯಾಲಯವು ಆರಂಭದ ದಿನಗಳಲ್ಲಿ ಹಲವಾರು ತೊಂದರೆಗಳನ್ನು ಅನುಭವಿಸಬೇಕಾಯಿತು. ಇದರಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳ ಕೊರತೆ ತುಂಬಾ ಎದ್ದು ಕಾಣುತ್ತಿತ್ತು. ಈ ವಿದ್ಯಾಲಯವು ಬಡತನದ ಮನೆತನಗಳಿಂದ ಬಂದಂತಹ ಹಲವಾರು ವಿದ್ಯಾರ್ಥಿಗಳನ್ನು ತನ್ನ ತೆಕ್ಕೆಯಲ್ಲಿ ಪೋಷಿಸುತ್ತಾ ಕಲಾ ಶಿಕ್ಷಣವನ್ನು ನೀಡಲು ಪ್ರಾರಂಭಿಸಿತು. ಇಂತಹ ಹೀನಾಯ ಪರಿಸ್ಥಿತಿಯಲ್ಲಿರುವ ಕಲಾವಿದ್ಯಾರ್ಥಿಗಳ ಸ್ಥಿತಿಯನ್ನು ನೋಡಿಕೊಂಡು ದಾವಣಗೆರೆ ನಗರಸಭೆ ೨೫ ರೂಪಾಯಿಗಳನ್ನು ಹಾಗೂ ಕರ್ನಾಟಕ ಸರಕಾರವು ೧೫ ರೂಪಾಯಿಗಳ ಶಿಷ್ಯವೇತನವನ್ನು ಮಾಸಿಕವಾಗಿ ನೀಡಲಾರಂಭಿಸಿತು. ಇದರ ಜೊತೆ ಜೊತೆಯಲ್ಲಿ ಕಲಾ ಶಿಕ್ಷಣಕ್ಕೆ ಬೇಕಾಗುವ ಕಲಾ ಸಾಮಗ್ರಿಗಳಾದ ಪೇಪರ, ವರ್ಣಗಳು ಹಾಗೂ ಬೋರ್ಡ ಮುಂತಾದವುಗಳನ್ನು ಸಂಪೂರ್ಣವಾಗಿ ಉಚಿತವಾಗಿ ನೀಡಿ ಕಲಾ ವಿದ್ಯಾರ್ಥಿಗಳು ಕಲಾಭ್ಯಾಸವನ್ನು ಮಾಡುವಂತೆ ಪ್ರೇರೆಪಿಸಿತು.

ಮೊದಲು ಅನ್ವಯಿಕ ಕಲೆ ಹಾಗೂ ವರ್ಣ ಚಿತ್ರಕಲೆ ಎಂಬ ಎರಡು ವಿಭಾಗಗಳನ್ನು ಪ್ರಾರಂಭಿಸಿದರು ಹಾಗೂ ಕಲಾ ವಿದ್ಯಾರ್ಥಿಗಳಿಗೆ ಕರಕುಶಲ ತರಬೇತಿಗಳಾದ ಫೋಟೋಗ್ರಾಫಿ ಅಥೋಗ್ರಾಫ್ ಮುಂತಾದ ವಿಷಯಗಳಲ್ಲಿ ತರಬೇತಿಯನ್ನು ನೀಡಲಾರಂಭಿಸಿತು. ಪ್ರತಿಯೊಂದು ಬ್ಯಾಚ್‌ನಲ್ಲಿ ಹದಿನೈದು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಒಟ್ಟು ಮುವತ್ತು ವಿದ್ಯಾರ್ಥಿಗಳು

ಡಿಪ್ಲೋಮಾ ಪ್ರವೇಶವನ್ನು ಪಡೆಯಲು ಅವಕಾಶ ಕಲ್ಪಿಸಿದರು. ಈ ಕಲಾ ವಿದ್ಯಾರ್ಥಿಗಳಾಗಿ ಮೊದಲ ಎರೆಡು ವರ್ಷಗಳ ತರಬೇತಿಯನ್ನು ಪ್ರಿಪರೇಟರಿ ಎಂದು ನಂತರ ಮುಂದಿನ ಮೂರು ವರ್ಷಗಳನ್ನು ಡಿಪ್ಲೋಮಾ ಎಂದು ಮಾನ್ಯತೆಯನ್ನು ನೀಡಿ ಒಟ್ಟು ಐದು ವರ್ಷದ ಡಿಪ್ಲೋಮಾ ಪದವಿಯನ್ನು ನೀಡಲಾರಂಭಿಸಿದರು. ಬೋಧನಾ ಸಿಬ್ಬಂದಿಯಾಗಿ ಒಬ್ಬ ಪ್ರಾಚಾರ್ಯರನ್ನು ನೇಮಿಸಿ, ವಿಭಾಗ ಮುಖ್ಯಸ್ಥರುಗಳನ್ನಾಗಿ ಲಲಿತಕಲೆಯಿಂದ ಒಬ್ಬರನ್ನು ಹಾಗೂ ಅನ್ವಯಿಕ ಕಲಾ ವಿಭಾಗದಿಂದ ಒಬ್ಬರನ್ನು ಒಟ್ಟು ಇಬ್ಬರು ವಿಭಾಗ ಮುಖ್ಯಸ್ಥರನ್ನು ನೇಮಕ ಮಾಡಿದರು. ಅದರಂತೆ ಮೂರು ಜನ ಉಪನ್ಯಾಸಕರನ್ನು ಹಾಗೂ ೭ ಜನ ಸಹಾಯಕರನ್ನು ನೇಮಕ ಮಾಡಿ ಕಲಾ ಶಾಲೆಯ ಆಡಳಿತವನ್ನು ನೋಡಿಕೊಳ್ಳಲು ಅವಶ್ಯಕತೆಯುಳ್ಳ ಆಡಳಿತ ಸಿಬ್ಬಂಧಿಯನ್ನು ನೇಮಕ ಮಾಡಿತು. ಮುಂದೆ ಈ ಕಲಾ ಶಾಲೆಯು ಸುಮಾರು ವರ್ಷ ವಿದ್ಯಾರ್ಥಿಗಳಿಗೆ ವರ್ಣ ಚಿತ್ರಕಲೆ ಹಾಗೂ ಅನ್ವಯಿಕ ಕಲೆಯಲ್ಲಿ ತರಬೇತಿಯನ್ನು ನೀಡುತ್ತಾ ಬಂದಿತು.

ಮುಂದೆ ೧೯೯೨ ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಬೇರ್ಪಟ್ಟು ಕುವೆಂಪು ವಿಶ್ವವಿದ್ಯಾನಿಲಯ ಘಟಕ ಕಾಲೇಜಾಗಿ ಹಸ್ತಾಂತರಗೊಂಡಿತು. ಈಗ ಇದು ಕುವೆಂಪು ವಿಶ್ವವಿದ್ಯಾನಿಲಯ ಲಲಿತಕಲಾ ಮಹಾವಿದ್ಯಾಲಯವಾಗಿ ಹೆಸರನ್ನು ಪಡೆದುಕೊಂಡಿದೆ. ಈ ಕಲಾ ಶಾಲೆಯು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಲಾವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಡಿಪ್ಲೋಮಾ ಪದವಿಯನ್ನು ಮಾನ್ಯತೆ ಮಾಡಿ ಈಗ ಪದವಿಯನ್ನು ಕೊಡಲಾರಂಭಿಸಿದೆ. ಈಗ ಪೇಂಟಿಂಗ್ ಹಾಗೂ ಅನ್ವಯಿಕ ಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಾರಂಭಿಸಿದೆ. ಆವಾಗ ಇದ್ದ ಚಿತ್ರಕಲೆ ಹಾಗೂ ಅನ್ವಯಿಕ ಕಲೆ ವಿಭಾಗಗಳ ಜೊತೆಯಲ್ಲಿ ಗ್ರಾಫಿಕ್ ವಿಭಾಗ ಮತ್ತು ಶಿಲ್ಪಕಲೆ ವಿಭಾಗ ಎಂಬ ಇನ್ನೆರಡು ಹೆಚ್ಚಿನ ವಿಭಾಗಗಳನ್ನು ಸೇರಿಸಿ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಅನುವು ಮಾಡಿಕೊಡಲಾಯಿತು. ಇದರ ಜೊತೆಯಲ್ಲಿ ಈಗಿನ ಕಾಲಾನು ಸಂಧರ್ಭಕ್ಕೆ ಅನುಗುಣವಾಗುವಂತೆ ಕಂಪ್ಯೂಟರನಲ್ಲಿಯೂ ಹೆಚ್ಚಿನ ತರಬೇತಿಯನ್ನು ನೀಡಲಾಗುತ್ತಿದೆ. ಈ ಕಲಾ ಶಾಲೆಯಲ್ಲಿ ಈಗ ಒಟ್ಟು ನಾಲ್ಕು ವಿಭಾಗಗಳನ್ನು ತೆರೆದು ವರ್ಣಚಿತ್ರಕಲೆ, ಅನ್ವಯಿಕ ಕಲೆ, ಗ್ರಾಫಿಕ್ ಕಲೆ ಹಾಗೂ ಶಿಲ್ಪಕಲೆ ಎಂಬ ನಾಲ್ಕು ವಿಷಯಗಳಲ್ಲಿ ತರಬೇತಿಯನ್ನು ಕೊಡಲಾರಂಭಿಸಿದೆ.

ಈ ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಮೊದಲು ಎರಡು ವರ್ಷದ ಪದವಿ ಪೂರ್ವ ಹಂತದಲ್ಲಿ ಕಲಾವಿದ್ಯಾರ್ಥಿಗಳಿಗೆ ರೇಖಾಚಿತ್ರ, ವರ್ಣಚಿತ್ರಕಲೆ, ಶಿಲ್ಪಕಲೆ, ಅನ್ವಯಿಕ ಕಲೆ ಹಾಗೂ ಗ್ರಾಫಿಕ್ ಕಲೆಗಳಲ್ಲಿ ವಿದ್ಯಾಭ್ಯಾಸ ನೀಡಲಾಗುತ್ತದೆ. ಅದರಂತೆ ಇವುಗಳಿಗೆ ಸಂಬಂಧ ಪಟ್ಟಂತೆ ಭಾವಚಿತ್ರ, ವಸ್ತು ಚಿತ್ರಣ, ಅಂಗರಚನಾ ಶಾಸ್ತ್ರ, ಉಬ್ಬುಗೆತ್ತನೆ, ಲಿನೋಕಟ್ ಹಾಗೂ ಉಡ್‌ಕಟ್ಸ್, ಕಲಾ ಇತಿಹಾಸ ಮುಂತಾದ ವಿಷಯಗಳನ್ನು ಕಲಿಸಲಾಗುತ್ತದೆ. ಭಾಷಾ ವಿಷಯವನ್ನು ಇಲ್ಲಿಯ ಹಂತದಲ್ಲಿ ಕಲಿಸಲಾಗುವದು. ಕನ್ನಡ ಹಾಗೂ ಇಂಗ್ಲೀಷ್ ವಿಷಯಗಳು

ಭಾಷಾ ವಿಷಯಗಳಾಗಿದ್ದು ಇದರಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ಭೋಧನೆಯನ್ನು ಮಾಡಲಾಗುತ್ತದೆ.

ವರ್ಣಚಿತ್ರಕಲೆಯ ಪದವಿ ವಿಭಾಗಗಳಲ್ಲಿ ವ್ಯಕ್ತಿ ಚಿತ್ರಣ, ಭಾವ ಚಿತ್ರಣ. ವರ್ಣಸಂಯೋಜನೆ, ಮುಂತಾದವುಗಳ ಕುರಿತಾಗಿ ಕಲಿಸುವುದಲ್ಲದೇ ಅವುಗಳಲ್ಲಿ ಕಲಾವಿದನ ಭಾವನೆಗಳನ್ನು ವ್ಯಕ್ತ ಪಡಿಸುವ ವಿಧಾನಗಳನ್ನು ತಿಳಿಸಲಾಗುವುದು. ವ್ಯಕ್ತಿ ಚಿತ್ರಣ ಹಾಗೂ ಭಾವ ಚಿತ್ರಣಗಳಲ್ಲಿ ಆ ರೂಪದರ್ಶಿಯ ನೋಡಿದಾಗ ಕಲಾವಿದನಲ್ಲಿ ಉಂಟಾಗುವ ಭಾವನೆಗಳ ಕುರಿತಾಗಿಯೂ ಚಿತ್ರಿಸುವವನ್ನು ಕಲಿಸಲಾಗುವುದು. ಸೌಂದರ್ಯ ಶಾಸ್ತ್ರ ಹಾಗೂ ಸಾಮಾಜದಲ್ಲಿ ಪರಿವರ್ತನೆಯನ್ನು ತರುವಲ್ಲಿ ಕಲಾವಿದನ ಪಾತ್ರದ ಕುರಿತಾಗಿಯೂ ಅಭ್ಯಸಿಸಲಾಗುತ್ತದೆ.

ವರ್ಣಗಳ ಸಂಯೋಜನೆ ಅವುಗಳನ್ನು ಬಳಸು ವಿಧ ಆಕಾರಗಳ ಹೊಂದಾಣಿಕೆ, ಅವುಗಳನ್ನು ಉಪಯೋಗಿಸುವ ತಂತ್ರಗಳು ಹೀಗೆ ಹಲವಾರು ವಿಧಗಳಲ್ಲಿ ಅಧ್ಯಯನ ಮಾಡಿಸಲಾಗುವುದು.

ಅದೇ ರೀತಿಯಾಗಿ ಮುದ್ರಣ ಕಲೆ ವಿಭಾಗದಲ್ಲಿಯೂ ಹಲವಾರು ರೀತಿಯ ತಂತ್ರಗಳನ್ನು ಬಳಸಿ ಮುದ್ರಣ ಮಾಡುವ ಬಗೆಯನ್ನು ಕಲಿಸಲಾಗುವುದು, ಪುರಾತನ ಮುದ್ರಣ ಕಲೆಯಾದ ಕಲ್ಲಚ್ಚು ಮುದ್ರಣ, ಲಿನೋಕಟ್, ವುಡ್‌ಕಟ್ಟ್, ಮುಂತಾದ ವಿಷಯಗಳಲ್ಲಿ ಮುದ್ರಣವನ್ನು ಮಾಡುವ ಬಗೆಯನ್ನು ಕಲಿಸಲಾಗುತ್ತದೆ. ಸ್ಕ್ರೀನ ಪ್ರಿಂಟಿಂಗ್ ಹಾಗೂ ಎಚ್ಚಿಂಗ್‌ನಲ್ಲಿಯೂ ಸಹ ತರಬೇತಿಯನ್ನು ನೀಡಲಾಗುತ್ತದೆ. ಈ ವಿಷಯಗಳಲ್ಲಿ ತಂತ್ರಗಾರಿಕೆಯು ಅತ್ಯಂತ ಪ್ರಮುಖ ಪಾತ್ರವಹಿಸುವುದರಿಂದ ಇಲ್ಲಿ ತಂತ್ರಗಳನ್ನು ಬಳಸುವ ವಿಧಗಳಿಗೆ ಹೆಚ್ಚಿನ ಪ್ರಧಾನ್ಯತೆಯನ್ನು ನೀಡಿ ಮುದ್ರಣ ಮಾಡುವ ವಿಧಗಳನ್ನು ಕಲಿಸಲಾಗುವುದು.

ಶಿಲ್ಪಕಲಾ ವಿಭಾಗದಲ್ಲಿ ಅಂದರೆ ಶಿಲ್ಪಕಲೆ ಎಂಬ ಹೆಸರಿಗೆ ತಕ್ಕಂತೆ ಈ ವಿಭಾಗದಲ್ಲಿ ಶಿಲ್ಪರಚನೆಯನ್ನು ಮಾಡುವ ವಿಧಾನಗಳನ್ನು ಕಲಿಸಲಾಗುವುದು. ಶಿಲ್ಪಕಲೆಯನ್ನು ರಚನೆ ಮಾಡುವಲ್ಲಿ ಬೇಕಾಗುವ ಮಾಧ್ಯಮಗಳಾದ ಮಣ್ಣು, ಕಟ್ಟಿಗೆ, ಕಲ್ಲು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮುಂತಾದವುಗಳಿಂದ ಶಿಲ್ಪ ರಚನೆ ಮಾಡುವ ವಿಧಾನಗಳನ್ನು ಕಲಿಸಲಾಗುತ್ತದೆ. ಈ ಮಾಧ್ಯಮಗಳಿಂದ ವ್ಯಕ್ತಿ ಚಿತ್ರಣ, ಅಲಂಕಾರಿಕ ರಚನೆಗಳು ಮುಂತಾದವುಗಳನ್ನು ರಚನೆ ಮಾಡುವದನ್ನು ಭೋಧಿಸಲಾಗುವುದು.

ಇಂದಿನ ಕಾಲಮಾನಕ್ಕೆ ತಕ್ಕಹಾಗೆ ಈಗ ಬಳಕೆಯಲ್ಲಿರುವ ಹಗುರ ಮಾಧ್ಯಮಗಳಾದ ಫೈಬರ್‌ಗ್ಲಾಸ್, ಪ್ಲಾಸ್ಟಿಕ್ ಇತ್ಯಾದಿಗಳಲ್ಲಿ ಪ್ರತಿಕೃತಿಗಳನ್ನು, ಬಿತ್ತಿ ಶಿಲ್ಪಗಳನ್ನು ತಯಾರಿಸುವ ಬಗೆ ಬಗೆಯ ವಿಧಾನಗಳನ್ನು ಹಾಗೂ ಬಳಸುವ ಕ್ರಮಗಳನ್ನು ಕುರಿತು ತಿಳಿಸಲಾಗುವುದು. ಇವುಗಳ ಜೊತೆಜೊತೆಯಲ್ಲಿ ಶಿಲ್ಪಕಲೆಯ ಪರಂಪರೆ ಐತಿಹಾಸಿಕ ಹಿನ್ನೆಲೆ ಹಾಗೂ ನಡೆದುಕೊಂಡು ಬಂದ

ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು.

ಅನ್ವಯಿಕ ಕಲೆ ವಿಭಾಗದಲ್ಲಿ ಹೊಸ ಬಗೆಯ ಅಕ್ಷರಗಳ ವಿನ್ಯಾಸ, ಪ್ರಚಾರಕ್ಕಾಗಿ ಬಳಸುವ ಬಿತ್ತಿ ಚಿತ್ರವಿನ್ಯಾಸ, ಛಾಯಾ ಚಿತ್ರ ವಸ್ತುಗಳ ಸಂಯೋಜನೆ ಹಾಗೂ ಅವುಗಳು ಜನರನ್ನು ತಲುಪಿಸುವ ರೀತಿ, ಹೊಸ ಹೊಸದಾಗಿ ಬರುವಂತಹ ವಸ್ತುಗಳನ್ನು ಜನರಲ್ಲಿ ಅವುಗಳ ಬಗ್ಗೆ, ಅವುಗಳ ಉಪಯೋಗಗಳ ಬಗ್ಗೆ ಮಾಹಿತಿಯನ್ನು ತಿಳಿಸುವಂತಹ ಬಿತ್ತಿ ಚಿತ್ರ ವಿನ್ಯಾಸ ಹಾಗೂ ಹಲವಾರು ಬಗೆಯ ಉತ್ಪಾದನಾ ವಿನ್ಯಾಸದ ಬಗ್ಗೆ ಮಾಹಿತಿಯನ್ನು ನೀಡಲಾಗುವುದು. ಈ ಆಧುನಿಕ ಯುಗದಲ್ಲಿ ಬೇಕಾಗುವಂತಹ ಕಂಪ್ಯೂಟರನ ಬಗ್ಗೆ ಮಾಹಿತಿ ನೀಡಿ ಅದರಲ್ಲಿ ಪ್ರಚಾರಕ್ಕಾಗಿ ಬೇಕಾಗುವಂತಹ ಅಲಂಕರಣದ ಚಿತ್ರದ ಬಗ್ಗೆ ಹಾಗೂ ಅವುಗಳನ್ನು ಬಳಸುವ ವಿಧಾನವನ್ನು ಕಲಿಸಲಾಗುವುದು.

ಒಂದು ಶಾಲಾ ಕಾಲೇಜಿಗೆ ವಿದ್ಯಾಭ್ಯಾಸ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾಗಿ ಅವುಗಳ ಬಗ್ಗೆ ತಿಳಿದುಕೊಳ್ಳುವುದು ಬಹುಮುಖ್ಯವಾಗಿದೆ. ಇವುಗಳನ್ನು ಪಡೆದುಕೊಳ್ಳುವದು ಗ್ರಂಥಾಲಯಗಳಿಂದ ಮಾತ್ರ ಸಾಧ್ಯ. ಈ ವಿಶ್ವವಿದ್ಯಾನಿಲಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಒಂದು ಗ್ರಂಥಾಲಯವಿದ್ದು ಅದು ಸುಮಾರು ೬೦೦೦ ದಷ್ಟು ಗ್ರಂಥಗಳನ್ನು ಹೊಂದಿದೆ. ಇಲ್ಲಿಯ ವಿಷಯಗಳಿಗೆ ತಕ್ಕಂತೆ ಶಿಲ್ಪಕಲೆ, ಚಿತ್ರಕಲೆ, ಛಾಯಾಚಿತ್ರಕಲೆ, ಗಣಕತಂತ್ರ, ಅನ್ವಯಿಕ ಕಲೆ ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು ತಿಳಿಸಲು ತುಂಬಾ ಸಹಕಾರಿಯಾಗಿದೆ. ಈ ಕಲೆಗಳ ಹಿನ್ನೆಲೆ, ಅದು ಬೆಳೆದು ಬಂದ ಬಗೆ, ಅವುಗಳ ತಂತ್ರ ಅವುಗಳಲ್ಲಿ ಪರಿಣಿತರಾದ ಕಲಾವಿದರು ಹಾಗೂ ಅವರ ಜೀವನ ವಿಧಾನ ಮುಂತಾದವುಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವದರಲ್ಲಿ ಇವು ಹೆಚ್ಚಿನ ಸಹಕಾರಿಯಾಗಿವೆ. ಅದಲ್ಲದೆ ವಿದ್ಯಾರ್ಥಿಗಳಿಗೆ ವಾರ ಪತ್ರಿಕೆ, ದಿನಪತ್ರಿಕೆ, ಮಾಸ ಪತ್ರಿಕೆ ಮುಂತಾದವುಗಳನ್ನು ಒದಗಿಸುತ್ತಾ ಬಂದಿದೆ. ಹಲವಾರು ಆಧ್ಯಾತ್ಮ ವಿಷಯಗಳು ಹಾಗೂ ಧಾರ್ಮಿಕ ವಿಷಯಗಳನ್ನು ತಿಳಿಸುವುಂಥಹ ಹಲವಾರು ಗ್ರಂಥಗಳಿವೆ. ಇವುಗಳು ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನಾರ್ಜನೆಗೆ ಕಾರಣವಾಗಿವೆ.

ಈ ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ಪ್ರತಿ ವರ್ಷವೂ ವಿದ್ಯಾರ್ಥಿಗಳಿಗೆ ಹೊರಾಂಗಣ ಚಿತ್ರಿಕರಣ ಶಿಬಿರವನ್ನು ಏರ್ಪಡಿಸಲಾಗುತ್ತದೆ. ಇದರಿಂದ. ವಿದ್ಯಾರ್ಥಿಗಳಲ್ಲಿ ಹಲವಾರು ವಿಷಯಗಳಲ್ಲಿ ಹೆಚ್ಚಿನ ಜ್ಞಾನಾರ್ಜನೆಯಾಗುತ್ತದೆ. ಪದವಿಯ ವಿದ್ಯಾರ್ಥಿಗಳನ್ನು ಮಾತ್ರ ಈ ಹೊರಾಂಗಣ ಶಿಬಿರಕ್ಕೆ ಕರೆದುಕೊಂಡು ಹೋಗಲಾಗುವದು. ಪಟ್ಟದ ಕಲ್ಲು, ಬಾದಾಮಿ, ಐಹೊಳೆ, ಬೇಲೂರು-ಹಳೆಬೀಡು ಹಾಗೂ ಹಂಪಿ ಮುಂತಾದ ಐತಿಹಾಸಿಕ ಸ್ಥಳಗಳಲ್ಲಿ ಇಲ್ಲಿಯ ಕಲಾ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಲಾಗುವುದು. ಇಲ್ಲಿ ಇವರಿಗೆ ನಿಸರ್ಗಚಿತ್ರ, ಶಿಲ್ಪಕಲೆ, ವಾಸ್ತು ಶಿಲ್ಪ ಮುಂತಾದವುಗಳ ಬಗ್ಗೆ ತಿಳಿಸಿಕೊಟ್ಟು ಅವುಗಳನ್ನು ಅಧ್ಯಯನ ಮಾಡುವ ವಿಧಾನದ ಬಗ್ಗೆ ವಿವರಿಸಲಾಗುವುದು. ಇವುಗಳಿಂದ ಕಲಾ

ವಿದ್ಯಾರ್ಥಿಗಳಿಗೆ ನಮ್ಮ ನಾಡಿನ ಸಂಸ್ಕೃತಿ ಆಚಾರ-ವಿಚಾರ ಮುಂತಾದವುಗಳ ಬಗ್ಗೆ ಅರಿವುಂಟಾಗುವದಲ್ಲದೆ ಅವುಗಳನ್ನು ಕೃತಿಯಲ್ಲಿ ನೋಡಿ ಆನಂದಿಸಬಹುದಾಗಿದೆ.

ಒಂದು ಕಲಾ ಶಾಲೆಯು ಉತ್ತುಂಗ ಸ್ಥಿತಿಯಲ್ಲಿ ಏರಬೇಕಾದಲ್ಲಿ ವಿದ್ಯಾರ್ಥಿಗಳು ಮಾತ್ರವಲ್ಲದೇ ಅಲ್ಲಿ ವಿದ್ಯಾರ್ಥಿಗಳಿಗೆ ಭೋಧನೆ ಮಾಡುತ್ತಿರುವ ಶಿಕ್ಷಕರದೂ ಅಷ್ಟೇ ಪ್ರಾಮುಖ್ಯತೆಯಿದೆ. ಈ ಕಲಾ ಶಾಲೆಯು ಆರಂಭದಿಂದಲೇ ಹಲವಾರು ಪ್ರಖ್ಯಾತ ರಾಷ್ಟ್ರೀಯ, ಅಂತರಾಷ್ಟ್ರೀಯ ಕಲಾ ಶಿಕ್ಷಕರನ್ನು ಹೊಂದಿದೆ. ಅವರುಗಳೆಂದರೆ.

೧. ಶ್ರೀ ದಿ.ವೈ. ಸುಬ್ರಮಣ್ಯರಾಜು.
೨. ಶ್ರೀ ಬಿ.ಆರ್. ಪಾಟೀಲ್.
೩. ಶ್ರೀ ವೈ.ಹೆಚ್. ಸೂಗೂರ್.
೪. ಶ್ರೀ ವಿ.ಬಿ. ಹಿರೇಗೌಡರ.
೫. ಶ್ರೀ ಕೆ.ಎಸ್. ಶಿರ್ಕೆ.
೬. ಶ್ರೀ ಹೆಚ್.ಎನ್. ಕೃಷ್ಣಮೂರ್ತಿ.
೭. ಶ್ರೀ ಸಿ.ವಿ. ರಾಯ್ಕರ್.
೮. ಶ್ರೀ ದಿ. ಕಂಠೆಪ್ಪಗೌಡರ.
೯. ಶ್ರೀ ದಿ. ಶಂಕರ್ ಪಾಟೀಲ್.
೧೦. ಶ್ರೀ ದಿ. ಟಿ.ವಿ. ಗಣೇಶಗುಡಿ.
೧೧. ಶ್ರೀ ಟಿ.ಬಿ. ಸೊಲಬಕ್ಕನವರ.
೧೨. ಶ್ರೀ ಜೆ. ಮಲ್ಲಿಕಾರ್ಜುನ.
೧೩. ಶ್ರೀ ದಿ. ಕಾಳಿದಾಸ್ ಪತ್ತಾರ್.
೧೪. ಶ್ರೀ ಎಲ್.ಕೆ. ಹನುಮಂತಾಚಾರ್.
೧೫. ಶ್ರೀ ವಿ. ಸೋಮಶೇಖರಪ್ಪ.
೧೬. ಶ್ರೀ ಸಿ.ಕೆ. ಶ್ರೀನಿವಾಸ್.
೧೭. ಶ್ರೀ ಬಿ.ಅರ್. ಕೊರ್ತಿ.
೧೮. ಶ್ರೀ ಶ್ರೀಮತಿ ಸೈಯಿದಾ ಬೇಗಂ.
೧೯. ಶ್ರೀ ರವೀಂದ್ರ ಕಮ್ಮಾರ್.
೨೦. ಶ್ರೀ ಜಿ. ಹೆಚ್. ಸೂಗೂರ.

ಮುಂತಾದವರು ಸೇವೆಯನ್ನು ಕಲಾ ಶಾಲೆಗೆ ಸಲ್ಲಿಸಿದ್ದಾರೆ ಹಾಗೂ ಸಲ್ಲಿಸುತ್ತಾ ಇದ್ದಾರೆ. ನಿವೃತ್ತಿ, ಸ್ವಯಂ ನಿವೃತ್ತಿಯಿಂದ, ಅಲ್ಲದೇ ಕೆಲವು ಕಾರಣಗಳಿಂದ ಅನೇಕರು ಆ ಸ್ಥಾನವನ್ನು ತ್ಯಜಿಸಿದ್ದಾರೆ. ಇದರ ಜೊತೆಯಲ್ಲಿ ತೆರವಾದ ಇವರ ಸ್ಥಾನಗಳನ್ನು ಸುಮಾರು ೧೫ ಜನ ಕಿರಿಯ

ಉಪನ್ಯಾಸಕರು ಅರೆಕಾಲಿಕ-ಗುತ್ತಿಗೆ ಆಧಾರದ ಮೇಲೆ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ಕಲಾ ಶಾಲೆಯಲ್ಲಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹೊಮ್ಮಲಾಗುತ್ತದೆ. ನಾಡಿನ ಪ್ರಖ್ಯಾತಿ ಕಲಾವಿದರಿಂದ ಹಾಗೂ ಹಲವಾರು ವಿಷಯಗಳಲ್ಲಿ ಪಾಂಡಿತ್ಯ ಪಡೆದ ವಿದ್ವಾಂಸರಿಂದ ಇಲ್ಲಿ ಪ್ರಾತಿಕ್ಷತೆ ನೀಡಲಾಗುತ್ತದೆ. ಇವುಗಳ ಜೊತೆಗೆ ವಿದ್ಯಾರ್ಥಿಗಳಿಗಾಗಿ ಸೆಮಿನಾರ್‌ಗಳನ್ನು ಸಹ ಹಮ್ಮಿಕೊಳ್ಳಲಾಗುತ್ತದೆ. ಬಂದಂತಹ ಕಲಾವಿದರಿಂದ ವಿದ್ಯಾರ್ಥಿಗಳಿಗೆ ಕಲಾ ಕೃತಿಗಳ ರಚನಾ ವಿಧಾನ, ತಂತ್ರಗಾರಿಕೆ ಮುಂತಾದವುಗಳ ಕುರಿತು ಮಾಹಿತಿಯನ್ನು ನೀಡಲಾಗುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಪ್ರತಿಷ್ಠಿತ ಸಂಸ್ಥೆಗಳ ನೆರವಿನ ಮೂಲಕ ಹಲವಾರು ವಿಚಾರ ಸಂಕೀರ್ಣ, ಪ್ರಾತಿಕ್ಷತೆಯನ್ನೂ ಸಹ ಮಾಡಿಸಲಾಗುತ್ತದೆ. ಈ ಎಲ್ಲ ಅಂಶಗಳನ್ನು ಒಳಗೊಂಡಿದೆ.

ಸಾಧನೆಯನ್ನು ಮಾಡಿದಂತಹ ಪ್ರತಿಭಾವಂತರು

ಈ ವಿದ್ಯಾಲಯದಲ್ಲಿ ಅಧ್ಯಯನ ಮಾಡಿ ತಮ್ಮ ಪ್ರತಿಭೆಯಿಂದ ರಾಜ್ಯ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಯನ್ನು ಪಡೆದು, ಔದ್ಯೋಗಿಕ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡುತ್ತಾ ತಾವು ವಿದ್ಯಾಭ್ಯಾಸ ಮಾಡಿದ ಕಲಾ ಶಾಲೆಗೂ ಹಾಗೂ ಈ ಜಿಲ್ಲೆಗೂ ಹೆಚ್ಚಿನ ಕೀರ್ತಿ ತಂದು ಕೊಡುವಲ್ಲಿ ಪಾತ್ರರಾಗಿದ್ದಾರೆ. ಅವರುಗಳಲ್ಲಿ,

೧. ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಸೇವೆಯನ್ನು ಸಲ್ಲಿಸಿ ಈಗ ನ್ಯೂಯಾರ್ಕನಲ್ಲಿ ಚಿತ್ರಕಲೆಯಲ್ಲಿ ಅಧ್ಯಯನ ಮಾಡಿರುವ ಹೆಚ್. ವಿ. ಪ್ರತಾಪಸಿಂಹ.
೨. ಲಂಡನ್ ನಲ್ಲಿ ಜಾಹೀರಾತು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಪ್ರಭಾಕರ,
೩. ಏಕನಾಥ ವೇರ್ಣೆಕರ ಹಾಗೂ ಉದಯ ವೇರ್ಣೇಕರವರು ಕುವೈತನಲ್ಲಿ ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ.
೪. ಪ್ಯಾರೀಸ್‌ನ ಶಿಷ್ಯ ವೇತನ ಪಡೆದು ಪ್ರಸ್ತುತ ಅತ್ಯಾಧುನಿಕ ತಂತ್ರಜ್ಞಾನದ ಜಾಹೀರಾತು ಸಂಸ್ಥೆಯ ಜವಾಬ್ದಾರಿಯನ್ನು ಹೊಂದಿದಂತ ಕೆ. ಎಚ್. ಉಮೇಶ್ ಕುಮಾರ್.
೫. ಅಜ್ಮನ್‌ನಲ್ಲಿರುವ ಜಾಹೀರಾತು ಸಂಸ್ಥೆಯಲ್ಲಿ ಅಬೂ ಪಟ್ಟಾಂಬಿಯವರು ಕಲಾ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
೬. ಮಸ್ಕತ್ ನಲ್ಲಿರುವ ಜಾಹೀರಾತು ಸಂಸ್ಥೆಯಲ್ಲಿರುವ ಎಸ್. ಜಿ. ಪ್ರಕಾಶ್.
೭. ಭಾರತದ ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ವಿಜೇತ ಎಚ್. ಜಿ. ಅರುಣಕುಮಾರ್ ಹಾಗೂ ಕೆ. ಆರ್. ಸುಬ್ಬಣ್ಣನವರು.

೮. ಮುಂಬೈಯ ಆರ್ಟ ಸೊಸೈಟಿಯ ಶತಮಾನೋತ್ಸವ ಪ್ರಶಸ್ತಿ ಪಡೆದಿರುವಂಥಹ ಈಶ್ವರ ಪತ್ತಾರ.

೯. ನಾಡಿನ ಖ್ಯಾತ ಕಲಾವಿಮರ್ಶಕದೆಂದು ಖ್ಯಾತರಾಗಿರುವ ಚಿ. ಸು. ಕೃಷ್ಣ ಶೆಟ್ಟಿ, ಮುಂತಾದ ಹಲವಾರು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸಮಾಡುತ್ತಾ ಈ ಜಿಲ್ಲೆಯಲ್ಲಿರುವ ಈ ಕಲಾ ಶಾಲೆಯ ಪ್ರೌಡಿಮೆಯನ್ನು ಎತ್ತಿ ಹಿಡಿಯುತ್ತಿದ್ದಾರೆ.

ಈ ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯ ರಾಜ್ಯವಲ್ಲದೆ ರಾಷ್ಟ್ರಮಟ್ಟದಲ್ಲೂ ಹಲವಾರು ಪ್ರಖ್ಯಾತ ಕಲಾವಿದರುಗಳನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ಎಲ್ಲ ದೃಷ್ಟಿ ಕೋನದಿಂದ ನೋಡಿದಾಗ ಈ ಕಲಾ ಶಾಲೆಯು ಧಾರೆಯೆರೆಯುತ್ತಿರುವ ಕಲಾಶಿಕ್ಷಣವು ಬಹುಮುಖ್ಯವೂ ಹಾಗೂ ಗಮನಾರ್ಹವಾಗಿದೆ.

– * –

ದಾವಣಗೆರೆಯಲ್ಲಿರುವ ವಿಶ್ವವಿದ್ಯಾನಿಲಯ ಲಲಿತಕಲಾ ಮಹಾವಿದ್ಯಾಲಯದ ಹೊರನೋಟ



ಮುಂಭಾಗದಲ್ಲಿರುವ ಸರಸ್ವತಿ ವಿಗ್ರಹ



ಮುಂಭಾಗದಲ್ಲಿರುವ ಜಿಂಕೆಗಳು.



ಒಳ ಪ್ರಾಂಗಣದಲ್ಲಿರುವ ಟೆರ್ರಾಕೋಟಾ ಆನೆ ಮತ್ತು ಎತ್ತುಗಳು.



ಶಿಲ್ಪ ಕಲಾಕೃತಿಗಳ ರಚನೆಯಲ್ಲಿ ವಿದ್ಯಾರ್ಥಿಗಳು



ಉಪನ್ಯಾಸಕರಿಂದ ಪ್ರಾತ್ಯಕ್ಷತೆ



ವ್ಯಕ್ತಿ ಚಿತ್ರ ರಚನೆಯಲ್ಲಿ ನಿರತರಾದ ವಿದ್ಯಾರ್ಥಿಗಳು



ಗ್ರಾಫಿಕ್ ವಿಭಾಗ



ಗಣಕಯಂತ್ರ ವಿಭಾಗ



ಉಮಾ ಚಿತ್ರಕಲಾ ಮಂದಿರ. ದಾವಣಗೆರೆ.



ರಾಜ ರವಿವರ್ಮ ಚಿತ್ರಕಲಾ ಕಾಲೇಜು. ಜಗಳೂರು.





ಅಧ್ಯಾಯ: ೫

ದಾವಣಗೆರೆ ಜಿಲ್ಲೆಯ ಚಿತ್ರ ಕಲಾವಿದರು ಮತ್ತು ಅವರ ಕೊಡುಗೆಗಳು

ಒಂದು ಪ್ರದೇಶದ ಸಂಸ್ಕೃತಿಯ ಪರಿಚಯವಾಗಬೇಕಾದರೆ ಅಲ್ಲಿಯ ಜನರ ಆಚಾರ-ವಿಚಾರ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ನೃತ್ಯ ಮುಂತಾದ ಕಲೆಗಳು ಅಲ್ಲಿಯ ಸಂಸ್ಕೃತಿಯನ್ನು ಬಿಂಬಿಸುವಲ್ಲಿ ಪ್ರಮುಖಪಾತ್ರ ವಹಿಸುತ್ತವೆ.

'ಅನೇಕ ಕಲಾವಿದರು ತಮ್ಮ ಜೀವಿತಾವಧಿಯಲ್ಲಿ ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗಿ ವಿವಿಧ ಹಾತಗಳಲ್ಲಿ ಯಶಸ್ಸನ್ನು ಪಡೆದಿರುತ್ತಾರೆ. ಆದರೆ ಸೃಜನಾತ್ಮಕ ಪ್ರತಿಭಾವಂತ ಸಮಾಜಕ್ಕೆ ಶಾಶ್ವತ ಹಾಗೂ ಮೌಲ್ಯಯುತ ಕೊಡುಗೆಯನ್ನು ಕೊಡುತ್ತಾರೆ'[೧]. ಇದೇ ರೀತಿಯಾಗಿ ಹಲವಾರು ಪ್ರದೇಶಗಳಲ್ಲಿ ಕಲಾವಿದರು ತಮ್ಮದೇ ಆದ ಮಾಧ್ಯಮದ ಮೂಲಕ ಅಲ್ಲಿಯ ಸಂಸ್ಕೃತಿ, ಪರಿಸರವನ್ನು ಎತ್ತಿ ತೋರಿಸುವಲ್ಲಿ ಕಾರಣೀಕರ್ತರಾಗಿದ್ದಾರೆ.

ದಾವಣಗೆರೆಯ ಜಿಲ್ಲೆಯಲ್ಲಿಯೂ ಸಹ ಹಲವಾರು ಚಿತ್ರಕಲಾವಿದರುಗಳಿದ್ದು ಅವರುಗಳು ತಮ್ಮದೇ ಆದ ಶೈಲಿಯಲ್ಲಿ ಕೃತಿಗಳನ್ನು ರಚಿಸಿ ಹೆಸರುವಾಸಿಯಾಗಿದ್ದಾರೆ. ಹಲವಾರು ಬಗೆಯ ಮಾಧ್ಯಮಗಳು, ಅವುಗಳನ್ನು ಬಳಸಿದ ವಿಧ, ವಿಷಯಗಳನ್ನು ವ್ಯಕ್ತ ಪಡಿಸಿದ ರೀತಿಯಿಂದ ಹಾಗೂ ಅವರುಗಳು ಭಾಗವಹಿಸಿದ ಕಲಾಶಿಬಿರ, ಕಲಾಪ್ರದರ್ಶನ ಇತ್ಯಾದಿ ಕಲಾಕ್ಷೇತ್ರದ ಚಟುವಟಿಕೆಗಳಲ್ಲಿ ಹಾಗೂ ಚರ್ಚಾಕೂಟಗಳಲ್ಲಿ ನಮ್ಮ ಜಿಲ್ಲೆಯನ್ನು ಭಾರತದ ಭೂಪಟದಲ್ಲಿ ಎತ್ತಿ ಕಾಣುವಂತೆ ಮಾಡಿದ್ದಾರೆ. ಅವರುಗಳ ಪರಿಚಯಾವಳಿಯ ಜೊತೆಗೆ ಅವರು ಮಾಡಿದ ಸಾಧನೆಗಳನ್ನು ಇಲ್ಲಿ ವಿವರಿಸಿ ಅವುಗಳನ್ನು ವಿಶ್ಲೇಷಿಸಲಾಗಿದೆ.

---

೧. ಎಸ್. ವಿಶ್ವರೂಪಾಚಾರ, ಕಲಾ ಮನೋವಿಜ್ಞಾನ, ಪು.ಸಂ. ೩೩.

ಪ್ರೊ|| ವಿ.ಬಿ. ಹಿರೇಗೌಡರ

ಕರ್ನಾಟಕದ ಖ್ಯಾತ ಕಲಾವಿದರಲ್ಲಿ ಒಬ್ಬರಾದ ಪ್ರೊ|| ವಿ.ಬಿ. ಹಿರೇಗೌಡರವರು ಅತ್ಯಂತ ಪ್ರತಿಭಾನ್ವಿತ ಹಾಗೂ ಪ್ರಯೋಗಶೀಲ ಕಲಾವಿದರೆಂದು ಹೆಸರು ವಾಸಿಯಾಗಿದ್ದಾರೆ. ಅವರದೇ ಆದ ಶೈಲಿಯನ್ನು ವರ್ಣ ಚಿತ್ರಕಲೆ ಹಾಗೂ ರೇಖಾ ಚಿತ್ರಗಳಲ್ಲಿ ರೂಡಿಸಿಕೊಂಡು ದೇಶ-ವಿದೇಶಗಳಲ್ಲಿ ಖ್ಯಾತರಾಗಿದ್ದಾರೆ.

ಪ್ರೊ|| ವಿ.ಬಿ. ಹಿರೇಗೌಡರವರು ಧಾರವಾಡ ಜಿಲ್ಲೆಯ ಗುಡಗೇರಿ ಎಂಬ ಗ್ರಾಮದಲ್ಲಿ ೧/೪/೧೯೪೩ ರಲ್ಲಿ ಜನಿಸಿದರು. ಬಾಲ್ಯದಿಂದಲೂ ಇವರಿಗೆ ಚಿತ್ರಕಲೆಯ ಬಗ್ಗೆ ಹೆಚ್ಚಿನ ಅಭ್ಯಾಸ ಮಾಡಬೇಕೆಂಬ ಆಸೆ ಇವರಲ್ಲಿ ಇತ್ತು. ೧೯೬೩ ರಲ್ಲಿ ಇವರು ಸಾಮಾನ್ಯ ಪಿ.ಯು.ಸಿ. ಯನ್ನು ಮುಗಿಸಿದರು. ಡ್ರಾಯಿಂಗ್ ಟೀಚರ ಕೋರ್ಸನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಗಿಟ್ಟಿಸಿದರು. ಮುಂದೆ ಆರ್ಟ ಮಾಸ್ಟರ್ ಪರೀಕ್ಷೆಯನ್ನು ೧೯೬೭ ರಲ್ಲಿ ಪಾಸಾದರು. ಇದೇ ರೀತಿಯಾಗಿ ಇವರು ರಾಜ್ಯದ ಹಾಗೂ ರಾಷ್ಟ್ರದ ಹಲವಾರು ಕಲಾ ಚಟುವಟಿಕೆಯಲ್ಲಿ ಪಾಲ್ಗೊಂಡು ದಾವಣಗೆರೆ ಜಿಲ್ಲೆಯ ಚಿತ್ರಕಲಾ ಪ್ರಪಂಚಕ್ಕೆ ಹೆಚ್ಚಿನ ಮೆರಗನ್ನು ತಂದು ಕೊಟ್ಟರು.

ಚಿತ್ರಕಲೆಯ ಬಗ್ಗೆ ಇಂದು ಅಧಿಕಾರಯುತವಾಗಿ ಮಾತನಾಡುವ ಕೆಲವೇ ಕೆಲವು ಕಲಾವಿದರುಗಳಲ್ಲಿ ಪ್ರೊ|| ವಿ.ಬಿ. ಹಿರೇಗೌಡರವರು ಸಹ ಒಬ್ಬರು. ಕಲೆಯ ಬಗ್ಗೆ ಇವರು ಹೊಂದಿದ ಅಪಾರ ಪಾಂಡಿತ್ಯ ಹಾಗೂ ಅನುಭವಗಳು ಅವರಿಗೆ ಹೆಚ್ಚಿನ ಗೌರವಯುತ ಸ್ಥಾನ ಮಾನಗಳನ್ನು ತಂದು ಕೊಡುವಲ್ಲಿ ಮಹತ್ತರವಾದ ಪಾತ್ರ ವಹಿಸಿವೆ.

ಪ್ರೊ|| ವಿ.ಬಿ. ಹಿರೇಗೌಡರವರ ಚಿತ್ರಕಲಾ ಶಿಕ್ಷಣ ಸೇವೆಗಳು:

೧. ಇವರು ೧೯೬೭ ರಿಂದ ೧೯೭೫ ರವರೆಗೆ ದಾವಣಗೆರೆಯ ಸರಕಾರಿ ಕಲೆ ಮತ್ತು ಕರಕುಶಲ ಶಾಲೆಯಲ್ಲಿ ಉಪನ್ಯಾಸಕರಾಗಿ ಸುಮಾರು ಎಂಟು ವರುಷಗಳ ಸೇವೆ ಸಲ್ಲಿಸಿದ್ದಾರೆ.

೨. ಪ್ರೊ|| ವಿ.ಬಿ. ಹಿರೇಗೌಡರವರು ೧೯೭೫ ರಿಂದ ೨೦೦೩ ರವರೆಗೆ ದಾವಣಗೆರೆಯ ವಿಶ್ವವಿದ್ಯಾಲಯ ಲಲಿತಕಲಾ ವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ನಿರಂತರವಾಗಿ ಸುಮಾರು ೨೭ ವರುಷಗಳ ಸೇವೆಯನ್ನು ಸಲ್ಲಿಸಿ ನಿವೃತ್ತರಾದರು.

೩. ಹಂಪಿ ಕನ್ನಡ ವಿದ್ಯಾಲಯ ಇವರ ಸೇವೆಯನ್ನು ಗಮನಿಸಿ ೨೦೦೩ ಅಗಸ್ಟ ೧೧ ರಿಂದ ಮೇ ೨೦೦೪ ರ ವರೆಗೆ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟರು.

೪. ಸಪ್ಟೆಂಬರ ೨೦೦೫ ರಿಂದ ಕನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇವರಿಂದ ಸಂಯೋಜಿಸಲ್ಪಟ್ಟ ಡಿ.ಎಂ.ಎಸ್. ಲಲಿತಕಲಾ ಮಹಾ ಸಂಸ್ಥಾನ ಮೈಸೂರು ಇಲ್ಲಿ ಗೌರವ ಡೀನ್‌ರಾಗಿ ಇವತ್ತಿಗೂ ಸಹ ಸೇವೆ ಸಲ್ಲಿಸುತ್ತಿದ್ದಾರೆ.

ಚಿತ್ರಕಲಾ ಶಿಕ್ಷಣದಲ್ಲಿ ಪ್ರೊ॥ ವಿ.ಬಿ. ಹಿರೇಗೌಡರವರು ಸಲ್ಲಿಸಿದ ಇತರ ಗೌರವಾನ್ವಿತ ಸೇವೆಗಳು

ತಾಂತ್ರಿಕ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯ ಉನ್ನತ ಕಲಾ ಶಿಕ್ಷಣದಡಿಯಲ್ಲಿ ಚಿತ್ರಕಲಾ ವಿದ್ಯಾರ್ಥಿಗಳಿಗಾಗಿ ಕಲಾ ಇತಿಹಾಸ ನಿರ್ಮಾಣದ ಸಮಿತಿಯ ಅಧ್ಯಕ್ಷರಾಗಿ ೧೯೮೪ ರಲ್ಲಿ ನೇಮಕರಾಗಿದ್ದಾರೆ. ೧೯೭೫ ರಿಂದ ೧೯೭೯ರ ವರೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಕಲೆ ಮತ್ತು ಕರಕುಶಲ ಮಂಡಳಿಯ ಸದಸ್ಯರಾಗಿದ್ದರು. ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣದ ಕೇಂದ್ರಿಯ ಪರೀಕ್ಷಾ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಹಾಗೂ ಕರ್ನಾಟಕ ವೃತ್ತಿ ಶಿಕ್ಷಣ ನಿರ್ದೇಶನಾಲಯದಲ್ಲಿ ವೃತ್ತಿಪರ ಲಲಿತಕಲೆ ಮತ್ತು ಅನ್ವಯಿಕ ಕಲೆಯ ಪಠ್ಯಕ್ರಮ ರಚನಾ ಸಮಿತಿಯ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ. ೧೯೭೫ ರಿಂದ ಇಲ್ಲಿಯವರೆಗೂ ಕರ್ನಾಟಕ ಆರ್ಕಿಯಾಲಜಿ ಮತ್ತು ಮ್ಯೂಜಿಯಂ ನಿರ್ದೇಶನಾಲಯದಡಿಯಲ್ಲಿ ಚಪ್ಪುದಿಕ ಪೊನ್ನಪ್ಪ ರಾಜಾರಾಮ ಸ್ಮಾರಕ ದತ್ತ ನಿಧಿಯ ಶಿಲ್ಪಕಲಾ ವಿದ್ಯಾರ್ಥಿ ವೇತನ ಸಮಿತಿಯ ಸದಸ್ಯರಾಗಿ ಹಾಗೂ ಕರ್ನಾಟಕ ರಾಜ್ಯ ಲಲಿತಕಲಾ ಅಕೆಡೆಮಿಯ ಸದಸ್ಯರಾಗಿ ಸೇವೆಯನ್ನು ಮಾಡಿದ್ದಾರೆ.

೧೯೮೧ ಮೈಸೂರು ವಿಶ್ವವಿದ್ಯಾಲಯ ಮಹಿಳಾ ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಸುಮಾರು ಮೂರು ವರ್ಷಗಳ ಕಾಲ ಪಠ್ಯಕ್ರಮ ರಚನಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ೧೯೮೨ ರಿಂದ ೧೯೮೪ ರವರೆಗೆ ಪ್ರೌಢ ಶಿಕ್ಷಣ ಉನ್ನತ ಕಲಾ ಶಿಕ್ಷಣ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವದರಲ್ಲದೆ ೧೯೭೯ ರಿಂದ ೧೯೮೨ ರವರೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎಫ್.ಎ. ಪದವಿ ಹಾಗೂ ಎಂ.ಎಫ್.ಎ. ಸ್ನಾತಕೋತ್ತರ ಪದವಿ ಪರೀಕ್ಷಾ ಅಧ್ಯಯನ ಮಂಡಳಿಯ ಸದಸ್ಯರಾಗಿ ೧೯೮೭ ರಿಂದ ೧೯೯೯ ರ ವರೆಗೆ ಸೇವೆಯನ್ನು ಸಲ್ಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ದೃಶ್ಯಕಲಾ ಸಂಸ್ಥೆಗಳ ಅಫಿಲಿಯೇಷನ್ ಸಮಿತಿಯ ಸದಸ್ಯರಾಗಿ ೧೯೮೭ರಿಂದ ೨೦೦೩ ರ ವರೆಗೆ ಕುವೆಂಪು ವಿಶ್ವವಿದ್ಯಾಲಯದ ದೃಶ್ಯಕಲಾ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡು ೨೦೦೬ ರಲ್ಲಿ ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯ ದಾವಣಗೆರೆ ಸಂಸ್ಥೆಯನ್ನು ಅಬಿವೃದ್ಧಿ ಪಡಿಸುವ ಹಿನ್ನೆಲೆಯಲ್ಲಿ ಸ್ಥಾಪನೆಯಾಗಿರುವ ಗೌರ್ನಿಂಗ್ ಕೌನ್ಸಲ್ ಸದಸ್ಯರನ್ನಾಗಿ ಕುವೆಂಪು ವಿಶ್ವವಿದ್ಯಾಲಯವು ನಾಮಕರಣ ಮಾಡಿ ಕಾಲೇಜಿನ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಲು ಪ್ರೊ॥ ವಿ.ಬಿ. ಹಿರೇಗೌಡರಿಗೆ ಅವಕಾಶವನ್ನು ಮಾಡಿಕೊಟ್ಟಿತು.

ಪ್ರೊ॥ ವಿ.ಬಿ. ಹಿರೇಗೌಡರವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು ದಾವಣಗೆರೆಯಲ್ಲಿ, ೧೯೭೪, ೧೯೭೬ ಹಾಗೂ ೧೯೭೯ ರಂದು ಹಾಗೂ ಬೆಂಗಳೂರಿನಲ್ಲಿ, ೧೯೭೪, ೧೯೮೧ ರಲ್ಲಿ

ಚಿತ್ರದುರ್ಗದಲ್ಲಿ ಹಾಗೂ ೧೯೭೨, ೧೯೭೬, ೧೯೮೧ ರಂದು ಗುಡಗೇರಿಯಲ್ಲಿ ತಮ್ಮ ಏಕ ವ್ಯಕ್ತಿ ಕಲಾಪ್ರದರ್ಶನವನ್ನು ಮಾಡಿದ್ದಾರೆ. ಅದೇ ರೀತಿಯಾಗಿ ೧೯೭೭ ರಲ್ಲಿ ದೊಡ್ಡಬಳ್ಳಾಪುರದಲ್ಲಿ ೧೯೭೬ ರಲ್ಲಿ ಮಾನ್ವಿ ಹಾಗೂ ರಾಯಚೂರಿನಲ್ಲಿ, ೧೯೭೯ ರಲ್ಲಿ ಶಿವಮೊಗ್ಗದಲ್ಲಿ, ೧೯೮೨ ರಲ್ಲಿ ಧಾರವಾಡ ಸ್ಕೂಲ್ ಆಫ್ ಆರ್ಟ್‌ನಲ್ಲಿ, ೧೯೮೦ ರಲ್ಲಿ ಕಾರವಾರ ಹಾಗೂ ಬಿಜಾಪೂರದಲ್ಲಿ. ಹಾಗೂ ೧೯೮೬ರಲ್ಲಿ ಇಳಕಲ್‌ನಲ್ಲಿಯೂ ಸಹ ತಮ್ಮ ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಅದೇ ರೀತಿಯಲ್ಲಿ ಸಿರಿಗೆರೆ, ಕಲಾಗುರು ಆರ್ಟಗ್ಯಾಲರಿ, ಧಾರವಾಡ ಹಾಗೂ ಸಿ.ಕೆ.ಪಿ, ಬೆಂಗಳೂರಿನಲ್ಲಿಯೂ ಸಹ ತಮ್ಮ ಏಕ ವ್ಯಕ್ತಿಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿ ಕಲಾರಸಿಕರಿಗೆ ಕಲಾರಸದೌತಣವನ್ನು ಏರ್ಪಡಿಸಿದ್ದಾರೆ.

ಅದಲ್ಲದೇ ಅದೇ ತರನಾಗಿ ಹಲವಾರು ಸಮೂಹ ಕಲಾ ಪ್ರದರ್ಶನದಲ್ಲಿ ಪಾಲ್ಗೊಂಡು ತಮ್ಮ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ದಾವಣಗೆರೆ ಕಲಾ ಶಾಲೆಯ ಅಧ್ಯಾಪಕ ವೃಂದದವರಿಂದ ೧೯೭೩, ೧೯೮೦, ೧೯೮೮ ರಲ್ಲಿ ದಾವಣಗೆರೆಯಲ್ಲಿ ಸಮೂಹ ಕಲಾ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ೧೯೭೯, ೧೯೮೦ ರಲ್ಲಿ ದಾವಣಗೆರೆಯ ಕ್ರಿಯೇಟಿವ್ ಆರ್ಟ ಕೌನ್ಸಿಲ್ ಸದಸ್ಯ ವೃಂದದವರಿಂದ ೧೯೮೧, ೧೯೯೨, ೧೯೯೩, ೨೦೦೧ ರಲ್ಲಿ ಮಡಿಕೇರಿ, ದಾವಣಗೆರೆ, ಬೆಳಗಾವಿ, ತುಮಕೂರಿನಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಪ್ರೊ|| ವಿ.ಬಿ. ಹಿರೇಗೌಡರವರು ತಮ್ಮ ಜೀವನವನ್ನೇ ಕಲೆಗಾಗಿ ಮುಡುಪಿಟ್ಟಿದವರು. ಇವರು ರಾಜ್ಯ, ರಾಷ್ಟ್ರಮಟ್ಟದ ಹಲವಾರು ಕಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ರಾಜ್ಯಕ್ಕೂ ಹಾಗೂ ಜಿಲ್ಲೆಗೂ ಗೌರವವನ್ನು ತಂದು ಕೊಟ್ಟಿದ್ದಾರೆ. ಇವರು ಭಾಗವಹಿಸಿದ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಲಾ ಚಟುವಟಿಕೆಗಳು ಇಂತಿವೆ.

ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾ ಚಟುವಟಿಕೆ:

೧. ೧೯೭೩ ರಿಂದ ೨೦೦೦ ದವರೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.

೨. ೧೯೮೦, ೧೯೮೫, ೧೯೮೮, ೧೯೯೩ ಮತ್ತು ೨೦೦೪ ರಲ್ಲಿ ಬೆಂಗಳೂರಿನಲ್ಲಿ ನಡೆಸಿದ ಕರ್ನಾಟಕ ಕಲಾಮೇಳದಲ್ಲಿ ಭಾಗವಹಿಸಿದ್ದಾರೆ.

೩. ೧೯೮೫ ರಲ್ಲಿ ಮೈಸೂರಿನಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಆಯೋಜಿಸಿದ ಕಲಾವಿದರ ಮಹಾಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

೪. ೧೯೮೭ ರಲ್ಲಿ ಕನಾಟಕ ಲಲಿತಕಲಾ ಅಕಾಡೆಮಿಯು ಮುಂಬೈಯ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ ಕಿರುಚಿತ್ರ ಕಲಾ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

೫. ೧೯೮೫ ಮತ್ತು ೧೯೮೮ ರಲ್ಲಿ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ ನವದೆಹಲಿ ಹಾಗೂ ಚಿತ್ರಕಲಾ ಪರಿಷತ್ ಬೆಂಗಳೂರು ಇವುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ರಾಷ್ಟ್ರಮಟ್ಟದ ಕಲಾ ಶಿಕ್ಷಣ ವಿಚಾರ ಸಂಕಿರ್ಣದಲ್ಲಿ ಪಾಲ್ಗೊಂಡಿದ್ದಾರೆ.

೬. ೧೯೯೦ ರಲ್ಲಿ ಗೋವಾ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿಯ ವಿನಿಮಯ ಕಾರ್ಯಕ್ರಮದಡಿ ಆಯೋಜಿಸಿದ ಕಲಾಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

೭. ೧೯೯೧ ಮತ್ತು ೧೯೯೨ ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಂತರರಾಜ್ಯ ಕಾರ್ಯಕ್ರಮದಡಿ ಜೈಪುರ ಹಾಗೂ ಜಮ್ಮುವಿನಲ್ಲಿ ಆಯೋಜಿಸಿದ ಕಲಾಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

೮. ಜನವರಿ ೧೯೯೨ ಮತ್ತು ನವೆಂಬರ್ ೧೯೯೨ ರಲ್ಲಿ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ ಮದ್ರಾಸ ಇವರು ಆಯೋಜಿಸಿದ ಕಲಾಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

೯. ೧೯೯೨ ರಲ್ಲಿ ೬ನೇ ಮತ್ತು ೧೯೯೫ ರಲ್ಲಿ ೯ನೇ ದಕ್ಷಿಣ ಮಧ್ಯ ಸಂಸ್ಕೃತಿಕ ವಲಯ ನಾಗಪೂರ (ಮಧ್ಯಪ್ರದೇಶ) ಇವರಿಂದ ಆಯೋಜಿಸಿದ ಕಲಾಪ್ರದರ್ಶನದಲ್ಲಿ ಪಾಲ್ಗೊಂಡು ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

೧೦. ೧೯೯೮ ರಲ್ಲಿ ಹೈದರಾಬಾದಿನ ಸಾಲಾರ್‌ಜಂಗ್ ಮ್ಯೂಜಿಯಂ ಆಯೋಜಿಸಿದ ಕರ್ನಾಟಕ ಸಮಕಾಲೀನ ಕಲಾವಿದರ ಕಲಾಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

೧೧. ಜನವರಿ ೨೦೦೦ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಬೆಂಗಳೂರಿನಲ್ಲಿ ಆಯೋಜಿಸಿದ ಲಲಿತಕಲಾ ಮೇಳದಲ್ಲಿ ಭಾಗವಹಿಸಿದ್ದಾರೆ.

೧೨. ಡಿಸೆಂಬರ್ ೧೯೯೯ ಹಾಗೂ ಜನವರಿ ೨೦೦೦ರಲ್ಲಿ ನವದೆಹಲಿಯ ಆಲ್ ಇಂಡಿಯಾ ಫೈನ್‌ಆರ್ಟ್ ಆ್ಯಂಡ್ ಕ್ರಾಫ್ಟ್ ಸೊಸೈಟಿಯವರು ಆಯೋಜಿಸಿದ ಮಿಲೇನಿಯಂ ಆಲ್ ಇಂಡಿಯಾ ಆರ್ಟಿಸ್ಟ್ ಕ್ಯಾಂಪ್‌ಗೆ ಆಯ್ಕೆಗೊಂಡು ಭಾಗವಹಿಸುವದರ ಮೂಲಕ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ.

೧೩. ೨೦೦೦, ೨೦೦೧ನೇಯ ಹಾಗು ೨೦೦೪ನೇ ಸಾಲಿನ ಹಂಪಿ ಉತ್ಸವದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಸ್ತು ಸಂಗ್ರಹಾಲಯ ಮತ್ತು ಇನ್‌ಲ್ಯಾಕ್ ಸಂಸ್ಥೆಯ ಜಂಟಿ ಸಹಯೋಗದಲ್ಲಿ ಯುವ ಹಾಗೂ ಹಿರಿಯ ಕಲಾವಿದರ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

ಪ್ರಶಸ್ತಿ ಹಾಗೂ ಪುರಸ್ಕಾರಗಳು:

೧. ೧೯೬೬ ರಲ್ಲಿ ಲಲಿತಕಲಾ ಡಿಪ್ಲೋಮಾ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿ ತೇರ್ಗಡೆ ಹೊಂದಿದ ಪ್ರಯುಕ್ತ ನಗದು ಬಹುಮಾನವಾಗಿ ರೂ ೫೦೦/- ಸ್ವೀಕರಿಸಿ ಪುರಸ್ಕೃತಗೊಂಡಿದ್ದಾರೆ.

೨. ೧೯೯೧ನೇ ಸಾಲಿನ ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಿರಿಯ ಕಲಾವಿದರಿಗೆ

ನೀಡುವ ಗೌರವ ಪ್ರಶಸ್ತಿಗೆ ಆಯ್ಕೆಗೊಂಡು ನಗದು ರೂ. ೧೦,೦೦೦/- ಬಹುಮಾನ ಹಾಗೂ ಪ್ರಶಸ್ತಿ ಫಲಕ ಪಡೆದು ಗೌರವಿಸಲ್ಪಟ್ಟಿದ್ದಾರೆ.

೩. ೧೯೯೩ನೇ ಕರ್ನಾಟಕ ಲಲಿತಕಲಾ ಅಕಾಡೆಮಿಯ ೨೩ನೇ ವಾರ್ಷಿಕ ಕಲಾಪ್ರದರ್ಶನದಲ್ಲಿ ಇವರ **"ಹೂವುಮೊಗ್ಗು"** ಎಂಬ ಕಲಾಕೃತಿ ಪ್ರಶಸ್ತಿಗೆ ಆಯ್ಕೆಗೊಂಡು ರೂ. ೫೦೦೦/- ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಿದೆ.

೪. ೨೦೦೧ರಲ್ಲಿ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಶನ್ ಆಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆ ನವದೆಹಲಿ ಇವರು ಶ್ರೀಯುತರ ಬಹುಮುಖ ಕಲಾಸಾಧನೆಯನ್ನು ಗುರುತಿಸಿ **"ಜ್ಯುವೆಲ್ ಆಫ್ ಇಂಡಿಯಾ"** ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ೧೨-೨೦೦೪ರಲ್ಲಿ ಧಾರವಾಡದ ಕಲಾ ಮಂಡಳ ಸಂಸ್ಥೆಯವರು ಪ್ರತಿಷ್ಠಾಪಿಸಿರುವ ಪ್ರಪ್ರಥಮ ಪ್ರಶಸ್ತಿ ಪಡೆದು ಗೌರವಿಸಲ್ಪಟ್ಟಿದ್ದಾರೆ.

೫. ೨೦೦೫ರಲ್ಲಿ ಇಂಡಿಯನ್ ಸಾಲಿಡ್ಯಾರಿಟಿ ಕೌನ್ಸಿಲ್ ನವದೆಹಲಿ ಇವರು ಸ್ಥಾಪಿಸಿರುವ ವಿಶೇಷ ಸಾಧನೆಗೈದವರಿಗೆ ನೀಡುವ **"ಇಂದಿರಾ ಗಾಂಧಿ ಎಕ್ಸಲೆನ್ಸ"** ಪ್ರಶಸ್ತಿಗೆ ಆಯ್ಕೆಗೊಂಡು ಪ್ರಶಸ್ತಿ ಸ್ವೀಕರಿಸಿ ಗೌರವಿಸಲ್ಪಟ್ಟಿದ್ದಾರೆ.

ಸಂಗ್ರಹದಲ್ಲಿ ಕಲಾಕೃತಿಗಳು: ಕರ್ನಾಟಕ ಲಲಿತಕಲಾ ಅಕಾಡೆಮಿಯು ಇವರ ಕಲಾಕೃತಿಗಳನ್ನು ೧೯೮೪, ೧೯೮೬ ಹಾಗೂ ೧೯೯೩ ರಲ್ಲಿ ತನ್ನ ಸಂಗ್ರಹಕ್ಕಾಗಿ ಖರೀದಿಸಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನಾವರಣಗೊಳಿಸಿದೆ. ಪ್ರೊ॥ ವಿ.ಬಿ. ಹಿರೇಗೌಡರವರ ಕಲಾಕೃತಿಗಳು ನಾಡಿನ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಸಂಗ್ರಹಗೊಂಡಿದ್ದು ಇದು ನಮ್ಮ ನಾಡಿನ, ನಮ್ಮ ರಾಜ್ಯ, ರಾಷ್ಟ್ರಮಟ್ಟದಲ್ಲಿ ಸಂಗ್ರಹಗೊಂಡಿದ್ದು ಇದು ನಮ್ಮ ಜಿಲ್ಲೆಯ ಕಲಾವಿದರ ಹೆಮ್ಮೆಯ ಪ್ರತೀಕವಾಗಿದೆ. ಇವರ ಕಲಾಕೃತಿಗಳು ಲಲಿತಕಲಾ ಅಕಾಡೆಮಿ, ಬೆಂಗಳೂರಿನ ಕೃತಿಕಾ ಆರ್ಟ್‌ಗ್ಯಾಲರಿ, ಹರಿಹರ, ದಾವಣಗೆರೆ, ಚಿತ್ರದುರ್ಗದ ಬ್ರಹನ್ಮಠ ಮುಂತಾದ ಸ್ಥಳಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ತುಮಕೂರು ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮಿಗಳ ತೈಲವರ್ಣ ಭಾವಚಿತ್ರ ಹಾಗೂ ಹಾವೇರಿ ಜಿಲ್ಲೆಯ ಹಂಸಭಾವಿಯ ಶ್ರೀ ಎಂ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಅಥಣಿ ಶಿವಯೋಗಿ ಸ್ವಾಮೀಜಿ ಹಾಗೂ ಧಾರವಾಡದ ಮಹಾಂತ ಸ್ವಾಮೀಜಿಗಳ ತೈಲವರ್ಣದ ಭಾವಚಿತ್ರಗಳು ಅಲಂಕೃತಗೊಂಡಿವೆ.

ಅದೇ ತರನಾಗಿ ದಾವಣಗೆರೆ ದ.ರಾ.ಮ.ವಿಜ್ಞಾನ ಕಾಲೇಜಿನಲ್ಲಿ ಐನ್‌ಸ್ಟೈನ್‌ರ ತೈಲವರ್ಣ ಭಾವಚಿತ್ರ ಮತ್ತು ಮುಳಗುಂದ ಇಂಡಸ್ಟ್ರೀಸ್ ಸಿರಸಿ ಕಛೇರಿಯ ಆವರಣದಲ್ಲಿ, ಶಿರಸಿ ಅರ್ಬನ್ ಬ್ಯಾಂಕ ಆವರಣದಲ್ಲಿ ಬ್ಯಾಂಕನ ಸಂಸ್ಥಾಪಕರಾದ ಶ್ರೀಮಾನ ಸೊಂದೆಯವರ ತೈಲವರ್ಣ ಭಾವಚಿತ್ರವಿದೆ. ಹಾನಗಲ್ ತಾಲೂಕಿನ ಮೂಡಿ ಗ್ರಾಮದ ಶ್ರೀಮಠದ ಮೂಲ ಸ್ವಾಮಿಗಳ ಕಾಲ್ಪನಿಕ ಭಾವ ಪ್ರತಿಭೆಗಳ ಸಂಗ್ರಹದಿಂದ ರಚಿತವಾದ ತೈಲವರ್ಣ ಭಾವಚಿತ್ರ ಶ್ರೀಮಠದ

ಗದ್ದಿಗೆಯಲ್ಲಿ ಅಲಂಕೃತಗೊಂಡಿದೆ. ಬಳ್ಳಾರಿ ಜಿಲ್ಲೆಯ ಚೇಳ್ಳಗುರ್ತಿ ಗ್ರಾಮದ ಶ್ರೀ ಎರ್ರಿ ತಾತನವರ ಜೀವನ ಘಟನಾವಳಿ ಆಧಾರಿತ ಸುಮಾರು ೧೦ ತೈಲವರ್ಣ ಚಿತ್ರಗಳು ಎರ್ರಿ ತಾತನವರ ಶ್ರೀ ಮಠದ ಸಂಭಾಂಗಣದಲ್ಲಿವೆ.

ಚಿತ್ರದುರ್ಗ ಜಿಲ್ಲೆಯ ನಾಯಕನ ಹಟ್ಟಿ ಗ್ರಾಮದ ಶ್ರೀ ತಿಪ್ಪೇರುದ್ರ ಸ್ವಾಮಿಗಳ ಜೀವನದ ಘಟನಾವಳಿ ಆಧರಿಸಿ ೧೫ ತೈಲವರ್ಣ ಚಿತ್ರಗಳು ಶ್ರೀಗಳವರ ಹೊಸಮಠ ಹಾಗೂ ಒಳಮಠ ಪ್ರಾಂಗಣದಲ್ಲಿವೆ. ಇವರ ಇನ್ನೂ ಹೆಚ್ಚಿನ ಕಲಾಕೃತಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿತ್ರದುರ್ಗ ಜಿಲ್ಲಾಧಿಕಾರಿಗಳವರ ಕಛೇರಿ, ಬಯಲು ಚಿತ್ರಾಲಯ ಸೋಣಂಗೇರಿ, ಹಾಗೂ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ತೋಳಹುಣಸಿ ದಾವಣಗೆರೆ, ಪ್ರಾಂಗಣದಲ್ಲಿ ರಾಷ್ಟ್ರಕವಿ ಕುವೆಂಪುರವರ ಪೂರ್ಣಗಾತ್ರದ ತೈಲವರ್ಣ ಭಾವಚಿತ್ರವಿದೆ. ೧೯೯೫ ರಲ್ಲಿ ಇವರಿಂದ ರಚಿತವಾದ ಶರಣ ಮಡಿವಾಳಪ್ಪ ತೈಲವರ್ಣ ಚಿತ್ರವು ಗುಲ್ಬರ್ಗಾದ ಶರಣ ಬಸವೇಶ್ವರ ಸಮುದಾಯ ಭವನದಲ್ಲಿ ಹಾಗೂ ೨೦೦೦ ರಲ್ಲಿ ರಾಜಾ ವೀರ ಮದಕರಿನಾಯಕನ ಪೂರ್ಣ ಪ್ರಮಾಣದ ತೈಲವರ್ಣ ಚಿತ್ರವು ಚಿತ್ರದುರ್ಗದ ಮದಕರಿ ವಸ್ತು ಸಂಗ್ರಹಾಲಯದಲ್ಲಿ ಅಲಂಕೃತಗೊಂಡಿದೆ.

ಪ್ರೊ॥ ವಿ.ಬಿ. ಹಿರೇಗೌಡರವರು ಕೇವಲ ಚಿತ್ರಕಲೆಯಲ್ಲದೇ ಭಿತ್ತಿ ವಿನ್ಯಾಸ ಹಾಗೂ ಶಿಲ್ಪ ಕಲಾಕೃತಿಗಳನ್ನು ರಚನೆಮಾಡುವಲ್ಲಿಯೂ ಸದಾ ಎತ್ತಿದ ಕೈ, ಸಿಮೆಂಟ್, ಪ್ಲಾಸ್ಟರ್ ಆಫ್ ಪ್ಯಾರೀಸ್ ಮುಂತಾದ ಮಾಧ್ಯಮಗಳನ್ನು ಉಪಯೋಗಿಸಿಕೊಂಡು ನಾಡಿನ ಹಲವಾರು ಸ್ಥಳಗಳಲ್ಲಿ ಶಿಲ್ಪಗಳನ್ನು ರಚಿಸಿದ್ದಾರೆ. ೧೯೭೫ರಲ್ಲಿ ದಾವಣಗೆರೆಯ ಅರುಣಾ ಚಿತ್ರಮಂದಿರದ ಮುಂಭಾಗದಲ್ಲಿ ೧೦ x ೬೫ ಅಡಿ ಉದ್ದಗಲದಲ್ಲಿ ಸಿಮೆಂಟಿನಲ್ಲಿ ನೃತ್ಯ ಸರಣಿಯ ಉಬ್ಬು ಶಿಲ್ಪವು ನೋಡುಗರನ್ನು ತನ್ನತ್ತ ಸೆಳೆಯುತ್ತಲಿದೆ. ದಾವಣಗೆರೆಯ ಸಿ.ಜಿ. ಆಸ್ಪತ್ರೆಯ ಮುಂಭಾಗದಲ್ಲಿ "ಹಿಪಾಕ್ರೆಟಿಸ್" ಎಂಬ ವಿಷಯಾಧಾರಿತ ಭಿತ್ತಿ ವಿನ್ಯಾಸ ಸುಮಾರು ೧೦ ಅಡಿ, ಡಾಯಾ ವೃತ್ತದಲ್ಲಿ ರಚನೆಯಾಗಿದ್ದು ಇದರಲ್ಲಿ ಇವರ ಕಲಾ ಪ್ರೌಢಿಮೆ ಎದ್ದು ಕಾಣುತ್ತದೆ. ಅದೇ ರೀತಿಯಾಗಿ ಲಲಿತಕಲಾ ಕಾಲೇಜಿನ ಮುಂಭಾಗದಲ್ಲಿ ಕುಂಚ ಬ್ರಹ್ಮಶಿಲ್ಪ ಹಾಗೂ ಹರಿಹರದ ಆರೋಗ್ಯ ಮಾತೆಯ ದೇವಾಲಯದ ಪ್ರವೇಶ ಆವರಣದಲ್ಲಿ ೧೬ ಅಡಿ ಎತ್ತರದ ಆರೋಗ್ಯ ಮಾತೆಯ ಸಿಮೆಂಟಿನ ದುಂಡು ಶಿಲ್ಪ ರಚನೆಗೊಂಡಿವೆ. ಚಿತ್ರದುರ್ಗ ರೆಡ್ಡಿ ಜನಸಂಘ ವಿದ್ಯಾರ್ಥಿನಿಲಯದ ಹೊಸ ಗ್ರಂಥಾಲಯ ಕಟ್ಟಡದ ಪ್ರವೇಶದ್ವಾರಕ್ಕೆ ವಿಜಯನಗರ ಶಿಲ್ಪಕಲಾ ಶೈಲಿಯ ಭಿತ್ತಿ ವಿನ್ಯಾಸಗಳು ರಚನೆಗೊಂಡು ಅಲಂಕೃತಗೊಂಡಿವೆ. ಇವುಗಳನ್ನೆಲ್ಲ ನೋಡಿದಾಗ ಪ್ರೊ॥ ವಿ.ಬಿ. ಹಿರೇಗೌಡರವರ ಕಾರ್ಯ ಕ್ಷಮತೆಯ ಬಗ್ಗೆ ಹಾಗೂ ಅವರ ಕಲಾ ಕೌಶಲ್ಯದ ಬಗ್ಗೆ ನೋಡುಗರ ಮನಸ್ಸು ಸೂರೆಗೊಳ್ಳುವುದಲ್ಲದೆ ಇವರು ಹಲವಾರು ವಿವಿಧ ಮಾಧ್ಯಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ಚಿತ್ರಿಸುವುದರ ರೀತಿ ಗಮನಾರ್ಹವಾಗಿದೆ.

ಶ್ರೀ ವೈ.ಹೆಚ್. ಸೂಗೂರ:

ಶ್ರೀ ವೈ.ಹೆಚ್. ಸೂಗೂರ್‌ರವರು ಶ್ರೀಯಲಗುರೇಶ ಹನುಮಂತಪ್ಪ ಸೂಗೂರ ಹಾಗೂ ಮಂಗಳಮ್ಮನವರ ಹಿರಿಯ ಮಗನಾದ ೧೯೩೯ರ ಜನವರಿ ೧೯ ರಂದು ತಾಳಿಕೋಟೆಯಲ್ಲಿ ಜನಿಸಿದರು. ಬಾಲ್ಯದಲ್ಲಿ ಇವರಿದ್ದ ಸುತ್ತಮುತ್ತಲಿನ ಪರಿಸರದಲ್ಲಿ ಕಲೆಯ ಗಂಧದಿಂದ ಕೂಡಿದ್ದರಿಂದ ಸಹಜವಾಗಿ ಇವರಿಗೆ ಬಾಲ್ಯದಿಂದಲೇ ಕಲೆಯ ಬಗ್ಗೆ ಹೆಚ್ಚಿನ ಆಸಕ್ತಿಯು ಜೊತೆ-ಜೊತೆಯಾಗಿ ಬಂದಿತ್ತು. ಇವರ ತಂದೆಯವರು ಒಬ್ಬ ಪರಿಣಿತ ಸಾಂಪ್ರದಾಯಕ ಶೈಲಿಯ ಕಲಾವಿದರಾಗಿದ್ದು. ಅವರು ಬೆಳೆದ ಮನೆಯ ಸುತ್ತಮುತ್ತಲಿನ ಜನರು ಜೇನುಗಾರರಾಗಿದ್ದರು. ಇವರ ಮುಖ್ಯ ವೃತ್ತಿ ಸಾಂಪ್ರದಾಯಿಕ ಜಿನುಗಾರರ ರೇಖಾ ಚಿತ್ರಗಳಿಗೆ ಬೆಡಗಿನ ಬಣ್ಣ ತುಂಬುವದಾಗಿದ್ದು, ಇವುಗಳು ಬಾಲ್ಯದಿಂದಲೂ ಸೂಗೂರವರಿಗೆ ಚಿತ್ರಕಲೆಯು ಅವರ ಮೇಲೆ ತನ್ನ ಪ್ರಭಾವವನ್ನು ಬೀರತೊಡಗಿತು. ಈ ಒಂದು ಪ್ರಭಾವ ಕಲಾ ಮಾಧ್ಯಮಕ್ಕೆ ಬರುವಂತೆ ಪ್ರೇರೇಪಿಸಿತು.

ವಿದ್ಯಾರ್ಥಿ ದೆಸೆಯಲ್ಲಿ ಶಾಲೆಯ ಅಧ್ಯಾಪಕ ವೃಂದದವರು ಇವರಿಗೆ ಕಲೆಯ ಮೇಲಿದ್ದ ಆಸಕ್ತಿಯನ್ನು ಕಂಡು ಇವರನ್ನು ಪ್ರೋತ್ಸಾಹಿಸುತ್ತಿದ್ದರು. ಇದರ ಫಲವಾಗಿ ಚಿತ್ರಕಲೆಯ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗುತ್ತಾ ಎಲ್ಲರ ಪ್ರೀತಿಗೆ ಪಾತ್ರರಾದರು. ಆದರೆ ಶ್ರೀ ವೈ.ಹೆಚ್. ಸೂಗೂರ್‌ರವರಿಗೆ ಅವರು ಆಸೆಪಟ್ಟಂತೆ ಚಿತ್ರಕಲೆಯಲ್ಲಿ ಅಭ್ಯಸಿಸಲು ಅವರ ಮನೆಯ ಪರಿಸರ ಪೂರಕವಾಗಿರಲಿಲ್ಲ. ಆದರೂ ಕಷ್ಟಪಟ್ಟು ಅಭ್ಯಾಸವನ್ನು ಮಾಡಲೇಬೇಕೆಂದು ಹುಬ್ಬಳ್ಳಿಗೆ ಬಂದರು. ೧೯೫೭ರಲ್ಲಿ ಹುಬ್ಬಳ್ಳಿಯ ಶ್ರೀ ವಿಜಯ ಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯಕ್ಕೆ ಸೇರಿ ತಮ್ಮ ಅಭ್ಯಾಸ ಪ್ರಾರಂಭಿಸಿದರು. ಹಣದ ಕೊರತೆಯನ್ನು ನೀಗಿಸಲು ಹಲವಾರು ಪೇಂಟರಗಳ ಹತ್ತಿರ ಕೆಲಸ ಮಾಡುತ್ತಾ ಸ್ಟುಡಿಯೋಗಳಲ್ಲಿ ಫೋಟೋಗಳಿಗೆ ಬಣ್ಣಗಳನ್ನು ಮಾಡುತ್ತಾ ತಮ್ಮ ಕಲಾಭ್ಯಾಸವನ್ನು ಮುಂದುವರಿಸಿದರು. ಮುಂದೆ ಇವರ ಗುರುಗಳಾಗಿ ಬಂದವರು ಶ್ರೀ, ಎಂ,ವಿ,ಮಿಣಜಗಿಯವರು. ಇವರ ಮಾರ್ಗದರ್ಶನದಲ್ಲಿ ಭಾರತೀಯ ಚಿತ್ರಕಲಾ ಪರಂಪರೆಯ ಶೈಲಿಯ ಚಿತ್ರಗಳಲ್ಲಿ ಮಾನವನ ಶರೀರ ಹಾಗೂ ಪ್ರಾಣಿಗಳ ಅಂಗಾಂಗ ರಚನಾ ಶಾಸ್ತ್ರದಲ್ಲಿ ಹೆಚ್ಚಿನ ಪರಿಣಿತಿ ಸಾಧಿಸಿದರು.

ಸೂಗೂರರವರ ನಿರಂತರ ಪರಿಶ್ರಮ ಹಾಗೂ ಉತ್ತಮವಾದ ಮಾರ್ಗದರ್ಶನಗಳಿಂದಾಗಿ ಇವರಲ್ಲಿ ಕಲೆ ಚಿಮ್ಮಿ ಹೊರಹೊಮ್ಮಲಾರಂಭಿಸಿತು. ಇವರು ೧೯೬೨ ರಲ್ಲಿ ಕಲಾ ಡಿಪ್ಲೋಮಾವನ್ನು ರಾಜ್ಯಕ್ಕೆ ಪ್ರಥಮ ಶ್ರೇಣಿಯನ್ನು ಗಳಿಸುವುದರ ಮೂಲಕ ಪಡೆದರು. ನಂತರ ಹುಬ್ಬಳ್ಳಿಯ ಕಲಾ ಶಾಲೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತ (ಡಿ.ಟಿ.ಸಿ) ಕೋರ್ಸನ್ನು ಸಹ ಮುಗಿಸಿದರು. ಹಲವು ಕಾರಣಗಳಿಂದ ೧೯೬೬ ರಲ್ಲಿ ಮುಂಬೈಯಲ್ಲಿ ಕೆಲವು ತಿಂಗಳುಗಳ ಕಾಲ ಕೆಲಸ ಮಾಡಿದರು. ನಂತರದಲ್ಲಿ ಹುಬ್ಬಳ್ಳಿಗೆ ಪುನಃ ಬಂದು ಇಲ್ಲಿ ಕೆಲಸ ಮಾಡಲು

ಪ್ರಾರಂಭಿಸಿದಾಗ ದಾವಣಗೆರೆಯಲ್ಲಿ ಚಿತ್ರಕಲಾ ಮಹಾವಿದ್ಯಾಲಯವು ಸ್ಥಾಪನೆಯಾಗಿ ಕೆಲವೇ ವರ್ಷಗಳಾಗಿತ್ತು. ಈ ಕಲಾ ಶಾಲೆಯಲ್ಲಿ ಶಿಕ್ಷಕರ ಕೊರತೆ ಇದ್ದ ಸಂದರ್ಭದಲ್ಲಿ ಈ ಕಲಾಶಾಲೆಯ ಮೇಲ್ವಿಚಾರಕರಾಗಿದ್ದ ಎಂ.ವಿ. ಮಿಣಜಗಿಯವರು ಇವರಿಗೆ ಉಪನ್ಯಾಸಕರನ್ನಾಗಿ ಸೇರಿಸಿದರು. ೧೯೬೭ರಲ್ಲಿ ದಾವಣಗೆರೆಗೆ ಬಂದು ಕಾರ್ಯನಿರ್ವಹಿಸುತ್ತಿದ್ದ ಇವರು ೧೯೭೨ ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾಗಿ ಲಲಿತಕಲಾ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಾ ಬಂದರು.

ಶ್ರೀ ವೈ.ಹೆಚ್. ಸೂಗೂರರವರ ಚಿತ್ರಕಲಾ ಶೈಲಿ ಹಾಗೂ ತಂತ್ರಗಾರಿಕೆ.

ಇವರ ವಿದ್ಯಾರ್ಥಿ ದೆಸೆಯಲ್ಲಿ ರಚಿಸಿದ ಸಂಯೋಜನ ಚಿತ್ರಗಳಲ್ಲಿ ಸಾಕಷ್ಟು ಭಾರತೀಯ ಪರಂಪರೆ ಶೈಲಿಯನ್ನು ಬಳಸಿರುವದನ್ನು ಕಾಣಬಹುದಾಗಿದೆ. ರೇಖೆಗಳ ಮೂಲಕ ವರ್ಣಗಳ ಮೂಲಕ ಅವರು ಉದ್ದವಾದ ಡ್ರಾಯಿಂಗ್ ಹಾಳೆಗಳ ಮೇಲೆ ಅನೇಕ ಸಂಯೋಜನೆಯ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇವರು ಕಲಾಕೃತಿಗಳಲ್ಲಿ ಪೋಸ್ಟರ್ ಕಲರ ಹಾಗೂ ಜಲವರ್ಣಗಳನ್ನು ಮಿಶ್ರಣಮಾಡಿ ಚಿತ್ರಗಳ ರಚನೆ ಮಾಡಿದ್ದನ್ನು ಕಾಣುತ್ತೇವೆ.

ನಂತರದ ದಿನಗಳಲ್ಲಿ ಚಿತ್ರಗಳ ರಚನೆಯ ಹಾಗೂ ಮಾಧ್ಯಮಗಳಲ್ಲಿ ಬದಲಾವಣೆಗಳಾದವು. ಸೂಗೂರರವರ ರೇಖಾ ಚಿತ್ರಗಳು ಅವರೆ ರಚಿಸಿದ ವರ್ಣ ಚಿತ್ರಗಳಿಗಿಂತ ಒಂದು ಕೈ ಮೇಲೆ ಎನ್ನಬಹುದು. ಹೆಸರಾಂತ ನೃತ್ಯಗಾರ್ತಿಯಾದ ಸೋನಾಲ್ ಮಾನಸಿಂಗ್‌ರವರ ನೃತ್ಯ ಪ್ರದರ್ಶನ ೧೯೬೫ರಲ್ಲಿ ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದ ಸಂದರ್ಭದಲ್ಲಿ ಸೆರೆ ಹಿಡಿದ ರೇಖಾಚಿತ್ರಗಳು ಉತ್ತಮವಾಗಿ ಹಾಗೂ ಅದ್ಭುತವಾಗಿ ಮೂಡಿ ಬಂದಿವೆ. ರೇಖಾಚಿತ್ರಗಳಲ್ಲಿ ಸಮತೋಲನ, ಚಲನಶೀಲತೆ, ಉತ್ತಮವಾಗಿ ಮೂಡಿ ಬಂದಿರುವುದು ಬಹಳಷ್ಟು ಪರಿಣಾಮಕಾರಿಯಾಗಿವೆ.

ಇವರಿಗೆ ರಾಜ್ಯ ಲಲಿತಕಲಾ ಅಕಾಡೆಮಿಯಿಂದ ನಾಲ್ಕು ಬಾರಿ ಬಹುಮಾನಗಳು ಬಂದಿದ್ದು, ೧೯೮೯ರಲ್ಲಿ ಗೌರವ ಪ್ರಶಸ್ತಿಯಿಂದ ಸನ್ಮಾನಿತರಾಗಿದ್ದಾರೆ. ಇವರ ಸುದೀರ್ಘವಾದ ಕಲಾ ಸೇವೆಯನ್ನು ಗುರುತಿಸಿ. ೧೯೯೯ರಲ್ಲಿ ನವದೆಹಲಿಯ 'ಐಫ್ಯಾಕ್ಸ' ಸಂಸ್ಥೆಯು ಮಾಜಿ ರಾಷ್ಟ್ರಪತಿಗಳಾದ ಶಂಕರ ದಯಾಳ್ ಶರ್ಮಾರವರಿಂದ ಸನ್ಮಾನಿಸಿದ್ದಾರೆ. ಇವರ ಅನೇಕ ಕೃತಿಗಳು ಕರ್ನಾಟಕದ ಲಲಿತಕಲಾ ಅಕಾಡೆಮಿ ಮತ್ತು ರಾಷ್ಟ್ರಮಟ್ಟದ ಹಲವಾರು ಪ್ರತಿಷ್ಠಿತ ಕಲಾ ಸಂಗ್ರಹಾಲಯುಗಳಲ್ಲಿ ಮತ್ತು ವಿದೇಶಗಳಲ್ಲಿಯೂ ಸಂಗ್ರಹಿತವಾಗಿದೆ.

ಸೂಗೂರವರಿಂದ ರಚಿತವಾದ ಕೃತಿಗಳ ತಾಂತ್ರಿಕ ಹಿನ್ನೆಲೆಯಲ್ಲಿ ರಚಿತವಾಗಿವೆ. ಕಲಾಕೃತಿಗಳಲ್ಲಿ ಲಿಂಗ ಮತ್ತು ಯೋನಿ ಪ್ರಧಾನವಾಗಿದ್ದು, ಲಿಂಗ ಮತ್ತು ಯೋನಿಯ ಸಂಯೋಗದ ಸಂಕೇತವಾಗಿ ಸರ್ಪವನ್ನು ಕೃತಿಯ ಕೇಂದ್ರ ಭಾಗದಲ್ಲಿ ಚಿತ್ರಿಸಲ್ಪಟ್ಟಿವೆ.

ತಂತ್ರಶಾಸ್ತ್ರದಲ್ಲಿ ಹಲವಾರು ಚಿನ್ಹೆಗಳು, ಸಂಕೇತಗಳು ನಿರೂಪಿಸಲ್ಪಟ್ಟಿವೆ. ಇವರ ಕೃತಿಗಳಲ್ಲಿ ವರ್ಣ ಸಾಂಗತ್ಯ ಅಸಾಧಾರಣವಾಗಿದ್ದು ಇವುಗಳು ಇವರ ಕೃತಿಗಳನ್ನು ಎತ್ತರಕ್ಕೆ ಏರಿಸುವತ್ತ ಪ್ರಮುಖ ಪಾತ್ರವಹಿಸಿವೆ. ಕೆಂಪು, ಮಿಶ್ರಿತ ಹಳದಿ ಸಾಮಾನ್ಯವಾಗಿ ಬಳಸಲ್ಪಟ್ಟಿರುವ ಬಣ್ಣಗಳಾಗಿದ್ದು ಸಂವಾದಿಯಾಗಿ ನೇರಳೆ, ನೀಲಿಯನ್ನು ಅದನ್ನರಿತು ಉಪಯೋಗಿಸಿದ್ದಾರೆ. ಎಲ್ಲಿಯೂ ರಭಸದ ಕುಂಚದ ಬೀಸುಗಳು ಕಾಣದೇ ಬಹು ತಾಳ್ಮೆಯಿಂದ ಲಯಬದ್ಧವಾಗಿ ನಾಜೂಕಾಗಿ ವರ್ಣ ಲೇಪನ ಮಾಡಿದ್ದನ್ನು ಕಾಣಬಹುದಾಗಿದೆ. ಈ ಎಲ್ಲ ಸಾಧನೆಗಳು ರಾಜ್ಯ, ರಾಷ್ಟ್ರಮಟ್ಟದಲ್ಲಿ ದಾಖಲೆಗೊಂಡಿರುವುದು ದಾವಣಗೆರೆ ಜಿಲ್ಲೆಯ ಹೆಸರನ್ನು ಕಲಾ ಕ್ಷೇತ್ರದ ಇತಿಹಾಸದಲ್ಲಿ ಅಜರಾಮರಗೊಳಿಸಿದ್ದಾರೆ. ಇದು ಜಿಲ್ಲೆಗೆ, ನಾಡಿಗೆ ಹಾಗೂ ರಾಷ್ಟ್ರಕ್ಕೆ ಸಂದ ಗೌರವವಾಗಿದೆ.

ಶ್ರೀ ಕಾಳಿದಾಸ್ ಪತ್ತಾರ್

ಶ್ರೀ ಕಾಳಿದಾಸ್ ಪತ್ತಾರ್‌ರವರು ಬಾಗಲಕೋಟೆ ಜಿಲ್ಲೆಯ ಕೇಲೂರ ಎಂಬ ಕುಗ್ರಾಮದಲ್ಲಿ ೧೯೪೩ರಲ್ಲಿ ಜನಿಸಿದರು. ಮೂಲತಃ ಬಾಗಲಕೋಟೆ ಜಿಲ್ಲೆಯವರಾದ ಇವರು ಸಾಮಾನ್ಯ ಶಿಕ್ಷಣದ ನಂತರ ಕಲಾಶಿಕ್ಷಣದ ಕಡೆಗೆ ತಿರುಗಿ ಬೆಂಗಳೂರಿನಲ್ಲಿರುವ ಕೆನ್ ಕಲಾಶಾಲೆಯಲ್ಲಿ ಡ್ರಾಯಿಂಗ ಮತ್ತು ಪೇಂಟಿಂಗ ವಿಷಯದಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದರು. ೧೯೭೦ರಲ್ಲಿ ರಾಜಸ್ಥಾನದಲ್ಲಿರುವ ಬನಸ್ಥಲಿ ವಿದ್ಯಾಪೀಠದಲ್ಲಿ ಬಿತ್ತಿಚಿತ್ರ ರಚನಾ ತಂತ್ರದಲ್ಲಿ ತರಬೇತಿಯನ್ನು ಪಡೆದರು. ೧೯೭೯ ರಿಂದ ೮೧ರಲ್ಲಿ ಬರೋಡಾದ ಎಮ್. ಎಸ್. ವಿಶ್ವವಿದ್ಯಾಲಯದಲ್ಲಿ ಗ್ರಾಫಿಕ್ ಕಲೆಯಲ್ಲಿ/ ಮುದ್ರಣಕಲೆಯಲ್ಲಿ ಸ್ನಾತಕೋತ್ತರ ಡಿಪ್ಲೋಮಾ ಪದವಿಯನ್ನು ಪಡೆದರು.

ಇವರು ರಾಜ್ಯದ ಮತ್ತು ಹೊರ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿ ಮತ್ತು ನಿರಂತರ ಕಲಾಕೃತಿ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದು ಹಲವಾರು ಕಲಾ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಚಿತ್ರಕಲಾ ಪರಿಷತ್‌ನಲ್ಲಿ ಅಜೀವ ಸದಸ್ಯತ್ವವನ್ನು ಹೊಂದಿದ್ದು ಹಾಗೂ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ ಹೊಸದೆಹಲಿ ಹಾಗೂ ಮದ್ರಾಸ್, ಮುಂತಾದ ಸ್ಥಳಗಳಲ್ಲಿ ಇವರು ಸೇವೆಯನ್ನು ಸಲ್ಲಿಸಿದ್ದಾರೆ. ಸುಮಾರು ೧೯೭೫ ರಿಂದ ೯೬ರವರೆಗೆ ಮೈಸೂರಿನ ಚಾಮರಾಜೇಂದ್ರ ಅಕಾಡೆಮಿ ಆಫ್ ವಿಜ್ಯುವಲ್ ಆರ್ಟನಲ್ಲಿ (ಕಾವಾ) ಡೀನ ಆಗಿ ಸೇವೆ ಸಲ್ಲಿಸಿರುವರಲ್ಲದೆ, ತಮ್ಮ ನಿವೃತ್ತಿಯ ಅಂಚಿನಲ್ಲಿ ಕೆಲದಿನಗಳ ಕಾಲ ದಾವಣಗೆರೆಯ ಕುವೆಂಪು ವಿಶ್ವವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಶ್ರೀ ಕಾಳಿದಾಸ್ ಪತ್ತಾರ್‌ರವರು ೧೯೭೭ ರಿಂದ ೧೯೮೦ ಹಾಗೂ ೧೯೮೪ ರಿಂದ ೮೭ ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದರು ಹಾಗೂ ೧೯೯೭ ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತರೂ ಆಗಿದ್ದಾರೆ. ಅಲ್ಲದೆ ಇವರನ್ನು

ಅರಸಿಕೊಂಡು ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಹ ಇವರಿಗೆ ಬಂದಿವೆ. ೧೯೭೮ರಲ್ಲಿ ದಾವಣಗೆರೆಯಲ್ಲಿ ನಡೆದ ರಾಜ್ಯ ಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ ಮೊದಲ ಬಹುಮಾನದೊಂದಿಗೆ ಚಿನ್ನದ ಪದಕವನ್ನೂ ಸಹ ಪಡೆದಿದ್ದಾರೆ. ಚಿತ್ರಕಲಾ ಪರಿಷತ್‌ನಲ್ಲಿ ನಡೆದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಮತ್ತು ೧೯೮೯ರಲ್ಲಿ ನಾಗಪೂರದಲ್ಲಿ ನಡೆದ ಚಿತ್ರಕಲಾ ಪ್ರದರ್ಶನದಲ್ಲಿಯೂ ಸಹ ಬಹುಮಾನವನ್ನು ಪಡೆದಿದ್ದಾರೆ.

ಶ್ರೀ ಕಾಳಿದಾಸ್ ಪತ್ತಾರ್‌ರವರು ಹಲವಾರು ಚಿತ್ರಕಲಾ ಶಿಬಿರ ಹಾಗೂ ಚರ್ಚಾಕೂಟದಲ್ಲಿ, ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ನಾಡಿಗೆ ಹೆಸರನ್ನು ತಂದುಕೊಟ್ಟ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್, ಚಿನ್ನೈ ಅಮರಾವತಿಯಲ್ಲಿ ನಡೆದ ದಕ್ಷಿಣ ಭಾರತದ ಗ್ರಾಫಿಕ್ ಶಿಬಿರದಲ್ಲೂ ಸಹ ಭಾಗವಹಿಸಿದ್ದಾರೆ. ೨೦೦೩ರಲ್ಲಿ ಬಿಕನೇರ (ರಾಜಸ್ಥಾನ) ದಲ್ಲಿ ನಡೆದ ರಾಷ್ಟ್ರೀಯ ಕಲಾವಿದರ ಶಿಬಿರದಲ್ಲೂ ಭಾಗವಹಿಸಿ ಕಲಾಕ್ಷೇತ್ರಕ್ಕೆ ತಮ್ಮದೇ ಆದ ವಿಶೇಷ ಕೊಡುಗೆಯನ್ನು ನೀಡಿದ್ದಾರೆ.

ಅದೇ ರೀತಿಯಲ್ಲಿ ಶ್ರೀ ಕಾಳಿದಾಸ್ ಪತ್ತಾರ್‌ರವರು ಹಲವಾರು ಏಕವ್ಯಕ್ತಿ ಕಲಾ ಪ್ರದರ್ಶನವನ್ನು ಸಹ ಮಾಡಿದ್ದಾರೆ. ವಿಶ್ವೇಶ್ವರಯ್ಯ ಟ್ರೇಡ್ ಭವನ ಬೆಂಗಳೂರು, ಮ್ಯೂಕ್ಸ ಮುಲ್ಲರ ಭವನ ಬೆಂಗಳೂರು, ಅಲಿಯನ್ಸ ಪ್ರಾನ್ಸಿಸ್ ಗ್ಯಾಲರಿ ಬೆಂಗಳೂರು, ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು ಹಾಗೂ ೨೦೦೫ರಲ್ಲಿ ಮಹಾರಾಷ್ಟ್ರದಲ್ಲಿ ಮುಂಬೈಯಲ್ಲಿರುವ ಭಾರತದ ಪ್ರಖ್ಯಾತ ಗ್ಯಾಲರಿಗಳಲ್ಲಿ ಒಂದಾದ ಜಹಾಂಗೀರ ಆರ್ಟ ಗ್ಯಾಲರಿಯಲ್ಲಿಯೂ ಸಹ ತನ್ನ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಮಾಡಿದ್ದಾರೆ. ಅಲ್ಲದೆ ತಮ್ಮದೇ ಆದ ವಿಶಿಷ್ಟ ತೆರನಾದ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬದುಕಿದ ಪತ್ತಾರ್‌ರು ತಮ್ಮ ಕಲಾಕೃತಿ ಶೈಲಿ, ತಂತ್ರಗಾರಿಕೆ ಇನ್ಯಾವದರ ಬಗ್ಗೆಯೇ ಆಗಲಿ ಬೇರೆಯವರು ಯಾವ ಅಭಿಪ್ರಾಯ ವ್ಯಕ್ತಪಡಿಸಿದರೂ ಹಾಗೂ ಸಲಹೆ ನೀಡಿದರೂ ಅವೆಲ್ಲವುಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಿದ್ದ ಮನೋಭಾವವುಳ್ಳವರಾಗಿದ್ದರು ಮತ್ತು ತಾವೂ ಸ್ವಂತ ತಮ್ಮ ಕಲಾಕೃತಿ ಶೈಲಿ, ತಂತ್ರಗಾರಿಕೆಯ ಕುರಿತು ತಾವು ಅನುಸರಿಸಿಕೊಂಡು ಬಂದ ಕಲಾ ವ್ಯಾಕರಣ ಕುರಿತು ಚಿಂತನ-ಮಂಥನ ನಡೆಸುವ ಗೊಜಿಗೂ ಹೋದವರಲ್ಲ. ಹೀಗಾಗಿ ರಾಜ್ಯದ ಕಲಾವಲಯದಲ್ಲಿ 'ಅತ್ಯಂತ ವಿಶಿಷ್ಟಮಯ ವ್ಯಕ್ತಿತ್ವ' ಹೊಂದಿದ ಕಲಾವಿದರೆಂದೆ ಗುರುತಿಸಲ್ಪಟ್ಟಿದ್ದಾರೆ.

ಇವರ ರೇಖಾಚಿತ್ರಗಳು ಸರಾಗವಾಗಿ ಸಾಗಿದ ರೇಖೆಗಳ ಮೊತ್ತವೇನೊ ಎಂಬಂತೆ ಭಾಸವಾಗುತ್ತವೆ. ಪತ್ತಾರರ ರೇಖೆಗಳಲ್ಲಿ ಚಲನಶೀಲತೆ, ಸತ್ವಗಾರಿಕೆ, ಪ್ರಮಾಣ, ಸಂತುಲನತೆ ಎದ್ದು ಕಾಣುವ ಅಂಶ, ವರ್ಣಚಿತ್ರಗಳಿಗಿಂತಲೂ ಅವರ ರೇಖಾಚಿತ್ರಗಳೇ ಕಲಾ ರಸಿಕರ ಮನವನ್ನು ಗೆಲ್ಲುತ್ತವೆ. ಇವರ ಬಹುತೇಕ ಕಲಾಕೃತಿಗಳು ಜಾನಪದ ಬದುಕನ್ನು ಆಧರಿಸಿ ರಚಿತಗೊಂಡಿವೆ ಎಂದರೆ ತಪ್ಪಾಗಲಾರದು.

ಕಲಾವಿದೆ ಶ್ರೀಮತಿ ಸೈಯಿದಾ ಬೇಗಂ

ಈ ನಾಡಿಗೆ ಭವ್ಯವಾದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ ಇದೆ. ಪ್ರತಿಭಾವಂತ ಹಲವಾರು ಕಲಾವಿದರುಗಳಿಗೆ ಜನ್ಮನೀಡಿದ ಹಾಗೂ ಬೇರೆ ಸ್ಥಳಗಳಲ್ಲಿ ಜನಿಸಿ. ಇಲ್ಲಿ ಅವರ ಸಾಧನೆಯನ್ನು ಎತ್ತಿ ಹಿಡಿಯುವಲ್ಲಿ ಈ ಜಿಲ್ಲೆಯ ಕೊಡುಗೆಯು ಅಪಾರವಾದದ್ದು.

ಶ್ರೀಮತಿ ಸೈಯಿದಾಬೇಗಂರವರು ಗುಲಬರ್ಗಾದಲ್ಲಿ ಜನಿಸಿದರೂ ಸಹ ಅವರು ಇಲ್ಲಿಯೇ ನೆಲೆ ನಿಂತು ದಾವಣಗೆರೆ ಜಿಲ್ಲೆಯ ಚಿತ್ರಕಲಾ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಗಳನ್ನು ಕೊಡುತ್ತಲಿದ್ದಾರೆ ಹಾಗೂ ಅಪಾರವಾದ ಕಲಾಭಿಮಾನಿಗಳನ್ನೂ ವಿದ್ಯಾರ್ಥಿಗಳನ್ನು ಹೊಂದಿರುವ ಇವರು ಈಗಲೂ ಸಹ ಚಿತ್ರಕಲಾ ಕ್ಷೇತ್ರಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

ಶ್ರೀಮತಿ ಸೈಯಿದಾಬೇಗಂರವರು ೧೯೫೨ ಫೆಬ್ರವರಿ ೧೯ರಂದು ಮಹಮ್ಮದ ಸರ್ದಾರ್‌ಖಾನ ಹಾಗು ರಡೆಮುನ್ನೀಸಾರವರು ಕೊನೆಯ ಪುತ್ರಿಯಾಗಿ ಗುಲಬರ್ಗಾದಲ್ಲಿ ಜನಿಸಿದರು. ಈ ದಂಪತಿಗಳಿಗೆ ೧೩ ಜನ ಮಕ್ಕಳು, ಕೊನೆಯವರಾದ ಇವರಿಗೆ ಮೊದಲಿನಿಂದಲೂ ಚಿತ್ರಕಲೆಯ ಬಗ್ಗೆ ಎಲ್ಲಿಲ್ಲದ ಆಸಕ್ತಿ. ಇವರು ಇವರ ಕುಟುಂಬದಲ್ಲಿ ಎಲ್ಲರಿಗಿಂತ ಚಿಕ್ಕವರಾಗಿದ್ದರಿಂದ ಎಲ್ಲರಿಗೂ ಇವರ ಮೇಲೆ ತುಂಬಾ ಪ್ರೀತಿ-ಸಲುಗೆಯಿಂದ ಬೆಳೆದರು. ಇವರ ಸೋದರಿಯರಾದ ಖುರ್ಷಿದ ಬೇಗಂ, ಹಾಗೂ ನಿಯಾಜ್ ಬೇಗಂರವರು ಚಿತ್ರಕಲಾ ಶಿಕ್ಷಕರಾಗಿದ್ದರಿಂದ ಅವರುಗಳು ಚಿತ್ರ ಬಿಡಿಸುವುದನ್ನು ನೋಡಿ ಆಕರ್ಷಿತರಾಗಿ ತಾವೂ ಸಹ ಚಿತ್ರಕಲೆಯಲ್ಲಿ ಹೆಸರನ್ನು ಮಾಡಬೇಕೆನ್ನುವ ಪಣ ತೊಟ್ಟರು. ಅನುಕೂಲಸ್ಥ ಕುಟುಂಬದಲ್ಲಿ ಬೆಳೆದಿರುವದರಿಂದ ಇವರಿಗೆ ಯಾವುದೇ ರೀತಿಯ ಕಷ್ಟಗಳು ಬರದೇ ಇವರು ಆಸಕ್ತಿಪಟ್ಟ ಚಿತ್ರಕಲೆಯ ಬಗ್ಗೆ ಬೆಳೆಯಲು ಅನುಕೂಲವಾಯಿತು.

ಶ್ರೀಮತಿ ಸೈಯಿದಾಬೇಗಂರವರ ಶಿಕ್ಷಣ ಹಾಗೂ ಕಲಾಶಿಕ್ಷಣ

ಶ್ರೀಮತಿ ಸೈಯಿದಾಬೇಗಂರವರ ಪ್ರಾಥಮಿಕ ಶಿಕ್ಷಣ ಗುಲಬರ್ಗಾದಲ್ಲಿರುವ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮುಗಿಸಿ, ಸರಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಅವರು ತಮ್ಮ ಪ್ರೌಢಶಿಕ್ಷಣವನ್ನು ಮುಗಿಸಿದರು. ಗುಲಬರ್ಗಾದಲ್ಲಿರುವ ನೂತನ ವಿದ್ಯಾಲಯದ ಸಂಸ್ಥೆಯವತಿಯಿಂದ ಪ್ರೌಢಶಾಲೆಯಲ್ಲಿ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಇವರು ಜ್ಞಾನಪೀಠ ಪ್ರಶಸ್ತಿ ವಿಜೇತರಾದ ದ.ರಾ.ಬೇಂದ್ರೆಯವರಿಂದ ಸನ್ಮಾನಿತಗೊಂಡ ಪ್ರತಿಭಾವಂತವರಾಗಿದ್ದಾರೆ. ಇವರ ಪೋಷಕರು ಇವುಗಳನ್ನೆಲ್ಲ ನೋಡಿ ಇವರಿಗಿರುವ ಕಲಾಸಕ್ತಿಯನ್ನು ಕಂಡು ೧೯೬೯ರಲ್ಲಿ ಇವರಿಗೆ ನೂತನ ವಿದ್ಯಲಯ ಸಂಸ್ಥೆಯ ಕಲಾ ಶಾಲೆಗೆ ಸೇರಿಸಿದರು. ೧೯೭೪ರಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗನಲ್ಲಿ ಡಿಪ್ಲೋಮಾ ಮುಗಿಸಿದರು. ಮುಂದೆ ಗುಲಬರ್ಗಾದಲ್ಲಿರುವ ಐಡಿಯಲ್ ಫೈನ ಆರ್ಟ್ಸ ಸ್ಕೂಲ್‌ನಲ್ಲಿ ಡ್ರಾಯಿಂಗ ಟೀಚರ ಟ್ರೇನಿಂಗ್ (ಡಿ.ಟಿ.ಸಿ) ಹಾಗೂ ಆರ್ಟ ಮಾಸ್ಟರ (ಎ.ಎಮ್.) ಪರೀಕ್ಷೆಯಲ್ಲಿ ಪಾಸಾದರು. ಆಗಿನ

ಕಾಲದಲ್ಲಿ ಗುಲಬರ್ಗಾ ವಿಭಾಗದಲ್ಲಿ ಪರೀಕ್ಷಾಕೇಂದ್ರಗಳು ಇಲ್ಲದ ಕಾರಣ ಪರೀಕ್ಷೆಯನ್ನು ಧಾರವಾಡದಲ್ಲಿ ಕಟ್ಟಬೇಕಾಗುತ್ತಿತ್ತು ಮುಂದೆ ೧೯೮೧ರಲ್ಲಿ ಬಿ.ಎ.ಯಲ್ಲಿ ಮೇಜರ್ ಡ್ರಾಯಿಂಗ್ ವಿಷಯವನ್ನು ಆಯ್ಕೆ ಮಾಡಿಕೊಂಡು ಡಿಸ್ಟಿಂಕ್ಷನ್‌ನಲ್ಲಿ ಪಾಸಾದರು.

ಶ್ರೀಮತಿ ಸೈಯಿದಾಬೇಗಂರವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು

೧೯೭೩ರಲ್ಲಿ ನೂತನ ವಿದ್ಯಾಲಯ ವಿದ್ಯಾವರ್ಧಕ ಸಂಘದವರು ಗುಲಬರ್ಗಾದಲ್ಲಿ ನಡೆಸಿದ ಏಕವ್ಯಕ್ತಿ ರಂಗೋಲಿ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಭಾರತದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರಾದ ಕರ್ನಾಟಕದ ಕೆ.ಕೆ.ಹೆಬ್ಬಾರರವರು ಇವರ ಗುಲಬರ್ಗಾದಲ್ಲಿ ೧೯೭೭ರಂದು ಡಿ.ಐ.ಜಿ ಹಾಲನಲ್ಲಿ ಏರ್ಪಡಿಸಿದ ಇವರ ಏಕವ್ಯಕ್ತಿ ಪ್ರದರ್ಶನವನ್ನು ಉದ್ಘಾಟಿಸಿದ್ದಾರೆ.

ಕರ್ನಾಟಕದ ಲಲಿತಕಲಾ ಅಕಾಡೆಮಿಯ ಸಂಯೋಜನೆಯೊಂದಿಗೆ ದಾವಣಗೆರೆಯಲ್ಲಿರುವ ಮುನ್ಸಿಪಲ್ ಹಾಲ್‌ನಲ್ಲಿ ೧೯೮೨ ರಲ್ಲಿ ಶ್ರೀಮತಿ ಸೈಯಿದಾಬೇಗಂರವರು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದಾರೆ ಹಾಗೂ ದಾವಣಗೆರೆಯ ವನಿತಾ ಸಮಾಜದಲ್ಲಿ ಇವರು ೨೦೦೨ರಲ್ಲಿ ತಮ್ಮ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಿಂದ ನಾಡಿನ ಜನತೆಯ ಗಮನ ಸೆಳೆದಿದ್ದಾರೆ.

ಶ್ರೀಮತಿ ಸೈಯಿದಾಬೇಗಂರವರ ಸಮೂಹ ಚಿತ್ರಕಲಾ ಪ್ರದರ್ಶನಗಳು

೧೯೯೩ ರಲ್ಲಿ ಧಾರವಾಡದಲ್ಲಿ ನಡೆದ ಅಖಿಲ ಕನಾಟಕ ಮಹಿಳಾ ಕಲಾವಿದರ ಸಮೂಹ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಹಯೋಗದೊಂದಿಗೆ ೧೯೯೪ರಲ್ಲಿ ಬೀದರನಲ್ಲಿ ಕರ್ನಾಟಕ ಮಹಿಳಾ ಕಲಾವಿದರ ಸಮೂಹ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿ ಜಿಲ್ಲೆಗೆ ಹೆಚ್ಚಿನ ಗೌರವವನ್ನು ತಂದು ಕೊಟ್ಟಿದ್ದಾರೆ.

ಹೀಗೆಯೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ನಡೆಸಿದ ಧಾರವಾಡದ ನವ್ಯ ನೃತ್ಯ ನಿಕೇತನದಲ್ಲಿ ನಡೆದ ಪ್ರದರ್ಶನದಲ್ಲಿಯೂ ಸಹ ಭಾಗವಹಿಸಿದ್ದಾರೆ. ೨೦೦೪ರಲ್ಲಿ ದಾವಣಗೆರೆಯಲ್ಲಿರುವ ಕುವೆಂಪು ವಿಶ್ವವಿದ್ಯಾನಿಲಯದ ಪಿ.ಜೆ. ಸೆಂಟರನಲ್ಲಿ ಹಾಗೂ ಕಲ್ಕತ್ತಾದ ಶಾಂತಿನಿಕೇತನದಲ್ಲಿ ೨೦೦೭ರಲ್ಲಿ ನಡೆದ ಲಲಿತಕಲೆಯಲ್ಲಿ Discussion ನಲ್ಲಿಯೂ ಸಹ ಭಾಗವಹಿಸಿದ್ದಾರೆ.

ಶ್ರೀಮತಿ ಸೈಯಿದಾಬೇಗಂರವರ ಕಲಾಕೃತಿಗಳ ಸಂಗ್ರಹಗಳು

ಕರ್ನಾಟಕದ ಲಲಿತಕಲಾ ಅಕಾಡೆಮಿ ಬೆಂಗಳೂರು, ಬಿಜಾಪೂರದಲ್ಲಿರುವ ಸಿದ್ದೇಶ್ವರ ಆರ್ಟ್ಸ್ ಕಾಲೇಜಿನಲ್ಲಿಯೂ ಸಹ ಇವರ ಕಲಾಕೃತಿಗಳ ಸಂಗ್ರಹವಿದೆ. ಧಾರವಾಡದ ಆರ್.ಟಿ.ಓ. ಆಫೀಸ್‌ನಲ್ಲಿ ಹಾಗೂ ಕರ್ನಾಟಕದ ಹಲವಾರು ಕಲಾಪ್ರೇಮಿಗಳ ಸಂಗ್ರಹದಲ್ಲಿ ಇವರ

ಕಲಾಕೃತಿಗಳು ಸಂಗ್ರಹಗೊಂಡಿವೆ.

ಕಲಾವಿದೆ ಶ್ರೀಮತಿ ಸೈಯಿದಾಬೇಗಂರವರು ಕಲಾಕೃತಿಗಳಲ್ಲಿ ತಮ್ಮದೇ ಆದ ಒಂದು ವಿಶಿಷ್ಟ ಶೈಲಿಯನ್ನು ಬೆಳೆಸಿಕೊಂಡು ಬಂದರು. ಇವರ ಕಲಾಕೃತಿಗಳಲ್ಲಿ ಹೆಚ್ಚಿನದಾಗಿ ಸ್ತ್ರೀಯರಿಗೆ ಪ್ರಾಧಾನ್ಯತೆ ಕೊಟ್ಟು ಬಂದಿರುವಂಥದ್ದು ಕಂಡುಬರುತ್ತದೆ. ಇವರ ಕಲಾಕೃತಿಗಳ ಶೈಲಿಯು ರಾಗಮಾಲಾ ಚಿತ್ರಗಳನ್ನು ಹೋಲುವಂಥಹದ್ದಾಗಿದ್ದು, ಅವರು ಕಲಾಕೃತಿಗಳ ರಚನೆಯಲ್ಲಿ ಸಂಧ್ಯಾರಾಗ, ಗೆಳೆತನ, ಮೀರಾಕಿವಿಮಾತು, ಮೇಘಾ, ಶಕುಂತಲೆ ಮುಂತಾದ ವಿಷಯಗಳನ್ನು ಮುಖ್ಯವಾಗಿಸಿಕೊಂಡು ಕೃತಿ ರಚಿಸಿದ್ದಾರೆ. ಬಳೆಯಚೂರುಗಳು, ಪೊರಕೆಕಡ್ಡಿಗಳು ಮುಂತಾದವುಗಳನ್ನು ಉಪಯೋಗಿಸಿಕೊಂಡು, ನಿಸರ್ಗಚಿತ್ರ, ಭಾವಚಿತ್ರ ಮುಂತಾದವುಗಳನ್ನು ರಚಿಸಿದ್ದಾರೆ. ಇವರು ತಮ್ಮ ಕಲಾಕೃತಿಗಳಲ್ಲಿ ಅಲಂಕರಣಕ್ಕೆ ಹೆಚ್ಚಿನ ಪ್ರಧಾನ್ಯತೆ ನೀಡಿದ್ದು ಕಂಡು ಬರುತ್ತದೆ. ವಿವಿಧ ರೀತಿಯ ಸಾಂಪ್ರದಾಯಿಕ ಉಡುಪಿನಲ್ಲಿ ನೃತ್ಯ ಮಾಡುತ್ತಿರುವ ಸ್ತ್ರೀಯರನ್ನು ಬಳಸಿಕೊಂಡು ಅವುಗಳಿಗೆ ಸರಿಹೊಂದುವಂತಹ ವರ್ಣಗಳ ವಿನ್ಯಾಸದಿಂದ ಅವುಗಳಿಗೆ ತಂದು ಕೊಟ್ಟಿದ್ದಾರೆ.

ರವೀಂದ್ರ ಎಸ್. ಕಮ್ಮಾರ್

ವಂಶ ಪಾರಂಪರಿಕವಾಗಿ ಬಂದಂತಹ ಚಿತ್ರಕಲೆಯಾಗಿರಬಹುದು, ಶಿಲ್ಪಕಲೆಯಾ-ಗಿರಬಹುದು ಅವುಗಳನ್ನು ಹಲವಾರು ಕುಟುಂಬಗಳು ಇಲ್ಲಿಯವರೆಗೂ ಮುದುವರೆಸಿಕೊಂಡು ಬಂದ ಹಲವಾರು ನಿದರ್ಶನಗಳಿವೆ ಇಂತಹ ವಂಶಸ್ತರಲ್ಲಿ ಕಮ್ಮಾರರವರ ಕುಟುಂಬವೂ ಒಂದು.

ರವೀಂದ್ರ ಎಸ್ ಕಮ್ಮಾರರವರು ೨-೧೨-೧೯೬೦ ರಲ್ಲಿ ಗದಗ ಜಿಲ್ಲೆಯ ಹೊಳೆ ಆಲೂರುನಲ್ಲಿ ಜನಿಸಿದರು. ಇವರ ತಂದೆ ಶಂಕರಪ್ಪ ಕಮ್ಮಾರ ಇವರು ಸಾಂಪ್ರದಾಯಿಕ ಶಿಲ್ಪ/ ಚಿತ್ರ ಕಲಾವಿದರಾಗಿದ್ದು, ಚಿತ್ರಕಲೆ ಮತ್ತು ಶಿಲ್ಪಕೃತಿಗಳನ್ನು ಮಾಡುವಲ್ಲಿ ಪಳಗಿದವರಾಗಿದ್ದಾರೆ. ಇದಕ್ಕೆ ಪೂರಕವೆಂಬಂತೆ ಬಾಲ್ಯದಲ್ಲಿಯೇ ರವೀಂದ್ರ ಎಸ್ ಕಮ್ಮಾರರವರಿಗೆ ಕಲೆಯಲ್ಲಿ ಆಸಕ್ತಿಮೂಡಿ ತಂದೆಯೊಂದಿಗೆ ಸಹಾಯಕರಾಗಿ ರಚಿಸಿದ ಶಿಲ್ಪಗಳಿಗೆ ಬಣ್ಣಕೊಡುವದು, ಚಿಕ್ಕ ಚಿಕ್ಕ ಚಿತ್ರ, ಶಿಲ್ಪ ರಚಿಸಿ ತಂದೆಯ ಮಾರ್ಗದರ್ಶನ ಪಡೆಯುವುದು. ಇತ್ಯಾದಿಯಾಗಿ ತಂದೆಯವರೊಡಗೂಡಿ ಕಲಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿದ ಇವರು ಚಿತ್ರಕಲೆ ಮತ್ತು ಶಿಲ್ಪ ಕಲೆ ಈ ಎರಡರಲ್ಲಿಯೂ ಪರಿಣಿತಿಗೊಳಿಸಿದ್ದಾರೆ.

ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ೧೯೭೬ರಲ್ಲಿ ದಾವಣಗೆರೆಯಲ್ಲಿರುವ ಸರಕಾರಿ ಚಿತ್ರಕಲೆ ಹಾಗೂ ಕರಕುಶಲ ಶಾಲೆಗೆ ಸೇರಿ ಐದು ವರ್ಷದ ಲಲಿತಕಲೆಯಲ್ಲಿ ಡಿಪ್ಲೋಮಾವನ್ನು ೧೯೮೧ರಲ್ಲಿ ಪಡೆದರು. ಮುಂದೆ ೧೯೮೮ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಉಪನ್ಯಾಸಕರಾಗಿ ಆಯ್ಕೆಗೊಂಡು ಇಂದಿನವರೆಗೂ ಕಲಾ ಉಪನ್ಯಾಸಕರಾಗಿ ಸೇವೆ

ಸಲ್ಲಿಸುತ್ತಿದ್ದಾರೆ. ಮೊದಲಿನಿಂದಲೂ ಉನ್ನತ ಮಟ್ಟದ ಕಲೆಯ ಕುರಿತಾಗಿ ಹೆಚ್ಚಿನ ತರಬೇತಿ ಅಧ್ಯಯನ ಇತ್ಯಾದಿ ಸಾಧನೆ ಮಾಡಬೇಕೆಂಬ ಛಲ ಹೊಂದಿದ್ದ ಕಮ್ಮಾರರವರು ಗುಲಬರ್ಗಾ ವಿಶ್ವವಿದ್ಯಾನಿಲಯದ ಅಂಗೀಕೃತ ಗುಲಬರ್ಗಾದ ಎಮ್,ಎಮ್,ಕೆ, ಕಾಲೇಜ್ ಆಫ್ ವಿಜ್ಯುವಲ್ ಆರ್ಟ್ಸ್ ಕಾಲೇಜಿನಲ್ಲಿ ಚಿತ್ರಕಲಾ ವಿದ್ಯಾಭ್ಯಾಸವನ್ನು ಮುಂದುವರೆಸಿ ೨೦೦೦ ನೇ ಸಾಲಿನಲ್ಲಿ ಚಿತ್ರಕಲೆಯಲ್ಲಿ ಬಿ.ಎಫ್.ಎ. ಪದವಿಯನ್ನು ಮತ್ತು ೨೦೦೨ರಲ್ಲಿ ಈ ಎರಡನ್ನು ಪ್ರಥಮ ದರ್ಜೆಯಲ್ಲಿ ಪಡೆದರು ಅದೇ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಹಾಗೆಯೇ ಇವರು ಪಿ.ಎಚ್.ಡಿ. ಅಧ್ಯಯನವನ್ನು ಹಂಪಿಯ ಕನ್ನಡವಿಶ್ವವಿದ್ಯಾಲಯದಲ್ಲಿ ಮಾಡಿದ್ದು. ಈಗಾಗಲೇ ಪಿ.ಹೆಚ್.ಡಿ. ಮಹಾ ಪ್ರಬಂಧವನ್ನು ಕನ್ನಡ ವಿಶ್ವ ವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆ ಹಾಗೂ ಪಿ.ಹೆಚ್.ಡಿ. ಪದವಿಗಾಗಿ ಕಾಯುತ್ತಿದ್ದಾರೆ. ರವೀಂದ್ರ ಎಸ್ ಕಮ್ಮಾರರವರ ಕಲಾ ಶಿಕ್ಷಣ ಸೇವೆಯ ಅಪಾರವಾಗಿದ್ದು ಅವರು ತಮ್ಮ ವೈವಿದ್ಯ ಪೂರ್ಣವಾದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಭೋಧನೆಮಾಡುತ್ತಿರುವದರಿಂದ ಅಪಾರ ಸಂಖ್ಯೆಯ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದಾರೆ. ಅಲ್ಲದೇ ಇವರು ೧೯೮೧ ರಿಂದ ೧೯೮೪ ರವರೆಗೆ ತಾವು ವಿದ್ಯಾಭ್ಯಾಸ ಮಾಡಿದ್ದ ದಾವಣಗೆರೆಯಲ್ಲಿರುವ ಸರಕಾರಿ ಚಿತ್ರಕಲೆ ಹಾಗು ಕರಕುಶಲ ಶಾಲೆಯಲ್ಲಿಯೇ ಅರೆ ಕಾಲಿಕ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ರವೀಂದ್ರ ಎಸ್ ಕಮ್ಮಾರರವರ ಕಲಾಕೃತಿಗಳು ಹಲವಾರು ಪ್ರಮುಖ ಸ್ಥಳಗಳಲ್ಲಿ ಪ್ರದರ್ಶನಗೊಂಡಿದ್ದು ಇವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು ದಾವಣಗೆರೆಯಲ್ಲಿರುವ ರೋಟರಿ ಕ್ಲಬ್‌ನಲ್ಲಿ ೧೯೯೩ ರಲ್ಲಿ ಹಾಗೂ ೧೯೯೫ ರಲ್ಲಿ ಹರಿಹರದಲ್ಲಿರುವ ಹರಿಹರ ಪಾಲಿಫೈಬರ್ಸ್ ಅಡಿಟೋರಿಯಂನಲ್ಲಿ ಪ್ರದರ್ಶನಗೊಂಡಿದ್ದು ಹಾಗೆಯೇ ೧೯೭೯ರಲ್ಲಿ ಕ್ರಿಯೇಟಿವ್ ಆರ್ಟ್‌ಕೌನ್ಸಿಲ್‌ನಲ್ಲಿ, ಕರ್ನಾಟಕದ ಲಲಿತಕಲಾ ಅಕಾಡೆಮಿಯ ಧನ ಸಹಾಯದೊಂದಿಗೆ ಸರಕಾರಿ ಚಿತ್ರಕಲೆ ಹಾಗೂ ಕರಕುಶಲ ವಿದ್ಯಾಲಯದ ಉಪನ್ಯಾಸಕ ವೃಂದ ಸಮೂಹ ಕಲಾ ಪ್ರದರ್ಶನದಲ್ಲಿ ಮತ್ತು ಗುಲಬರ್ಗಾದ 'ಫ಼ಿ. ಪೋರ್, ಗ್ರೂಪ್'ನವರು ೨೦೦೧ರಲ್ಲಿ ಪುಣೆಯ ರವೀಂದ್ರ ಕಲಾಕುಂಜದಲ್ಲಿ ಏರ್ಪಡಿಸಿದ ಸಮೂಹ ಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ಕಲಾಕೃತಿಗಳ ಪ್ರದರ್ಶನವನ್ನು ಮಾಡಿದ್ದಾರೆ.

ರವೀಂದ್ರ ಎಸ್ ಕಮ್ಮಾರರವರು ಹಲವಾರು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ನಾಡಿನ ಹಿರಿಮೆಯನ್ನು ಎತ್ತಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವುಗಳು ಇಂತಿವೆ.

೧. ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಂಚಾರಿ ಕಲಾಪ್ರದರ್ಶನದಲ್ಲಿ ೧೯೯೨.

೨. ೪ನೇ ಕರ್ನಾಟಕ ಕಲಾ ಮೇಳ ೧೯೮೫.

೩. ರಾಜ್ಯ ಮಟ್ಟದ ತಾಂತ್ರಿಕ ವಸ್ತು ಪ್ರದರ್ಶನ ಹಾಸನ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ೧೯೮೨.

೪. ೬೧ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ದಾವಣಗೆರೆ ೧೯೯೨.

೫. ಅವಂತಿಕಾ ನವದೆಹಲಿ ೨೦೦೧.

೬. ಬಾಂಬೆ ಆರ್ಟ್ ಸೊಸೈಟಿಯ ೧೧೦ ನೇ ಅಖಿಲ ಭಾರತ ವಾರ್ಷಿಕ ಕಲಾ ಪ್ರದರ್ಶನ ೨೦೦೨.

೭. ಇಂಡಿಯನ್ ಅಕಾಡೆಮಿ ಆಫ್ ಫೈನ್‌ಆರ್ಟ್, ಅಮೃತಸರ, ೬೨ನೇ ರಾಷ್ಟ್ರೀಯ ಕಲಾಪ್ರದರ್ಶನ ೨೦೦೧.

೮. ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯ ವಾರ್ಷಿಕ ಕಲಾ ಪ್ರದರ್ಶನ ೨೦೦೦-೨೦೦೧-೨೦೦೨.

೯. “ಮಿಕ್ಸಡ್‌ಬ್ಯಾಗ್” ಕಲಾಪ್ರದರ್ಶನ, ಬೆಂಗಳೂರು ೨೦೦೨.

ರವೀಂದ್ರ ಎಸ್ ಕಮ್ಮಾರರವರು ಕರ್ನಾಟಕ ಲಲಿತಕಲಾ ಅಕಾಡೆಮಿ ಹಲವಾರು ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದು, ಅವುಗಳಲ್ಲಿ ೧೯೮೭ ರಲ್ಲಿ ಬೆಂಗಳೂರಿನ ವಿದ್ಯಾನಗರದಲ್ಲಿ ನಡೆದ ಚಿತ್ರಕಲಾ ಶಿಬಿರ ೧೯೯೨ರಲ್ಲಿ ಮೈಸೂರಿನ ಇಲವಾಲದಲ್ಲಿ ಕಲಾಶಿಬಿರ, ೨೦೦೦ರಲ್ಲಿ ಮಂಡ್ಯದಲ್ಲಿ ಹಾಗೂ ೨೦೦೫ರಲ್ಲಿ ರಾಮ್‌ನಗರದಲ್ಲಿನ ಕಲಾಶಿಬಿರ ೨೦೦೭ರಲ್ಲಿ ಹರಿಹರದಲ್ಲಿ ಆಯಾಜಿಸಿದ ಹರಿಹರ ಆಯೋಜಿಸಿದ 'ನಿಮ್ಮೊಂದಿಗೆ ನಾವು' ಕಾರ್ಯಕ್ರಮದಲ್ಲಿ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ.

ಇವರು ಹಲವಾರು ಬಹುಮಾನಗಳನ್ನು ಪಡೆದಿದದ್ದು, ೧೯೮೧ ರಲ್ಲಿ ಕರ್ನಾಟಕದ ಲಲಿತಕಲಾ ಅಕೆಡೆಮಿಯ ಮೆರಿಟ್ ಸ್ಕಾಲರ್ ಷಿಫ್, ೧೯೮೧ರಲ್ಲಿ ಸರಕಾರಿ ಚಿತ್ರಕಲೆ ಮತ್ತು ಕರಕುಶಲ ವಿದ್ಯಾಲಯ ದಾವಣಗೆರೆಯಿಂದ ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿಯನ್ನೂ ಹಾಗೂ ೧೯೮೨ ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯು ನಡೆಸುವ 'ನೀವೆ ಮಾಡಿ ನೋಡಿ' ತಾಂತ್ರಿಕ ವಸ್ತು ಪ್ರದರ್ಶನದಲ್ಲಿ ಸಮಾಧಾನಕರ ಬಹುಮಾನವನ್ನು ಪಡೆದಿದ್ದಾರೆ, ನವದೆಹಲಿಯ 'ಅವಂತಿಕಾ' ಅಂತರ ರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ ಬೆಳ್ಳಿಯ ಪದಕ ಹಾಗೂ ಕಂಚಿನ ಪದಕವನ್ನು ೨೦೦೧ರಲ್ಲ ಪಡೆದಿದ್ದು ರಾಜ್ಯಕ್ಕೆ ಹೆಸರು ತಂದು ಕೊಟ್ಟಿದ್ದಾರೆ. ಗುಲಬರ್ಗಾ ಅಕಾಡೆಮಿ ಆಫ್ ವಿಜ್ಯುವಲ್ ಆರ್ಟ ಸಂಸ್ಥೆಯು ಆಯೋಜಿಸಿದ ೫ನೇ ಅಖಿಲಭಾರತ ಚಿತ್ರಕಲಾ ಪ್ರದರ್ಶನದಲ್ಲಿ ೨೦೦೩ರಲ್ಲಿ ನಗದು ಬಹುಮಾನವನ್ನು ಸಹ ಪಡೆದಿದ್ದಾರೆ.

ರವೀಂದ್ರ ಎಸ್ ಕಮ್ಮಾರರವರ ಕಲಾಕೃತಿಗಳು ನಾಡಿನ, ರಾಜ್ಯದ ಹಲವಾರು ಕಲಾಸಂಗ್ರಹಾಲಯಗಳಲ್ಲಿ ಹಾಗೂ ಕಲಾಭಿಮಾನಿಗಳ ಮತ್ತು ಧಾರ್ಮಿಕ ವಲಯಗಳ ಸಂಗ್ರಹದಲ್ಲಿವೆ, ಅದೇ ರೀತಿಯಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು, ಹರಿಹರ ಪಾಲಿಫೈಬರ್ಸ್ ಮುಂತಾದ ಸ್ಥಳಗಳಲ್ಲಿ ಇವರ ಕಲಾಕೃತಿಗಳ ಸಂಗ್ರಹವಿದೆ.

ಶ್ರೀ ಮಲ್ಲಿಕಾರ್ಜುನ ಜಾಧವ

ಶ್ರೀಯುತ ಮಲ್ಲಿಕಾರ್ಜುನ ಜಾಧವರವರು ದಾವಣಗೆರೆಯಲ್ಲಿ ೧೯೪೩ನೇ ನವೆಂಬರದಂದು ಜನಿಸಿದರು. ತುಂಬಾ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಇವರಿಗೆ ಕಲೆಯ ಬಗ್ಗೆ ಒಂದು ರೀತಿಯ ಆತ್ಮೀಯವಾದ ಆಸಕ್ತಿಯು ಬಾಲ್ಯದಿಂದಲೇ ಬಂದಿರುವುದಾಗಿದೆ.

ತಂದೆಯಾದ ನೀಲಕಂಠಪ್ಪ ಜಾಧವ ಹಾಗೂ ತಾಯಿ ಸೀತಾಬಾಯಿಯವರ ಆಶ್ರಯದಲ್ಲಿ ಬೆಳೆದ ಮಲ್ಲಿಕಾರ್ಜುನರವರು ಬೋರ್ಡ, ಬ್ಯಾನರ್‌ಗಳನ್ನು ಬರೆಯುವುದನ್ನು ರೂಡಿಸಿಕೊಳ್ಳಲು ಹಬ್ಬ ಹೀರಯ್ಯ ಎಂಬುವರ ಹತ್ತಿರ ಸೇರಿಕೊಂಡರು, ಗುರುಗಳು ಸ್ಕೆಚ್ ಮಾಡಿದರೆ ಬಾಲಕ ಮಲ್ಲಿಕಾರ್ಜುನರವರು ಅದಕ್ಕೆ ಬಣ್ಣ ತುಂಬುತ್ತಿದ್ದರು. ಜಾಹೀರಾತು ಗೋಡೆ ಬರಹ, ಕಟೌಟ ಇತ್ಯಾದಿ ಕಾರ್ಯಗಳು ಕಲೆಯ ಒಲವು ಹೆಚ್ಚಾಗಲು ಪ್ರೇರೇಪಿಸಿದವು ಎಂದರೆ ತಪ್ಪಾಗಲಾರದು, ಆ ಸಂದರ್ಭದಲ್ಲಿ ಬ್ಯಾನರಗಳನ್ನು ಬರೆಯುತ್ತದ್ದ ಶಿವಲಿಂಗನವರಲ್ಲಿ ಚಿತ್ರ ರಚಿಸಬೇಕಾದ ವಿಧಿವಿಧಾನಗಳ ಕುರಿತು ಅಧ್ಯಯನ ಮಾಡಲು ಸೇರಿದರು. ಮುಂದೆ ೮ನೇ ತರಗತಿಯಲ್ಲಿ ಇವರ ಸ್ನೇಹಿತರಲ್ಲಿ ಒಬ್ಬರಾದ ಜೋಷಿ ಎನ್ನುವವರು ಇವರಿಗೆ ಪ್ರೇರಣೆಯನ್ನು ನೀಡಿದ ವ್ಯಕ್ತಿಯಾಗಿದ್ದಾರೆ.

ಹತ್ತನೆಯ ತರಗತಿಯವರೆಗೆ ಓದಿದ ಇವರು ಮುಂದೆ ರಜಾದಿನಗಳಲ್ಲಿ ಗಣೇಶ ಮಿಲ್‌ನಲ್ಲಿ ಕೆಲಸ ಮಾಡಿದರು. ಆಗಿನ ಅವರ ಪರಿಸ್ಥಿತಿಯು ಅವರನ್ನು ಈ ಕೆಲಸಕ್ಕೆ ಸೇರಲು ಪ್ರೇರೇಪಿಸಿತು. ಸಬ್ ಕಲೆಕ್ಟರ ಮಾರ್ಕೆಟನಲ್ಲಿ ಸುಮಾರು ನಾಲ್ಕು ವರ್ಷ ಕೆಲಸಮಾಡಿ, ಬಿಡುವಿನ ಸಮಯದಲ್ಲಿ ಇದ್ದಿಲಿನಿಂದ ಗಣೇಶ, ಶಿವ, ಬುದ್ಧ, ಮುಂತಾದವರ ಚಿತ್ರಗಳನ್ನು ಗೋಡೆಯ ಮೇಲೆ ಚಿತ್ರಿಸುತ್ತಿದ್ದರು.

ಕಲೆಯ ಮೇಲಿದ್ದ ಆಸಕ್ತಿ ಇವರನ್ನು ಇನ್ನೂ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹಾತೊರೆಯುತ್ತಿತ್ತು. ಇದಕ್ಕಾಗಿ ಮಹಾರಾಷ್ಟ್ರದ ಮುಂಬೈಯಲ್ಲಿರುವ ಸರ್,ಜೆ,ಜೆ, ಕಲಾ ಶಾಲೆಗೆ ಸೇರಲು ಪ್ರಯತ್ನಿಸಿದರು. ಆದರೆ ಆಗ ಸುಮಾರು ೧೯೬೪ರಲ್ಲ ದಾವಣಗೆರೆಯಲ್ಲಿಯೇ ಪ್ರಾರಂಭವಾದ ಸರಕಾರಿ ಚಿತ್ರಕಲೆ ಹಾಗೂ ಕರಕುಶಲ ಶಾಲೆಗೆ ಸೇರುವಂತೆ ಅವರ ಸ್ನೇಹಿತರು ಒತ್ತಡ ತಂದರು. ಆವಾಗ ತಾವು ಮಾಡುತ್ತಿದ್ದ ಕೆಲವನ್ನು ಬಿಟ್ಟು ಈ ಕಲಾಶಾಲೆಗೆ ಸೇರಿಕೊಂಡರು.

ಮೊದಲನೆಯ ವರ್ಷದಲ್ಲಿಯೇ 'ಬೆಸ್ಟ್ ಸ್ಕೆಚಿಂಗ್' ಪ್ರಶಸ್ತಿಯನ್ನು ಎಂ.ವಿ.ಮಿಣಜಗಿಯವರಿಂದ ಪಡೆದರು, ಇದಕ್ಕೆ ಅರಮನೆಯ ಕಲಾವಿದರಾಗಿದ್ದ ಸುಬ್ರಮಣ್ಯ ರಾಜುರವರಿಂದ ಪ್ರೋತ್ಸಾಹಿಸಿಕೊಂಡರು. ಇವರಿಗೆ ಪೇಂಟಿಂಗ್ ವಿಷಯದಲ್ಲಿ ಆಸಕ್ತಿಯಿದ್ದರೂ ಸಹ ಗುರುಗಳಾದ ಬಿ.ಆರ್.ಪಾಟೀಲರವರ ಮಾರ್ಗದರ್ಶನದಂತೆ ಅನ್ವಯಿಕ ಕಲಾ ವಿಭಾಗದಲ್ಲಿ

ಡಿಪ್ಲೋಮಾವನ್ನು ಮುಗಿಸಿದರು ಆದಾದ ನಂತರ ಕೆಲವು ವರ್ಷಗಳ ಕಾಲ ಭದ್ರಾವತಿಯಲ್ಲಿ ಕೆಲಸ ಮಾಡಿ ಬೆಂಗಳೂರಿಗೆ ಬಂದು ಅಲ್ಲಿ ನೆಲೆ ನಿಂತು ಹಲವಾರು ಕಲಾಕೃತಿಗಳನ್ನು ರಚಿಸಿದರು. ಅಲ್ಲಿಂದ ಮುಂದಕ್ಕೆ ದಾವಣಗೆರೆಯ ಕಲಾ ಶಾಲೆಗೆ ೧೯೬೯ರಲ್ಲಿ ಬಂದು ಉಪನ್ಯಾಸಕ ವೃತ್ತಿಯನ್ನು ಕೈಗೊಂಡರು. ಮುಖ್ಯವಾಗಿ ಸಾಮಾಜಿಕ ಕಳಕಳಿಯನ್ನು ಹೊಂದಿದ ಶ್ರೀಯುತ ಮಲ್ಲಿಕಾರ್ಜುನ ಜಾಧವರವರ ಕಲಾಕೃತಿಗಳಲ್ಲಿ ತಮ್ಮ ಭಾವನೆಗಳೊಂದಿಗೆ ಬಣ್ಣಗಳ ಮುಖಾಂತರ ಅಭಿವ್ಯಕ್ತಿ, ವ್ಯಕ್ತ ಪಡಿಸುವ ರೀತಿ ತುಂಬಾ ಗಮನಾರ್ಹವಾಗಿದೆ.

ಕಲಾಕೃತಿಗಳ ಅಭಿವ್ಯಕ್ತಿಯ ಪ್ರಕಾರಗಳಲ್ಲಿ ಹಲವಾರು ಪ್ರಕಾರಗಳಿದ್ದು ಹಲವಾರು ಪಂಥಗಳನ್ನೊಳಗೊಂಡು ಬಂದಿವೆ. ಇಂಪ್ರೆಷನಿಸಂ, ಎಕ್ಸಪ್ರೇಷನಿಸಂ, ಸರ್ರಿಲಿಸಂ, ಫಾವಿಜಂ, ಕ್ಯೂಬಿಸಂ, ಮುಂತಾದ ಪಂಥಗಳ ಹೆಸರುಗಳನ್ನು ಹೊತ್ತುಕೊಂಡು ಹಲವಾರು ಕಲಾಕೃತಿಗಳು ರಚನೆಯಾಗಿವೆ. ಈ ನಿಟ್ಟಿನಲ್ಲಿ ಶ್ರೀಯುತ ಮಲ್ಲಿಕಾರ್ಜುನ್ ಜಾಧವರವರಿಗೆ ಪ್ರಭಾವ ಕಲಾ ಪಂಥವಾದ ಸರ್ರಿಲಿಸಂ ಪಂಥ ಹಾಗೂ ಆ ಪಂಥದ ಪ್ರಮುಖ ಕಲಾಕೃತಿಗಳಲ್ಲಿ ಹುಟ್ಟು ವಿಕಾಸವನ್ನು ಪ್ರಮುಖವಾಗಿಟ್ಟುಕೊಂಡು ರಚಿಸಲಾದ ಕಲಾಕೃತಿಯಲ್ಲಿ ಸಾಂಕೇತಿಕ ಆಕೃತಿಗಳಾದ ತ್ರಿಬುಜ, ವೃತ್ತಗಳನ್ನು ಬಳಸಿಕೊಂಡು ಪ್ರಕೃತಿಯಲ್ಲಿನ ಹುಟ್ಟಿನ ಕುರಿತಾಗಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ ಹಾಗೂ ಮಾನವನ ವಿಕಾಸದ ಕುರಿತಾಗಿ ಬಳಸಲಾದ ಅಕ್ಷರ ಸಂಕೇತಗಳನ್ನು ಬದುಕಿನ ಸಂಕೇತಗಳಾಗಿ ಉಪಯೋಗಿಸಿರುವುದನ್ನು ಕಾಣಬಹುದು.

ಅನ್ವಯಿಕ ಕಲೆಯಲ್ಲದೇ ಲಲಿತಕಲೆಯಲ್ಲೂ ಸಾದನೆಗೈದು ರಾಜ್ಯಮಟ್ಟದ ಹಲವಾರು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ೧೯೯೭ರಲ್ಲಿ ಇವರು ರಚಿಸಿದ ಭಾವ ಚಿತ್ರಕ್ಕೆ ಲಲಿತಕಲಾ ಅಕಾಡೆಮಿಯಿಂದ ದ್ವಿತೀಯ ಸ್ಥಾನ ಲಭಿಸಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಇವರು ಕಲಾಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗಮನಿಸಿ ಇವರಿಗೆ ೨೦೦೮ರಲ್ಲಿ ಗೌರವ ಪ್ರಶಸ್ತಿಯನ್ನು ನೀಡಗೌರವಿಸಿದೆ.

ಶ್ರೀಯುತ ಜೆ.ಮಲ್ಲಿಕಾರ್ಜುನ ಇವರು ಅನ್ವಯಿಕ ಕಲೆಯ ವಿಷಯದ ಕುರಿತಾಗಿ ಇವರು ಬರೆದ 'ಚಿತ್ರಕಲೆ ಮತ್ತು ಸಂವಹನ' ಎಂಬ ಕಿರು ಪುಸ್ತಕವನ್ನು ೧೯೯೬ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಬಿಡುಗಡೆ ಮಾಡಿದೆ. ನಾಟಕ ಹಾಗೂ ಸಾಹಿತ್ಯದಲ್ಲಿ ಅಭಿರುಚಿವುಳ್ಳವರಾಗಿದ್ದು ಮತ್ತು ವೈಚಾರಿಕ ವಾಕ್ ಪ್ರತಿಭೆಯನ್ನು ಹೊಂದಿದ ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿಯೂ ಸಹ ಸೇವೆಯನ್ನು ಸಹ ಸಲ್ಲಿಸಿದ್ದಾರೆ.

ಶ್ರೀ ಶಂಕರ್. ಸಿ. ಪಾಟೀಲ

ಶ್ರೀ ಶಂಕರ್. ಸಿ. ಪಾಟೀಲರವರು ದಿನಾಂಕ: ೧-೬-೧೯೪೭ ರಂದು ಶ್ರೀ ಕೊಗೇರಿ

ಪಾಟೀಲ ಹಾಗೂ ಶ್ರೀಮತಿ ಸಾವಿತ್ರಿದೇವಿಯವರ ಮೂರನೆಯ ಪುತ್ರನಾಗಿ ಧಾರವಾಡ ಜಿಲ್ಲೆಯ ಗರಗ ಎಂಬ ಹಳ್ಳಿಯಲ್ಲಿ ಜನಿಸಿದರು, ಅಣ್ಣಂದಿರಾದ ಶೀ ಅನ್ನದಾನಿ. ಸಿ, ಪಾಟೀಲ ಹಾಗೂ ಶ್ರೀ ಲಿಂಗರಾಜ. ಸಿ, ಪಾಟೀಲರ ನಂತರ ಜನಿಸಿದ ಶಂಕರ, ಪಾಟೀಲರವರು ಬಾಲ್ಯದಿಂದಲ್ಲಿಯೇ ಕಲೆಯ ಬಗ್ಗೆ ಹೆಚ್ಚಿನ ಒಲವು ಉಳ್ಳವರಾಗಿದ್ದರು.

ಶ್ರೀ ಶಂಕರ್. ಸಿ. ಪಾಟೀಲರವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಬಿಜಾಪುರದಲ್ಲಿರುವ ಎಸ್.ಎಸ್. ಮಾಧ್ಯಮಿಕ ಶಾಲೆಯಲ್ಲಿ ಪೂರೈಸಿದರು. ಇವರು ಡಿಪ್ಲೋಮಾ ಕಲಾಶಿಕ್ಷಣವನ್ನು ಧಾರವಾಡದಲ್ಲಿರುವ ಹಾಲಭಾವಿಸ್ಕೂಲ್ ಆಫ್ಆರ್ಟನಲ್ಲಿ ಪೂರೈಸಿ, ಮಹಾರಾಷ್ಟ್ರದ ಮುಂಬೈಯಲ್ಲಿರುವ ಸರ್.ಜೆ.ಜೆ. ಕಲಾಶಾಲೆಯಲ್ಲಿ ಅನ್ವಯಿಕ ಕಲೆಯಲ್ಲಿ ಡಿಪ್ಲೋಮಾ ಪದವಿ ಪಡೆದರು ಮುಗಿಸಿದರು.

ಕಲಾ ವಿದ್ಯಾಭ್ಯಾಸದ ನಂತರ ೧೯೬೮ರಲ್ಲಿ ದಾವಣಗೆರೆಯಲ್ಲಿರುವ ಸರಕಾರಿ ಚಿತ್ರಕಲಾ ಮತ್ತು ಕರಕುಶಲ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಈ ಕಲಾ ಶಾಲೆಯಲ್ಲಿ ಆಯ್ಕೆಗೊಂಡು ಕಲಾ ಶಿಕ್ಷಣ ಸೇವೆ ಪ್ರಾರಂಭಿಸಿದರು. ಶ್ರೀ ಎಸ್.ಸಿ. ಪಾಟೀಲ್‌ರವರು ನಂತರದಲ್ಲಿ ಇದೇ ಕಲಾ ಶಾಲೆಯಲ್ಲಿ ಅನ್ವಯಿಕ ಕಲಾ ವಿಭಾಗದ ಮುಖ್ಯಸ್ಥರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.

ಅಪಾರವಾದ ಪಾಂಡಿತ್ಯವನ್ನು ಹೊಂದಿದ ಶ್ರೀ ಶಂಕರ್. ಸಿ. ಪಾಟೀಲರವರಿಗೆ ಸಾಹಿತ್ಯ, ಸಂಗೀತಗಳಲ್ಲಿ ಈ ಕಲೆಯ ಜೊತೆಯಾಗಿಯೇ ಬಂದವು. ಹೈದರಾಬಾದನಲ್ಲಿರುವ 'ಸಾಲಾರಜಂಗ್' ವಸ್ತು ಸಂಗ್ರಹಾಲಯದಲ್ಲಿ ಕಮೀಟಿ ಬೋರ್ಡನ ನಿರ್ದೇಶಕರಾಗಿ ನೇಮಕಗೊಂಡ ಪ್ರಥಮ ಕನ್ನಡಿಗ ಎಂಬ ಪ್ರಶಂಸೆಗೂ ಪಾತ್ರರಾಗಿದ್ದಾರೆ. ಶ್ರೀ ಶಂಕರ್. ಸಿ. ಪಾಟೀಲರವರು ಅನೇಕ ರಾಜ್ಯ ಮತ್ತು ರಾಷ್ಟ್ರ-ಅಂತರಾಷ್ಟ್ರೀಯ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಇವರ ರಾಜ್ಯ ಮಟ್ಟದ ಕಲಾ ಪ್ರದರ್ಶನಗಳು

೧೯೬೯ ರಿಂದ ೧೯೭೨ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಡೆಯುವ ಹಾಗೂ ಕರ್ನಾಟಕ ಕಲಾ ಮೇಳ ಬೆಂಗಳೂರಿನಲ್ಲಿ ಸುಮಾರು ೧೯೮೧ ರಿಂದ ೧೯೮೮ರವರೆಗೆ ನಡೆದ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ೧೯೯೦ ರಲ್ಲಿ ಮಂಗಳೂರಿನಲ್ಲಿ ನಡೆದ ಮಂಜಯ್ಯ ಹೆಗ್ಗಡೆ ಸೆಂಚೂರಿ ಪ್ರದರ್ಶನದಲ್ಲಿ ಹಾಗೂ ೧೯೯೧ ರಲ್ಲಿ ಜಾನಪದ ಕಲಾ ಮೇಳ ಬಿಜಾಪುರದಲ್ಲಿ ನಡೆದ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಹಲವಾರು ರಾಷ್ಟ್ರೀಯ ಮಟ್ಟದ ಕಲಾಪ್ರದರ್ಶನದಲ್ಲೂ ಸಹ ಇವರು ಭಾಗಿಯಾಗಿ ನಾಡಿನ ಹಿರಿಮೆಗೆ ಗೌರವವನ್ನು ತಂದಿದ್ದಾರೆ. ೧೯೮೩ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ೧೯೮೮ರಲ್ಲಿ ಮೈಸೂರು ದಸರಾ ಬೆಳ್ಳಿ ಮಹೋತ್ಸವ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ.

೧೯೯೧ರಲ್ಲಿ ವಿಜಯ ಕಾಲೇಜ ಆಫ್ ಫೈನ್‌ಆರ್ಟ್ ಧಾರವಾಡದಲ್ಲಿ ನಡೆದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಮತ್ತು ೧೯೯೨ರಲ್ಲಿ 'ಐಡಿಯಲ್ ಫೈನ್‌ಆರ್ಟ್ ಬೆಳ್ಳಿ ಮಹೋತ್ಸವ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿಯೂ ಸಹ ಭಾಗವಹಿಸಿದ್ದಾರೆ. ೧೯೯೪ರಲ್ಲಿ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ ಮದ್ರಾಸ್, ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಬಿಜಾಪುರ, ೭ನೇಯ ರಾಷ್ಟ್ರೀಯ ಕಲಾಮೇಳ ದಿಲ್ಲಿಯಲ್ಲಿ ಭಾಗವಹಿಸಿದ್ದಾರೆ.

ಶ್ರೀ ಶಂಕರ್. ಸಿ. ಪಾಟೀಲರು ಪಡೆದ ಪ್ರಶಸ್ತಿ ಪುರಸ್ಕಾರಗಳು.

೧೯೬೧ ರಿಂದ ೧೯೭೨ ರವರೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಚಿತ್ರಕಲಾ ಪ್ರದರ್ಶನಗಳಲ್ಲಿ, ೧೯೭೬ ರಲ್ಲಿ ಲಯನ್ಸ್ ಕ್ಲಬ್ ಪ್ರದರ್ಶನ ಧಾರವಾಡದಲ್ಲಿ ೧೯೯೦ ರಲ್ಲಿ ಮಂಜಯ್ಯ ಸೆಂಚೂರಿ ಚಿತ್ರಕಲಾ ಪ್ರದರ್ಶನ ಮಂಗಳೂರು, ೧೯೯೬ರಲ್ಲಿ ಬೆಂಗಳೂರಿನ ಟ್ರಾವೆಲ್ಸ್ ಸ್ಕಾಲರ್‌ಷಿಪ್‌ವನ್ನು ಸಹ ಪಡೆದಿದ್ದಾರೆ. ಕರ್ನಾಟಕದ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ೧೯೯೮ರಲ್ಲಿ ಪಡೆದಿದ್ದಾರೆ.

ಶ್ರೀ ಶಂಕರ್. ಸಿ. ಪಾಟೀಲರ ಚಿತ್ರಕಲಾಕೃತಿಗಳ ಸಂಗ್ರಹಗಳು

೧. ಕ್ಷೀನಿ ಆರ್ಟ ಸೊಸೈಟಿ ಮ್ಯೂಜಿಯಂ, ಇಲ್ಲೊನ್ಯರ್ಸ್(ಯು.ಎಸ್,ಎ)
೨. ಮೈನೆ ವಿಶ್ವವಿದ್ಯಾಲಯ, (ಯು.ಎಸ್.ಎ)
೩. ರಾಷ್ಟ್ರೀಯ ಲಲಿತಕಲಾ ಅಕಾಡೆಮಿ, ದೆಲ್ಲಿ.
೪. ರಾಷ್ಟ್ರೀಯ ಲಲಿತಕಲಾ ಅಕಾಡೆಮಿ, ಮದ್ರಾಸ್.
೫. ಆಂದ್ರಪ್ರದೇಶ ಲಲಿತಕಲಾ ಅಕಾಡೆಮಿ ಹೈದರಾಬಾದ.
೬. ಕರ್ನಾಟಕದ ಲಲಿತಕಲಾ ಅಕಾಡೆಮಿ, ಬೆಂಗಳೂರು.
೭. ಸರಕಾರಿ ವಸ್ತು ಸಂಗ್ರಹಾಲಯ ಹಾಗೂ ವೆಂಕಟಪ್ಪ ಆರ್ಟ್‌ಗ್ಯಾಲರಿ, ಬೆಂಗಳೂರು.
೮. 'ಫೋಕ್ ಲೋರ್' ಸಂಗ್ರಹಾಲಯ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರ,
೯. 'ಏರ್ ಇಂಡಿಯಾ' ಮುಂಬಯಿ.
೧೦. ಮಂಜುಷಾ ಮ್ಯೂಜಿಯಂ ಧರ್ಮಸ್ಥಳ.

ಅಲ್ಲದೆ ರಾಜ್ಯ ಹಾಗೂ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಕಲಾಸಂಗ್ರಹಾಲಯಗಳಲ್ಲಿ ಇವರ ಕಲಾ ಕೃತಿಗಳು ಸಂಗ್ರಹಿತವಾಗಿವೆ.

ಶ್ರೀ ಶಂಕರ್. ಸಿ. ಪಾಟೀಲರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು

ಸ್ಕೂಲ್ ಆಫ್ ಆರ್ಟ ಧಾರವಾಡ, ಛೇಂಬರ್ ಆಫ್ ಕಾಮರ್ಸ ಹಾಲ್ ಹುಬ್ಬಳ್ಳಿ 'ತಾಜ್' ಆರ್ಟ ಗ್ಯಾಲರಿ ಮುಂಬಯಿ, ಮ್ಯಾಕ್ಸ, ಮಿಲ್ಲರ್ ಭವನ ಬೆಂಗಳೂರು, ಮ್ಯಾನೇರಸ್ ಬ್ರೆಗಾಂಜಾ ಹಾಲ್, ಪಣಜಿ. (ಗೋವಾ), "ಇಲ್‌ನಾಯ್ಸ ಸ್ಟೇಟ್ಸ್" ಯು.ಎಸ್.ಎ. ಆಂದ್ರಪ್ರದೇಶ

ಲಲಿತಕಲಾ ಅಕಾಡೆಮಿ ಗ್ಯಾಲರಿ ಹೈದರಾಬಾದ ಕಲಾಗುರು ಆರ್ಟ್ ಗ್ಯಾಲರಿ ದಾವಣಗೆರೆ ವಾಂಗಮಯ ಚರ್ಚಾ ಮಂಡಳಿ ಬೆಳಗಾಂ, ಚಿತ್ರಕಲಾ ಪರಿಷತ್ ಹಾಗೂ ಫ್ರೆಂಚ್ ಕಲ್ಚರ್ ಸೆಂಟರ್ ಬೆಂಗಳೂರು ಮುಂತಾದ ಹಲವಾರು ಪ್ರದೇಶಗಳಲ್ಲಿ ತಮ್ಮ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದ್ದು ಕಲಾಭಿಮಾನಿಗಳ ಹೃದಯದಲ್ಲಿ ಇವರು ತಮ್ಮ ಸ್ಥಾನವನ್ನು ಭದ್ರವಾಗಿಸಿಕೊಂಡಿದ್ದಾರೆ.

ಶ್ರೀ ಬಿ. ಆರ್. ಕೋರ್ತಿ

ಶ್ರೀ ಬಿ.ಆರ್. ಕೋರ್ತಿಯವರು ೧೯೪೪ರಲ್ಲಿ ಬಿಜಾಪುರನಲ್ಲಿ ಜನಿಸಿದರು. ತಂದೆ ರಾಚಪ್ಪ ಕೋರ್ತಿ ಹಾಗೂ ತಾಯಿ ಮಲ್ಲಮ್ಮನವರ ಒಡಲಿನಲ್ಲಿ ಜನಿಸಿದ ಇವರು ಬಾಲ್ಯದಲ್ಲಿ ಹಲವಾರು ಕಷ್ಟಗಳನ್ನು ಎದುರಿಸಿದ್ದಾರೆ, ಜಮೀನುಗಳಲ್ಲಿ ಕೆಲಸಮಾಡಿ, ಕೂಲಿಮಾಡಿಕೊಂಡು ಜೀವನ ಸಾಗಿಸುವಂತಹ ಪರಿಸ್ಥಿತಿ ಇತ್ತು ಹಾಗೂ ಕೂಲಿಗಾಗಿ ದೊಡ್ಡ ದೊಡ್ಡ ಊರುಗಳಿಗೆ ಹೋಗಬೇಕಾಗಿ ಬರುತ್ತಿತ್ತು. ಅವರ ಮನೆಯು ಜೀನುಗಾರರ ಗಲ್ಲಿಯಲ್ಲಿಯೇ ಇದ್ದುದರಿಂದ ಕಲೆಯ ಪ್ರಭಾವ ಇವರ ಮೇಲೆ ತನ್ನಿಂದ ತಾನೇ ಬೀಳತೊಡಗಿತು. ಕೋರ್ತಿಯವರು ಚಿಕ್ಕವರಿದ್ದಾಗ ಶಾಲೆಗೆ ಹೋಗುವುದನ್ನು ತಪ್ಪಿಸಿಕೊಂಡು ಜೀನುಗಾರರ ಮನೆಯಲ್ಲಿ ಮೂರ್ತಿಗಳಿಗೆ ಬಣ್ಣಮಾಡಲು ಹೋಗುತ್ತಿದ್ದರು. ಮನೆಯಲ್ಲಿ ಎಲ್ಲರ ಒತ್ತಾಯದ ಮೇರೆಗೆ ಹಾಗೂ ಹೀಗೂ ಕಷ್ಟಪಟ್ಟು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು.

ಶ್ರೀ ಬಿ.ಆರ್. ಕೋರ್ತಿಯವರಿಗೆ ಈ ಕಲೆಯ ಮೇಲಿರುವ ಆಸಕ್ತಿಯು ಅವರನ್ನು ಕಲಾಭ್ಯಾಸಕ್ಕಾಗಿ ಹುಬ್ಬಳ್ಳಿಗೆ ಕರೆತಂದಿತು. ಹುಬ್ಬಳ್ಳಿಯಲ್ಲಿರುವ ಶ್ರೀ ವಿಜಯಮಹಾಂತೇಶ ಕಲಾ ಶಾಲೆಗೆ ಸೇರಿ ತಮ್ಮ ಚಿತ್ರಕಲೆಯ ಅಧ್ಯಯನವನ್ನು ಪ್ರಾರಂಭಿಸಿದರು ಅಲ್ಲಿಯ ಖರ್ಚು ವೆಚ್ಚಗಳಿಗೆ ಫೋಟೋ ಸ್ಟುಡಿಯೊ ಹಾಗೂ ಬೋರ್ಡಬರೆದು ಆ ಹಣದಿಂದ ಸಲಕರಣಿಗಳನ್ನು ತೆಗೆದುಕೊಂಡು ಅಧ್ಯಯನವನ್ನು ಮುಂದುವರೆಸಿದರು. ೧೯೬೮ರಲ್ಲಿ ಚಿತರಕಲೆಯಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದ ಇವರು ೧೯೭೩ ಬೆಂಗಳೂರಿನಲ್ಲಿ ಆರ್ಟಮಾಸ್ಟರ್ ಪದವಿಯನ್ನು ಸಹ ಪಡೆದರು. ೧೯೭೪ರಲ್ಲಿ ಭಾರತ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನಾ ನಿರ್ದೇಶನಾಲಯದಲ್ಲಿ ಕಲೆ ಮತ್ತು ಕುಟುಂಬ ಕಲ್ಯಾಣ ಯೋಜನಾ ನಿರ್ದೇಶನಾಲಯದಲ್ಲಿ ಕಲೆ ಮತ್ತು ಛಾಯಾಗ್ರಹಣದಲ್ಲಿ ತರಬೇತಿಯನ್ನು ಪಡೆದರು. ೧೯೭೯ರಲ್ಲಿ ದಾವಣಗೆರೆಯಲ್ಲಿರುವ ಕಲಾ ಶಾಲೆಯಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡು ಮುಂದೆ ಪೆಂಟಿಂಗ್‌ವಿಭಾಗದ ಮುಖ್ಯಸ್ಥರಾಗಿ ಸೇವೆಯನ್ನು ಸಲ್ಲಿಸಿ ೨೦೦೪ರ ನಿವೃತ್ತರಾದರು.

ಶ್ರೀಯುತ ಬಿ.ಆರ್. ಕೋರ್ತಿಯವರು ಹಲವಾರು ಏಕವ್ಯಕ್ತಿ ಕಲಾಪ್ರದರ್ಶನ, ಹಾಗೂ ಸಮೂಹ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ೧೯೮೩, ೮೫ ಹಾಗೂ ೯೬ರಲ್ಲಿ ಲಲಿತಕಲಾ ಮಹಾವಿದ್ಯಾಲಯದ ಅಧ್ಯಾಪಕರ ಸಮೂಹ ಚಿತ್ರಕಲಾ ಪ್ರದರ್ಶನದಲ್ಲಿ

ಭಾಗವಹಿಸಿದ್ದಾರೆ. ೧೯೮೦ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಹಾಯ ಧನ ಪಡೆದು ಕಲಾಗುರು ಆರ್ಟ ಗ್ಯಾಲರಿ ದಾವಣಗೆರೆಯಲ್ಲಿ ಏಕವ್ಯಕ್ತಿ ನಿಸರ್ಗ ಚಿತ್ರ ಪ್ರದರ್ಶನ ಹಾಗೂ ೧೯೮೪ ಪ್ರಾತ್ರಿಕ್ಷತೆ ಹಾಗೂ ನಿಸರ್ಗ ಚಿತ್ರಕಲಾ ಪ್ರದರ್ಶನದಲ್ಲಿನ ಏರ್ಪಡಿಸಿದ್ದಾರೆ. ಕಲಾಕುಂಚ ಸಾಂಸ್ಕೃತಿಕ ಸಂಘ ದಾವಣಗೆರೆ ಇವರ ಸಹಯೋಗದೊಂದಿಗೆ ಏಕವ್ಯಕ್ತಿ ನಿಸರ್ಗ ಚಿತ್ರಕಲಾ ಪ್ರದರ್ಶನವನ್ನು ೧೯೯೫ರಲ್ಲಿ ಹಾಗೂ ೨೦೦೦ರಲ್ಲಿ ಧಾರವಾಡದ ಸರಕಾರಿ ಆರ್ಟ ಗ್ಯಾಲರಿಯಲ್ಲಿ ಏಕವ್ಯಕ್ತಿ ನಿಸರ್ಗ ಚಿತ್ರಕಲಾ ಪ್ರದರ್ಶನದಲ್ಲೂ ಭಾಗವಹಿಸಿದ್ದಾರೆ.

ಮೈಸೂರು ದಸರಾ ಚಿತ್ರಕಲಾ ಪ್ರದರ್ಶನ, ಅಖಿಲಭಾರತ ಚಿತ್ರಕಲಾ ಪ್ರದರ್ಶನ ಗದಗ, ೬೧ನೇ ಕನ್ನಡ ಸಾಹಿತ್ಯ ಸಮ್ಮೇಳನ ದಾವಣಗೆರೆ, ಅಖಿಲಭಾರತ ಜಲವರ್ಣ ಕಲಾ ಪ್ರದರ್ಶನ ಧಾರವಾಡ ಹಾಗೂ ನವದೆಹಲಿಯಲ್ಲಿ ನಡೆದ ೭೦ನೇ ಅಖಿಲ ಭಾರತ ಕಲೆ ಮತ್ತು ಕರಕುಶಲ ಕಲಾ ಪ್ರದರ್ಶನದಲ್ಲಿಯೂ ಸಹ ಭಾಗವಹಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಐದು ಬಾರಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಹೀಗೆ ಇವರು ರಾಜ್ಯ ಮತ್ತು ರಾಷ್ಟ್ರದ ಹಲವಾರು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ನಾಡಿಗೆ ಹಾಗೂ ಜಿಲ್ಲೆಗೂ ಹೆಸರನ್ನು ತಂದಿದ್ದಾರೆ.

ಶ್ರೀ ಬಿ.ಆರ್. ಕೋರ್ತಿಯವರು ಹಲವಾರು ಪ್ರಶಸ್ತಿಗಳಿಗೆ, ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಹಲವಾರು ಸಂಘ ಸಂಸ್ಥೆಗಳಿಗೆ ಸದಸ್ಯರಾಗಿಯೂ ಸಹ ಕೆಲಸಮಾಡಿದ್ದಾರೆ. ೧೯೭೦ರಲ್ಲಿ ಮೈಸೂರ ಆರ್ಟ ಕೌನ್ಸಿಲ್ ದಾವಣಗೆರೆ, ೧೯೯೮ರಿಂದ ೨೦೦೧ರವರೆಗೆ ಕರ್ನಾಟಕ ರಾಜ್ಯದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಹಲವಾರು ಕಾರ್ಯಗಳನ್ನು ಕೈಗೊಂಡು ಕಲಾ ಕ್ಷೇತ್ರಕ್ಕೆ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ.

ಶ್ರೀ ಬಿ.ಆರ್. ಕೋರ್ತಿಯವರಿಗೆ ನಿಸರ್ಗ ಚಿತ್ರದ ರಚನೆಯೆಂದರೆ ಅತ್ಯಂತ ಅಚ್ಚುಮೆಚ್ಚು, ನಿಸರ್ಗ ಚಿತ್ರದಲ್ಲಿ ನೈಜ ಶೈಲಿಯ ರಚನೆಗೆ ಖ್ಯಾತರಾಗಿದ್ದಾರೆ. ಈ ಮಾಧ್ಯಮವನ್ನು ತುಂಬ ಸ್ವಚ್ಛವಾಗಿರಿಸಿಕೊಳ್ಳುವದು ಮತ್ತು ವರ್ಣಗಳ ತಾಜಾತನವನ್ನು ಉಳಿಸಿಕೊಳ್ಳುವುದರ ಜೊತೆಗೆ ಮಿತ ವರ್ಣಗಾರಿಕೆಯ ಮೂಲಕ ನಿಸರ್ಗದ ಪ್ರತಿಕೃತಿಯನ್ನು ಗರಿಷ್ಠ ಪ್ರಮಾಣದಲ್ಲಿ ತೋರ್ಪಡಿಸುವುದು ಇವರ ಕಲೆಯ ವೈಶಿಷ್ಟ್ಯ.

ಕಲಾವಿದರಾಗಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ, ಕಲಾಶಿಬಿರ ಕಲಾ ಕಾರ್ಯಾಗಾರದ ವಿಚಾರ ನಿರಂತರ ಇತ್ಯಾದಿ ಕಲಾ ಕುರಿತಂತೆ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿ ರಾಷ್ಟ್ರ ಮಟ್ಟದ ಖ್ಯಾತಿ ಪಡೆದಿರುವುದು ಇವರ ಅಧ್ಯಯನದಿಂದ ತಿಳಿಯಬಹುದಾಗಿದೆ. ಜನಪದರ ಜೀವನದ ಸುತ್ತ ಮುತ್ತಲಿನ ವಿಷಯ ಇವರ ಕೃತಿಗಳಲ್ಲಿ ಮುಖ್ಯ ವಸ್ತುವಾಗಿದೆ. ಇದನ್ನು ರೇಖಾ ಮತ್ತು ತೈಲವರ್ಣದಲ್ಲಿ, ಮಿಶ್ರ ಮಾಧ್ಯಮಗಳಲ್ಲಿ ಚಿತ್ರಿಸಿದ್ದಾರೆ.

– * –





ಪ್ರೊ|| ಪಿ.ಬಿ. ಹಿರೇಗೌಡರ ರವರ ಕಲಾಕೃತಿಗಳು












ಶ್ರೀ ಶಂಕರ ಪಾಟೀಲ ರವರ ಕಲಾಕೃತಿಗಳು











ಶ್ರೀ ಮಲ್ಲಿಕಾರ್ಜುನ ಜಾಧವ ರವರ ಕಲಾಕೃತಿಗಳು









ಶ್ರೀ ಕಾಳಿದಾಸ ಪತ್ತಾರ ರವರ ಕಲಾಕೃತಿಗಳು














ಶ್ರೀ ಬಿ.ಆರ್. ಕೋರ್ತಿ ರವರ ಕಲಾಕೃತಿಗಳು









ಶ್ರೀಮತಿ ಸೈಬಿದಾ ಬೇಗಂ ರವರ ಕಲಾಕೃತಿಗಳು







ಶ್ರೀ ರವೀಂದ್ರ ಕಮ್ಮಾರ ರವರ ಕಲಾಕೃತಿಗಳು







ಅಧ್ಯಾಯ: ೬

ಸಮಾರೋಪ

ಪ್ರಸ್ತಾವನೆ

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನದ ಸ್ವರೂಪ, ಅಧ್ಯಯನದ ವೈಧಾನಿಕತೆ ಮತ್ತು ಮೂಲ ಆಕರ ಸಾಮಗ್ರಿ, ಅನುಷಂಗಿಕ ಆಕರ ಸಾಮಗ್ರಿಯ ಕುರಿತಾಗಿ ವಿವರಣೆಯನ್ನು ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯ ಚಾರಿತ್ರಿಕ, ಔದ್ಯಮಿಕ, ಸಾಂಸ್ಕೃತಿಕ ಪರಿಸರದ ಬಗ್ಗೆ ಹಾಗೂ ದಾವಣಗೆರೆ ಜಿಲ್ಲೆಯ ಭೌಗೋಳಿಕ ಲಕ್ಷಣಗಳನ್ನು, ಈ ಜಿಲ್ಲೆಯ ಸಾಮಾನ್ಯ ಪರಿಚಯವನ್ನು ಮಾಡಿಕೊಡಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿರುವ ಲಲಿತಕಲೆಗಳಾದ ಚಿತ್ರ–ಶಿಲ್ಪ–ವಾಸ್ತುಶಿಲ್ಪ ನೃತ್ಯ–ಸಂಗೀತ–ನಾಟಕ ಮುಂತಾದವುಗಳ ಬಗ್ಗೆ ಮೊದಲಿನಿಂದ ಇಲ್ಲಿಯವರೆಗೂ ನಡೆದು ಬಂದ ವಿಧಾನದ ಬಗ್ಗೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಜನಪದ ಕಲೆಯ ಸ್ವರೂಪ, ಲಕ್ಷಣ ಇವುಗಳ ಕುರಿತು ಇವುಗಳಿಗೆ ಸಂಭಂದ ಪಟ್ಟಂತೆ ಹಲವಾರು ವಿವರಣೆಗಳೊಂದಿಗೆ ಜನಪದ ಕಲೆಯಲ್ಲಿ ಬರುವಂತಹ ಪ್ರಕಾರಗಳನ್ನು ತಿಳಿಸಲಾಗುವುದು. ದಾವಣಗೆರೆ ಜಿಲ್ಲೆಯ ಜನಪದ ಚಿತ್ರಕಲೆ ಬಹು ಆಕರ್ಷಕವಾಗಿರುವುದಲ್ಲದೇ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ.

ಇಲ್ಲಿಯ ಹಲವಾರು ಜನಾಂಗಗಳಲ್ಲಿ ಹಚ್ಚೆ ಹಾಕಿಕೊಳ್ಳುವ ಸಂಪ್ರದಾಯವಿದೆ. ಅವುಗಳು ಕೆಲವೊಂದು ಜನಾಂಗಗಳಲ್ಲಿ ಈಗಲೂ ಕಾಣುತ್ತವೆ. ಗ್ರಹಾಲಂಕರಣದಲ್ಲಿ, ಮನೆಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಮನೆಗಳಿಗೆ ಸುಣ್ಣ ಬಣ್ಣ ಬಳಿದು ಹುರಮಂಜಿನಿಂದ ಚಿತ್ರ ರಚಿಸುವ ಚಿತ್ರವಿನ್ಯಾಸಗಳು ಹಾಗೂ ಜಗಲಿಗಳ ಮೇಲೆ, ದೇವರ ಮಂಟಪದ ಮುಂಭಾಗದಲ್ಲಿ, ರಂಗೋಲಿಯನ್ನು ಹಾಕುವ ಸಂಪ್ರದಾಯವಿದೆ. ಇವುಗಳ ವಿಚಾರವಾಗಿ ಜನಪದ ಚಿತ್ರಗಳನ್ನು ವರ್ಗೀಕರಿಸಿಕೊಂಡು ಈ ಅಧ್ಯಾದಲ್ಲಿ ವಿವರಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಸೌಂದರ್ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದರಲ್ಲಿ ಕಲೆಯ ಪಾತ್ರ ತುಂಬಾ ಹಿರಿದಾಗಿದೆ ಅದರಂತೆ ದಾವಣಗೆರೆ ಜಿಲ್ಲೆಯಲ್ಲಿ ಹಲವಾರು ಇತಿಹಾಸವನ್ನು ಹೊಂದಿದ ಕಲಾಶಾಲೆಯ ಬಗ್ಗೆ ವಿವರಣೆ ಇದೆ. ದಾವಣಗೆರೆ ಕಲಾ ಶಾಲೆಯ ಹಲವಾರು ವಿದ್ಯಾರ್ಥಿಗಳನ್ನು ಕಲೆಯಲ್ಲಿ ತರಬೇತಿಯನ್ನು ಕೊಡುತ್ತಾ ಅವರ ಪ್ರತಿಭೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಷ್ಟರ ಮಟ್ಟಿಗೆ ತರಬೇತಿಯನ್ನು ಕೊಡುತ್ತಾ ಬಂದಿದೆ. ಈ ಕಲಾಸಂಸ್ಥೆಯು ಸ್ಥಾಪನೆಗೊಂಡಿದ್ದು ೪೦ ವರ್ಷಗಳ ಹಿಂದೆ. ಇದು ತನ್ನ ಪ್ರಭಾವದಿಂದ ಯುವ ಕಲಾವಿದರನ್ನು ತನ್ನ ಬಳಿ ಸೆಳೆಯುತ್ತಾ, ಹೊರಗಿನ ಕಲಾಭಿಮಾನಿಗಳಿಗೆ ನೆರವಾಗುತ್ತಾ, ಅವನಲ್ಲಿ ಕಲಾಭಿರುಚಿ ಬೆಳೆಸಲು ಉತ್ತಮವಾಗಿ ಸೇವೆಯನ್ನು ಮಾಡುತ್ತಿದೆ. ಈ ಸಂಸ್ಥೆಯಲ್ಲಿ ವರ್ಣಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ ಕಲೆ, ಅನ್ವಯಕ ಕಲೆ ವಿಭಾಗಗಳಲ್ಲಿ ತರಬೇತಿಯನ್ನು ಕೊಡುತ್ತಿದ್ದು, ಆಯಾ ವಿಭಾಗಗಳಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸುವ ಕಾರ್ಯವನ್ನು ಮಾಡುತ್ತಿದೆ. ಅವುಗಳ ಕುರಿತು ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಈ ಕಲಾ ಶಾಲೆಯು ಕಲಾಶಿಕ್ಷಣವನ್ನು ಕೊಡುತ್ತಿರುವುದಲ್ಲದೇ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹದ ರೂಪದಲ್ಲಿ ಹಲವಾರು ಪದಕಗಳನ್ನು ನೀಡಿ ಗೌರವಿಸುತ್ತದೆ. ಈ ವಿದ್ಯಾಲಯದಲ್ಲಿ ಮೊದಲಿನಿಂದಲೂ ಹಲವಾರು ಸುಪ್ರಸಿದ್ಧ ಕಲಾವಿದರನ್ನು ಉಪನ್ಯಾಸಕರನ್ನಾಗಿ ನೇಮಿಸಿದ್ದರಿಂದ. ಇಲ್ಲಿಯ ವಿದ್ಯಾರ್ಥಿಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ಕಾರಣರಾಗಿದ್ದಾರೆ. ಇಂತಹ ಒಂದು ಕಲಾ ಶಾಲೆಯು ನಮ್ಮ ದಾವಣಗೆರೆ ಜಿಲ್ಲೆಯಲ್ಲಿದ್ದುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದ್ದು ಅದನ್ನು ಈ ಅಧ್ಯಾಯದಲ್ಲಿ ಈ ಸಂಸ್ಥೆಯ ಬಗ್ಗೆ ವಿವರಣೆಯನ್ನು ನೀಡಲಾಗಿದೆ.

ಐದನೇಯ ಅಧ್ಯಾಯದಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದ ಹಲವಾರು ಚಿತ್ರಕಲಾವಿದರುಗಳಿದ್ದಾರೆ. ಅವರುಗಳು ತಮ್ಮ ಚಿತ್ರಕಲಾಕೃತಿಗಳ ಮೂಲಕ ದೇಶ ವಿದೇಶಗಳಲ್ಲಿ ಪ್ರಖ್ಯಾತವಾಗಿರುತ್ತಾರೆ. ಯಾವುದೇ ಕಲಾವಿದನಿಗೆ ತಾನಿರುವ ಸ್ಥಳ ಮುಖ್ಯವಾಗಿರುತ್ತದೆ. ಬೇರೆ ಯಾವುದೇ ಕಾರಣಕ್ಕಾಗಿ ಅಥವಾ ಪರಿಸ್ಥಿತಿಗನುಗುಣವಾಗಿ ಬೇರೆ ಬೇರೆ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಚಿತ್ರರಚನೆಯ ಕಾಲದಲ್ಲಿ ಕಲಾವಿದನಿಗಿರುವ ಮಾನಸಿಕ ಭಾವನೆಗಳಂತೆ ಅವನ ಕಲಾ ಕೌಶಲ್ಯವೂ ಕೂಡ ಬದಲಾಗುತ್ತದೆ. ಒಂದೇ ಸ್ಥಳ ಎಲ್ಲ ಉದ್ದೇಶಗಳನ್ನು ಸಫಲಗೊಳಿಸುವಲ್ಲಿ ಸಹಾಯ ಆಗುವುದಿಲ್ಲ. ಕಲಾವಿದ ತಾನಾಗಿಯೇ ತನ್ನ ಮನಸ್ಸಿನಿಂದ ಭಾವನೆಗಳಿಗೆ ರೂಪ ಕೊಡಲು ಯೋಗ್ಯವೆನಿಸುವ ಶೈಲಿಯನ್ನು ತಂತ್ರಗಳನ್ನು ಬೇರ್ಪಡಿಸಿಕೊಂಡು ಗುರುತಿಸಿಕೊಳ್ಳುತ್ತಾನೆ. ಆದುದರಿಂದ ಚಿತ್ರಕಲಾವಿದನು ತನ್ನ ಕ್ಷೇತ್ರದಲ್ಲಿ ಹಲವಾರು ಬಗೆಯ ಕಲಾಕೃತಿಗಳನ್ನು ನೋಡುವಂತೆ ಅನೇಕ ಹೊಸ ಬಗೆಯ ಚಿತ್ರ ರಚನಾ

ಕೌಶಲ್ಯಗಳನ್ನು, ತಂತ್ರಗಳನ್ನು ಹಾಗೂ ಶೈಲಿಗಳನ್ನು ಅಳವಡಿಸಿಕೊಂಡಿದ್ದನ್ನು ಕಾಣುತ್ತೇವೆ. ಈ ಜಿಲ್ಲೆಯ ಚಿತ್ರ ಕಲಾವಿದರು ಕಾಲ-ಕಾಲಕ್ಕೆ ತಂತ್ರಗಳನ್ನು ಬದಲಾಯಿಸುತ್ತಾ, ಕಾಲದಿಂದ ಕಾಲಕ್ಕೆ ಬದಲಾಗುತ್ತಾ ನಾಡಿನೆಲ್ಲೆಡೆ ಹೆಸರುವಾಸಿಯಾಗಿದ್ದಾರೆ. ಈ ಅಧ್ಯಾಯದಲ್ಲಿ ಕಲಾವಿದರ ಪರಿಚಯಾವಳಿಯನ್ನು ಹೇಳುತ್ತಾ ಅವರ ಸಾಧನೆಯನ್ನು ಹಾಗೂ ಅವರು ಪಡೆದ ಪ್ರಶಸ್ತಿಗಳ ಬಗ್ಗೆ ವಿವರಣೆಯನ್ನು ಇಲ್ಲಿ ಮಾಡಲಾಗಿದೆ.

ಒಟ್ಟು ಅಧ್ಯಯನದ ಪ್ರಮುಖ ಫಲಿತಗಳು

೧) ಕರ್ನಾಟಕದ ಮೊಟ್ಟಮೊದಲು ಕಲಾ ಶಿಕ್ಷಣ ನೀಡುವ ಸರಕಾರಿ ಸಂಸ್ಥೆಯಾಗಿ ಈಗಿನ ಕುವೆಂಪು ವಿ. ವಿ. ಲಲಿತಕಲೆ ಮಹಾವಿದ್ಯಾಲಯ ಕಾರ್ಯನಿರ್ವಹಿಸುತ್ತದೆ.

೨) ಇಲ್ಲಿ ಜನಪದ ಚಿತ್ರಕಲೆ ಸಾಕಷ್ಟು ವೈವಿಧ್ಯತೆಯಿಂದ ಬೆಳೆದುಬಂದಿದೆ. ಇಲ್ಲಿ ತೊಗಲುಗೊಂಬೆ ಸೂತ್ರದ ಚಿತ್ರಕಲಾ ಪ್ರದರ್ಶನದ ಕಲಾವಿದರಿದ್ದಾರೆ.

೩) ಈ ಜಿಲ್ಲೆಯಲ್ಲಿ ರಾಜ್ಯ ರಾಷ್ಟ್ರಮಟ್ಟದ ಕಲಾ ಸಾಧನೆ ಮಾಡಿದ ಕಲಾವಿದರಿದ್ದಾರೆ. ಅನೇಕ ಪ್ರಶಸ್ತಿ ಪುರಸ್ಕಾರಗಳು ಈ ಜಿಲ್ಲೆಗೆ ಸಲ್ಲಿವೆ.

೪) ಅನೇಕ ಜನ ಕಲಾವಿದರು ಲಲಿತಕಲಾ ಅಕಾಡೆಮಿಯ ರಾಜ್ಯ ಪ್ರಶಸ್ತಿ ಮತ್ತು ಸದಸ್ಯರಾಗಿ ಕೆಲಸ ನಿರ್ವಹಿಸಿದ್ದಾರೆ.

೫) ಈ ಜಿಲ್ಲೆಯ ಕುವೆಂಪು ವಿ. ವಿ. ಲಲಿತಕಲಾ ಕಾಲೇಜು ಮೊದಲು ತಾಂತ್ರಿಕ ಶಿಕ್ಷಣ ಸಂಸ್ಥೆಯಡಿಯಲ್ಲಿತ್ತು. ಈಗ ಅದು ವಿ. ವಿ. ಯ ಆಡಳಿತದಲ್ಲಿ ಉನ್ನತ ಶಿಕ್ಷಣ ನೀಡುವ ಸಂಸ್ಥೆಯಾಗಿದೆ. ಇಲ್ಲಿ ಪದವಿ, ಸ್ನಾತಕೋತ್ತರ ಪದವಿಯನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ಇಲ್ಲಿಯ ಶಿಕ್ಷಕರು ಪಿ. ಹೆಚ್. ಡಿ. ಎಂ. ಫಿಲ್ ಪದವಿಗಳನ್ನು ಬೇರೆ ಬೇರೆ ವಿ. ವಿ. ಯಿಂದ ಪಡೆಯುತ್ತಿದ್ದಾರೆ.

೬) ರಾಜ್ಯ ರಾಷ್ಟ್ರ ಮಟ್ಟದ ಕಲಾಪ್ರದರ್ಶನಗಳು ವಿಚಾರ ಸಂಕಿರ್ಣ, ಕಲಾಕಮ್ಮಟಗಳು, ಪ್ರಾತಿಕ್ಷತೆಗಳು ಪ್ರತಿ ವರ್ಷ ಇಲ್ಲಿ ನಡೆಯುತ್ತ ಬಂದಿವೆ.

೭) ಚಿತ್ರಕಲೆಯ ಜೊತೆ ಜೊತೆಗೆ ವಾಣಿಜ್ಯ ಕಲೆಯ ಕಲಿಕೆಗೆ ಇಲ್ಲಿ ಹೆಚ್ಚಿನ ಪ್ರಾತಿನಿದ್ಯ ಸಂದಿದೆ.

೮) ದೇಶ ವಿದೇಶಗಳಲ್ಲಿ ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

೯) ರಾಜ್ಯ, ರಾಷ್ಟ್ರದ ಹಿರಿಯ ಕಲಾವಿದರ ಅನೇಕ ಅಮೂಲ್ಯವಾದ ಕಲಾಕೃತಿಗಳ ಸಂಗ್ರಹಗಳು ಕುವೆಂಪು ವಿ. ವಿ. ಕಾಲೇಜಿನಲ್ಲಿ ಇವೆ.

೧೦) ಜನಪದ ಚಿತ್ರಕಲೆ. ಶಿಷ್ಟಪದ ಚಿತ್ರಕಲೆ, ಜಿಲ್ಲೆಯಲ್ಲಿ ಅತ್ಯಂತ ಶ್ರೀಮಂತವಾಗಿ ಬೆಳೆದು ಬಂದಿವೆ.

೧೧) ಅನೇಕ ಕಲಾವಿದರು ಕಲಾ ಸಾಹಿತ್ಯ ಕೃಷಿಯಲ್ಲಿ ವಿಮಾರ್ಶೆಯಲ್ಲಿ ಸಾಕಷ್ಟು ರಾಜ್ಯ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಹೀಗೆ ಈ ಜಿಲ್ಲೆಯ ಕೊಡುಗೆ ತುಂಬ ಅನನ್ಯವಾಗಿದೆ.

– * –

ಅನುಬಂಧಗಳು


KARNATAKA
Osmanabad
Satara
MAHARASHTRA
Solapur
Bidar
Medak
Humnabad
Secunderabad
Hyderabad
Gulbarga
Bijapur
Kolhapur
Athni
Basavana Bagevadi
Yadgir
Kudala Sangama
Shorapur
Mahabubnagar
Ghataprabha
Gokak
Hatti
Raichur
Pattadkal
Aihole
Srisailam
Belgaum
Mudgal
Badami
Alampur
Mantralayam
Kurnool
Maski
Halasi
Kittur
Saundatti
Hubli
GOA
Dandeli
Hampi
Hospet
Bellary
Ahobilam
ANDHRA PRADESH
Magod
Kudligi
Karwar
Yana
Anantapur
Gokarna
Banvasi
Davangere
Gersoppa
Jog Falls
Chitradurga
Puttaparti
Murudeswar
Penukonda
Shimoga
Kollur
Bhadravathi
Lepakshi
Maravanthe
Mandagadde
Hosdurg
Horsley Hills
Agumbe
Kemmannagundi
Nandi Hills
Sringeri
Malpe
Manipal
Chikmagalur
Tiptur
Tumkur
Udupi
Halebid
Devarayanadurga
Moodabidri
Kolar
Belur
Shivaganga
Bangalore
Hassan
Dharmastala
Kolar Gold Fields
Mangalore
Channarayapatna
Yediyur
Ullal
Subrahmanya
Sravanabelagola
Bellur
Channapatna
Melkote
Madikeri
Hosur
Krishnagiri
Srirangapatana
Bekal
Arabian Sea
Talacauveri
Sivasamudram
TAMIL NADU
Mysore
Nagarahole
Talakad
B.R. Hills
Yercaud
Cannanore
Bandipur
Salem
Sultan's Battery

ದಾವಣಗೆರೆ ಜಿಲ್ಲೆ ನಕ್ಷೆ



ಗ್ರಂಥಋಣ

೧. **ಕಲಾ ಮನೋಜ್ಞಾನ** — ಎನ್. ವಿಶ್ವರೂಪಾಚಾರ
ಪ್ರ. ವಿಶ್ವರೂಪ ಪ್ರಕಾಶನ, ಬಿಲ್ಡಿಂಗ್ ನಂ: ೧೬೮,
೨ನೇ ಮಹಡಿ, ಕೆ.ಹೆಚ್.ಬಿ. ಕಾಲೋನಿ,
ಕೆಂಗೇರಿ ಉಪನಗರ, ಬೆಂಗಳೂರು.

೨. **ಕರ್ನಾಟಕ ಜನಪದ ಕಲೆಗಳ ಕೋಶ – ೧೯೯೬** — ಪ್ರಸಂ. ಡಾ. ಕರೀಗೌಡ ಬೀಚನಹಳ್ಳಿ
ನಿರ್ದೇಶಕರು, ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. **ಕರ್ನಾಟಕ ಲಂಬಾಣಿ ಜನಾಂಗ** — ಡಾ. ಪಿ.ಕೆ. ಖಂಡೋಬಾ
ಒಂದು ಸಾಂಸ್ಕೃತಿಕ ಅಧ್ಯಯನ,
ಪ್ರ. ದಿ॥ ತೇನಸಿಂಗ್ ರಾಠೋಡ್,
ಮೆಮೋರಿಯಲ್ ಟ್ರಸ್ಟ್, ಗುಲ್ಬರ್ಗಾ.

೪. **ಕಲಾ ಪ್ರಪಂಚ – ೧೯೭೮** — ಡಾ. ಶಿವರಾಮ ಕಾರಂತ್
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. **ದೃಶ್ಯಕಲೆಗಳ ಗುಣಗ್ರಹಣ** — ಚಿ.ಸು. ಕೃಷ್ಣ ಶೆಟ್ಟಿ
ಪ್ರ.ಕರ್ನಾಟಕ ಲಲಿತಕಲಾ ಅಕೆಡೆಮಿ, ಬೆಂಗಳೂರು.

೬. **ದಾವಣಗೆರೆ ಇದು ನಮ್ಮ ಜಿಲ್ಲೆ** — ಟಿ. ಗಿರಿಜ
ನಿಹಾರಿಕಾ ಪ್ರಕಾಶನ,
೪೯/೧ ಬಿ. ಅಕ್ಕಮಹಾದೇವಿ ರಸ್ತೆ,
ಪಿ.ಜೆ. ಬಡಾವಣೆ, ದಾವಣಗೆರೆ.

೭. **ನಿಜದ ನೆಲೆ – ೨೦೦೩** — ಸಂ. ಡಾ. ಎಸ್.ಸಿ. ಪಾಟೀಲ್, ಸತ್ಯನಂದ ಪತ್ರೋಟ
ಬಿ.ಕೆ. ಹಿರೇಮಠ, ಅಭಿನಂದನಾ ಗ್ರಂಥ,
ಪ್ರ. ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ,
ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ

೮. **ಬಾದಾಮಿ ಸಾಂಸ್ಕೃತಿಕ ಅಧ್ಯಯನ – ೨೦೦೦.** — ಡಾ. ಶೀಲಾಕಾಂತ ಪತ್ತಾರ
ಪ್ರಸಾರಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. **ಭಾರತೀಯ ಕಾವ್ಯ ಮಿಮಾಂಸೆ – ೧೯೯೫** — ಪ್ರೋ. ತೀ.ನಂ.ಶ್ರೀಕಂಠಯ್ಯ
ಕನ್ನಡ ಪುಸ್ತಕ ಪ್ರಾಧಿಕಾರ,
ಪಂಪ ಮಹಾಕವಿ ರಸ್ತೆ,
ಚಾಮರಾಜ ಪೇಟೆ, ಬೆಂಗಳೂರು.

೧೦. **ಶತಮಾನದ ದಾವಣಗೆರೆ – ೨೦೦೧** **ಸಂ. ಡಾ. ಎಂ.ಜಿ. ಈಶ್ವರಪ್ಪ**
ಬಿ. ಡೆಲ್ಲರಿಯಾ.
ಶ್ರೀ ಭಗವಾನ್ ಆದಿನಾಥ ಪ್ರತಿಷ್ಠಾನ (ರಿ),
ಎಸ್.ಎಸ್. ಲೇಔಟ್,
ಶಾಮನೂರು ರಸ್ತೆ, ದಾವಣಗೆರೆ.

೧೧. **ಶಿವರಾಮ ಕಾರಂತರ ಲೇಖನಗಳು** – ೧೯೯೪ **ಸಂ. ಮಾಲಿನಿ ಮಲ್ಯ**
ಪ್ರಸಾರಂಗ,
ಮಂಗಳೂರು ವಿಶ್ವವಿದ್ಯಾನಿಲಯ.

ಸಂಕ್ಷೇಪಗಳು

೧)	**ಪ್ರ. ಸಂ**	–	ಪ್ರಧಾನ ಸಂಪಾದಕರು
೨)	**ಕ.ಲ.ಕ.ಅ**	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೩)	**ಕ.ವಿ.ವಿ. ಹಂಪಿ**	–	ಕನ್ನಡ ವಿಶ್ವವಿದ್ಯಾಲಯ ಹಂಪಿ
೪)	**ಕಿ.ಪ್ರ**	–	ಕಿರು ಪ್ರಬಂಧ
೫)	**ಪು. ನಂ**	–	ಪುಟ ಸಂಖ್ಯೆ
೬)	**ಪ್ರ. ಲಿ**	–	ಪ್ರವೇಟ ಲಿಮಿಟೆಡ್
೭)	**ಗು. ವಿ. ವಿ.**	–	ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ
೮)	**ಮ. ಪ್ರ**	–	ಮಹಾ ಪ್ರಬಂಧ
೯)	**ಮೈ. ವಿ. ವಿ.**	–	ಮೈಸೂರು ವಿಶ್ವವಿದ್ಯಾಲಯ ಮೈಸೂರು
೧೦)	**ಸಂ**	–	ಸಂಪಾದಕ.

––– *** –––

